06 January 2025 Tuesday | SINCE 1957 | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 71 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಜೀವನದಲ್ಲಿ ಸೋತಿದ್ದೇವೆ ಎನ್ನುವುದಕ್ಕಿಂತ, ನಮ್ಮ ಗೆಲುವು ಸ್ವಲ್ಪ ಮಟ್ಟಿಗೆ ಮುಂದೂಡಿದೆ ಎಂದರೆ ಆತ್ಮವಿಶ್ವಾಸ ಹೆಚ್ಚಿದಂತೆ!

-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**


ಬದುಕು
ಬದಲಾಗಬೇಕಾದರೆ
ಬದುಕುವ ದಾರಿ
ಬದಲಾಗಬೇಕು....., ಎಲ್ಲಾ
ಇದ್ದಾಗ ನಮ್ಮವರು ಅಂತಾರೆ....,
ಏನು ಇಲ್ಲದಾಗ ಯಾರು ನೀ
ಅಂತಾರೆ...., ಇದೇ ಜೀವನ...."

ಮೈಲಾರ ಸಾವಿತ್ರಿಬಾಯಿ

# ಮೈಸೂರಲ್ಲಿ ಸಿದ್ದು–ವೇಣು ಚರ್ಚೆ!

## ಅಧಿಕಾರ ಹಸ್ತಾಂತರ ವಿವಾದದ ಹಿನ್ನೆಲೆ ಕಾವೇರಿದ ರಾಜಕೀಯ

**ಮೈಸೂರು:** ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ವಿಚಾರ ವಿವಾದದ ನಡುವೆಯೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಸೋಮವಾರ ಮೈಸೂರಿಗೆ ಆಗಮಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಇಲ್ಲಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಅವರು ಚರ್ಚೆ ನಡೆಸಿದರು.



ವಯನಾಡಿನಿಂದ ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯದಲ್ಲಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಮುಖ್ಯಮಂತ್ರಿ ಅವರನ್ನು ಭೇಟಿಯಾದರು. ಕೆಲಕಾಲ ಇಬ್ಬರೇ ಕುಳಿತು ಮಾತನಾಡಿದರು. ಕೋಗಿಲು ಸಂತ್ರಸ್ತರ ವಿವಾದದ ಹಿನ್ನೆಲೆಯಲ್ಲಿಯೂ ಚರ್ಚೆ ನಡೆದಿದೆ ಎನ್ನಲಾಗಿದೆ. ವೇಣುಗೋಪಾಲ್ ಮೊದಲಿನಿಂದಲೂ ಸಿದ್ದರಾಮಯ್ಯ ಪರವಾಗಿ ಇದ್ದಾರೆ. ಇದರಿಂದ ಡಿ.ಕೆ.ಶಿವಕುಮಾರ್ ಅವರಿಗೆ ಹಿನ್ನಡೆಯಾಗಿದೆ ಎನ್ನಲಾಗಿದೆ. ಹೀಗಾಗಿ ಈ ಭೇಟಿ ರಾಜಕೀಯ ವಲಯದಲ್ಲಿ ಕಾವೇರಿದ ಚರ್ಚೆಗೆ ಕಾರಣವಾಗಿದೆ.

ಆನಂತರ ಸಚಿವರಾದ ಡಾ.ಎಚ್.ಸಿ. ಮಹಾದೇವಪ್ಪ, ಸತೀಶ ಜಾರಕಿಹೊಳಿ, ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಜೊತೆಯಲ್ಲಿ ಹಾಜರಾದರು.



### ರಾಗಾ ಜೊತೆ ಚರ್ಚಿಸಿ ಸಂಪುಟ ವಿಸ್ತರಣೆ

**ಮೈಸೂರು:** ಸಚಿವ ಸಂಪುಟ ಪುನರ್ ರಚನೆ ಸಂಬಂಧ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ಜನವರಿಯಲ್ಲಿ ಚರ್ಚಿಸೋಣ ಎಂದು ರಾಹುಲ್ ಗಾಂಧಿ ಅವರು ಹೇಳಿದ್ದಾರೆ. ಅವರು ಸಮಯ ಕೊಟ್ಟಾಗ ದೆಹಲಿಗೆ ಹೋಗಿ ಭೇಟಿಯಾಗುತ್ತೇನೆ. ಹೈಕಮಾಂಡ್ ಜೊತೆ ಚರ್ಚಿಸಿದ ನಂತರವೇ ತೀರ್ಮಾನಿಸುತ್ತೇನೆ. ಸಂಕ್ರಾಂತಿ ಬಳಿಕ ಬಜೆಟ್ ಸಿದ್ಧತೆ ಆರಂಭಿಸುತ್ತೇನೆ ಎಂದು ಹೇಳಿದರು.

ಸರ್ಕಾರಕ್ಕೆ ಒಂದು ಸಾವಿರ ದಿನ ತುಂಬಿದ ಪ್ರಯುಕ್ತ ಸಾಧನಾ ಸಮಾವೇಶ ನಡೆಸುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಮಾವೇಶ ಮಾಡೋಣ ಎಂದು ಹೇಳಿದ್ದಾರೆ. ಅವರೇ ಅದನ್ನು ನೋಡಿಕೊಳ್ಳುತ್ತಾರೆ ಎಂದು ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದ ಸಮೀಪವೇ ಹುಲಿ ಕಾಣಿಸಿಕೊಂಡ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ಭಾಗದಲ್ಲಿ ಹುಲಿ ಸಂಖ್ಯೆ ಹೆಚ್ಚಳವಾಗಿದೆ. ಕಾಡಿನಿಂದ ನಾಡಿಗೆ ಅವು ಪುಟ 2ಕ್ಕೆ

### ಅರಸು ಜೊತೆ ಹೋಲಿಕೆ ಬೇಡ

**ಮೈಸೂರು:** ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರಿಗೂ ನನಗೂ ಹೋಲಿಕೆ ಇಲ್ಲ. ಆದರೆ, ಇಬ್ಬರೂ ಒಂದೇ ಜಿಲ್ಲೆಯಿಂದ ಬಂದವರು. ಮುಖ್ಯಮಂತ್ರಿಯಾಗಿ ಅರಸು ಹೆಚ್ಚು ದಿನ ಆಡಳಿತ ನಡೆಸಿದ ದಾಖಲೆಯನ್ನು ನಾಳೆ (ಜ.6ರಂದು) ನಾನು ಮುರಿಯುತ್ತಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನನ್ನ ದಾಖಲೆಯನ್ನು ಮತ್ತೆ ಯಾರೂ ಮುರಿಯುವುದಿಲ್ಲ ಎನ್ನುವುದಿಲ್ಲ. ಸಚಿನ್ ತೆಂಡೂಲ್ಕರ್ ದಾಖಲೆಯನ್ನು ವಿರಾಟ್ ಕೊಹ್ಲಿ ಮುರಿಯಲಿಲ್ಲವೇ? ಹಾಗೆಯೇ ಮುಂದೆ ಯಾರೋ ನನ್ನ ದಾಖಲೆ ಮುರಿಯಬಹುದು. ನನಗಿಂತ ಹೆಚ್ಚಿನ ಬಜೆಟ್ ಮಂಡಿಸಲೂಬಹುದು ಎಂದು ಹೇಳಿದರು.

ದೇವರಾಜ ಅರಸು ಕಾಲದ ರಾಜಕಾರಣವೇ ಬೇರೆ. ಈಗಿನದ್ದೇ ಬೇರೆ. ಎಲ್ಲಾ ಸ್ಥಿತಿಗತಿ ಬೇರೆ. ಅರಸು ಸಮುದಾಯ ಸಂಖ್ಯೆಯಲ್ಲಿ ಮಾತ್ರ ಸಣ್ಣದು. ಆದರೆ, ಸಾಮಾಜಿಕವಾಗಿ ಎತ್ತರದಲ್ಲಿತ್ತು. ಪುಟ 2ಕ್ಕೆ



## ಸಚಿವ ಈಶ್ವರ್ ಖಂಡ್ರೆ ಎದುರೇ ಕೈಕೈ ಮಿಲಾಯಿಸಿದ ಶಾಸಕರು!

**ಬೀದರ್:** ಅರಣ್ಯ ಭೂಮಿ ಒತ್ತುವರಿ ವಿಚಾರವಾಗಿ ಸಚಿವ ಈಶ್ವರ್ ಖಂಡ್ರೆ ಎದುರೇ ಹುಮನಾಬಾದ್ ಬಿಜೆಪಿ ಶಾಸಕ ಸಿದ್ದು ಪಾಟೀಲ್ ಹಾಗೂ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಭೀಮರಾವ್ ಪಾಟೀಲ್ ಕೈಕೈ ಮಿಲಾಯಿಸಿದ ಘಟನೆ ಬೀದರ್ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದಿದೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ನೇತೃತ್ವದಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ಬಿಜೆಪಿ ಶಾಸಕ ಸಿದ್ದು ಪಾಟೀಲ್ ಮಾತನಾಡಿ, ಹುಮನಾಬಾದ್‌ನಲ್ಲಿರುವ ಒಂದು ಎಕರೆ ಅರಣ್ಯ ಪ್ರದೇಶವನ್ನು ಎಂಎಲ್‌ಸಿ ಭೀಮರಾವ್ ಪಾಟೀಲ್ ಒತ್ತುವರಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಮಾಹಿತಿ ಕೊಡಿ ಎಂದು ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರಿಗೆ ಕೇಳಿದರು. ಈ ವೇಳೆ ಯಾವುದೇ ಜಾಗ ಒತ್ತುವರಿಯಾಗಿಲ್ಲ ಎಂದು ಎಂಎಲ್‌ಸಿ ಭೀಮರಾವ್ ಪಾಟೀಲ್ ಹಾಗೂ ಚಂದ್ರಶೇಖರ ಪಾಟೀಲ್ ಹೇಳಿದರು. ಆಗ ಸಿದ್ದು ಪಾಟೀಲ್ ಗರಂ ಆಗಿ ಮಾತನಾಡಿದರು.

ಭೀಮರಾವ್ ಪಾಟೀಲ್ ಮಾತನಾಡಿ, 2028ಕ್ಕೆ ನೋಡು, ಏನು ಮಾಡ್ತೇನೆ ಅಂತ ಎಂದರು. ಬಳಿಕ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು, ಕೈಕೈ ಮಿಲಾಯಿಸಿಕೊಂಡಿದ್ದಾರೆ. ಅಲ್ಲದೇ ಅವಾಚ್ಯ ಶಬ್ದಗಳಿಂದ ಬೈದಾಡಿಕೊಂಡಿದ್ದಾರೆ. ಪರಿಸ್ಥಿತಿ ಕೈಮೀರಿ ಹೋಗಿತ್ತು. ಈ ವೇಳೆ ಸ್ವತಃ ಸಚಿವ ಈಶ್ವರ್ ಖಂಡ್ರೆ ಅವರು ಮನವೊಲಿಸಲು ಹರಸಾಹಸಪಟ್ಟರು. ಬಳಿಕ ಸಭೆಯನ್ನು ಮುಂದೂಡಿದರು. ಆನಂತರ ಎಂಎಲ್‌ಸಿಗಳಾದ ಭೀಮರಾವ್ ಪಾಟೀಲ್ ಮತ್ತು ಚಂದ್ರಶೇಖರ ಪಾಟೀಲ್ ಸಭೆಯಿಂದ ಹೊರನಡೆದರು.

### ಸ್ಫೋಟದಿಂದ ಮೃತಪಟ್ಟವರ ಕುಟುಂಬಕ್ಕೆ 5 ಲಕ್ಷ ಪರಿಹಾರ





**ಮೈಸೂರು:** ಮೈಸೂರು ಅರಮನೆ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಅರಮನೆಯ ಮುಂಭಾಗ ಡಿ.25ರಂದು ಹೀಲಿಯಂ ಗ್ಯಾಸ್ ಬ್ಲಾಸ್ಟ್ ಆದ ಪರಿಣಾಮ ಒಟ್ಟು ಮೂವರು ಸಾವನ್ನಪ್ಪಿದ್ದರು. ಈ ಸ್ಫೋಟ ಪ್ರಕರಣವನ್ನು ಎನ್‌ಐಎ ತನಿಖೆ ನಡೆಸುತ್ತಿದೆ. ಈ ಹಿನ್ನೆಲೆ ಮೃತರ ಕುಟುಂಬಕ್ಕೆ ಮೈಸೂರಿನಲ್ಲಿ ಸೋಮವಾರ ಸಿದ್ದರಾಮಯ್ಯ ಪರಿಹಾರ ಘೋಷಣೆ ಮಾಡಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಳ್ಳಾರಿ ಗಲಾಟೆ ವಿಚಾರವನ್ನು ಸಿಐಡಿ ತನಿಖೆಗೆ ವಹಿಸುವ ಬಗ್ಗೆ ಗೃಹ ಸಚಿವ ಪರಮೇಶ್ವರ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು. ಈಗ ನಮ್ಮ ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಅವರ ಕಾರ್ಯದಕ್ಷತೆ ಬಗ್ಗೆ ನಮಗೆ ಅನುಮಾನಗಳಿಲ್ಲ. ತನಿಖೆ ನಡೆಸುವಲ್ಲಿ ಅವರು ನಿಪುಣರಿದ್ದಾರೆ. ಅವರು ವರದಿ ಕೊಟ್ಟ ನಂತರ ನೋಡೋಣ. ಪರಮೇಶ್ವರ್ ಜೊತೆ ಮಾತನಾಡುವೆ ಎಂದು ತಿಳಿಸಿದರು.

## ಮೈಸೂರು ವಿವಿ ಉಳಿವಿಗೆ ಚಿಂತನೆ

### ಪಿಂಚಣಿ ಕೊಡಲಾಗದ ದುಸ್ಥಿತಿ | ಸಚಿವ ಡಾ.ಸುಧಾಕರ್ ವಿಷಾದ

**ಮೈಸೂರು:** ರಾಜ್ಯದ ಮೊದಲ ವಿಶ್ವವಿದ್ಯಾಲಯ ಎಂಬ ಹಿರಿಮೆ ಪಾತ್ರವಾಗಿರುವ ಮೈಸೂರು ವಿಶ್ವವಿದ್ಯಾಲಯ ನಿವೃತ್ತರಿಗೆ ಪಿಂಚಣಿ ಕೊಡಲಾಗದಂತಹ ದುಸ್ಥಿತಿಗೆ ಬಂದಿರುವುದು ನೋವಿನ ಸಂಗತಿ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ವಿಷಾದ ವ್ಯಕ್ತಪಡಿಸಿದರು.

ವಿವಿ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ 106ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಮೈವಿವಿ ಪಿಂಚಣಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಉದ್ದೇಶಿಸಲಾಗಿದೆ. ಇದರೊಂದಿಗೆ ವಿವಿ ಉಳಿಸಲು ಸಹ ಸರ್ಕಾರ ಸಕಾರಾತ್ಮಕವಾಗಿ ಕ್ರಮ ತೆಗೆದುಕೊಳ್ಳಲಿದೆ ಎಂದು ಭರವಸೆ ನೀಡಿದರು.

ಶತಮಾನ ಪೂರೈಸಿರುವ ಮೈಸೂರು ವಿಶ್ವವಿದ್ಯಾನಿಲಯ ಹಾಸನ, ಮಂಡ್ಯ, ಚಾಮರಾಜನಗರದಲ್ಲಿ ಹೊಸ ವಿಶ್ವವಿದ್ಯಾಲಯ ಮಾಡುವ ಮೂಲಕ ಹರಿದುಹಂಚಿಹೋಗಿದೆ. ಪಾಶ್ಚಿಮಾತ್ಯ ಅನುಕರಣೆ, ವಿವಿ ಸ್ಥಿತಿಗತಿ, ಶುಲ್ಕ ಸಂಗ್ರಹ ಸೇರಿದಂತೆ ವಿವಿಧ ಸಂಗತಿಗಳನ್ನು ಯಾವುದನ್ನೂ ಗಮನಿಸದೆ, ಕೇವಲ ಪ್ರಚಾರ ಮತ್ತು ಭಾವನೆ ಆಧಾರದಲ್ಲಿ ಹೊಸ ವಿಶ್ವವಿದ್ಯಾಲಯ ರಚನೆ ಮಾಡಲಾಗಿದೆ ಎಂದು




ಹಿಂದಿನ ಬಿಜೆಪಿ ಸರ್ಕಾರದ ಕ್ರಮದ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು.

150 ಕೋಟಿ ರೂ. ಪಿಂಚಣಿ ವೆಚ್ಚದ ಹೊರೆ ಮೈವಿವಿ ಮೇಲೆ ಬಿದ್ದಿದೆ. ಸಂಯೋಜಿತ ಕಾಲೇಜುಗಳ ಸಂಖ್ಯೆ 100ಕ್ಕಿಂತ ಕೆಳಗಿಳಿದಿದೆ. ದೇಶದಲ್ಲೇ ದೊಡ್ಡ ವಿವಿಯಾಗಿರುವ ಬೆಂಗಳೂರು ವಿವಿಯನ್ನು ನಾಲ್ಕು ಪುಟ 2ಕ್ಕೆ

## ಎರಡು ಬಾರಿ ಶವ ಪರೀಕ್ಷೆ ಏಕೆ?

### ಬಳ್ಳಾರಿ ಗಲಭೆ ತನಿಖೆ ಅನುಮಾನಾಸ್ಪದ: ಎಚ್.ಡಿ.ಕುಮಾರಸ್ವಾಮಿ

**ಬೆಂಗಳೂರು:** ಬಳ್ಳಾರಿ ಗಲಾಟೆ ಸಂದರ್ಭ ಕೊಲೆಯಾದ ಕಾಂಗ್ರೆಸ್ ಕಾರ್ಯಕರ್ತನ ಶವವನ್ನು ಸರ್ಕಾರ ಎರಡು ಬಾರಿ ಪರೀಕ್ಷೆ ಮಾಡಿರುವುದು ಏಕೆ ಎಂದು ಪ್ರಶ್ನಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪ್ರಕರಣದ ಕುರಿತು ಅನುಮಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಬಳ್ಳಾರಿಯ ಗಲಾಟೆ ಪೂರ್ವ ನಿಯೋಜಿತ ಕೃತ್ಯವಾಗಿದೆ. ಮೃತನ ಶವ ಪರೀಕ್ಷೆಯನ್ನು ಎರಡು ಬಾರಿ ಮಾಡಲಾಗಿದೆ. ಎರಡನೇ ಬಾರಿ ಯಾರ ಒತ್ತಡಕ್ಕೆ ಶವ ಪರೀಕ್ಷೆ ಮಾಡಿದ್ದಾರೆ? ಶವ ಪರೀಕ್ಷೆ ಮಾಡಲು ಅನುಮತಿ ಕೊಟ್ಟವರು ಯಾರು? ಯಾರ ಒತ್ತಡಕ್ಕೆ ಎರಡನೇ ಬಾರಿ ಶವ ಪರೀಕ್ಷೆ ಮಾಡಿದ್ದಾರೆ? ಈ ಪ್ರಕರಣದ ತನಿಖೆಯ ಬಗ್ಗೆ ಅನುಮಾನವಿದ್ದು ಸಿಬಿಐಗೆ ನೀಡಬೇಕು ಎಂದು ಆಗ್ರಹಿಸಿದರು.

ಶಾಸಕ ಜನಾರ್ದನ ರೆಡ್ಡಿ ಮೇಲೆ ಆರೋಪ ಹೊರಿಸುವ ಸಲುವಾಗಿಯೇ



#### ಎಎಸ್‌ಪಿ, ಐಜಿ ಲೋಪ ಇಲ್ಲವೇ?

ಎಸ್‌ಪಿ ಕರ್ತವ್ಯ ಲೋಪ ಮಾಡಿದ್ದಾರೆ ಎಂದು ಸರ್ಕಾರ ಹೇಳಿದೆ. ಹಾಗಾದ್ರೆ ಅಡಿಷನ್ ಎಸ್ಪಿ, ಐಜಿ ಕರ್ತವ್ಯ ಲೋಪ ಮಾಡಿಲ್ಲವೇ? ಚಿನ್ನಸ್ವಾಮಿಯಲ್ಲಿ ಕಾಲ್ತುಳಿತ ಪ್ರಕರಣ ಸಂಭವಿಸಿದಾಗ ಹಲವರನ್ನು ಅಮಾನತು ಮಾಡಿದ್ದೀರಿ. ಇಲ್ಲಿ ಕೇವಲ ಎಸ್‌ಪಿ ಮೇಲೆ ಮಾತ್ರ ಕ್ರಮ ಯಾಕೆ ಎಂದು ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಜನಾರ್ದನ ರೆಡ್ಡಿ ಬಳ್ಳಾರಿಗೆ ಬಂದ ಮೇಲೆ ಗಲಾಟೆ ಆಗಿದೆ ಅಂತ ಡಿಸಿಎಂ ಹೇಳಿದ್ದಾರೆ. ಅದಕ್ಕೆ ಪರಮೇಶ್ವರ್ ಹಿಮ್ಮೇಳ ಹಾಕಿದ್ದಾರೆ. ಒಂದೂವರೆ ವರ್ಷದಿಂದ ರೆಡ್ಡಿ ಸುಪ್ರೀಂಕೋರ್ಟ್ ಅನುಮತಿ ಪಡೆದು ಬಳ್ಳಾರಿಗೆ ಬರುತ್ತಿದ್ದಾರೆ. ಎಷ್ಟು ಗಲಾಟೆ ಆಗಿದೆ ಅಂಕಿ ಅಂಶ ಕೊಡಿ ಅಂತ ಆಗ್ರಹಿಸಿದರು. ಪುಟ 2ಕ್ಕೆ

## ಬಿಜೆಪಿ ಅವಧಿಯಲ್ಲಿ ಒತ್ತುವರಿ: ಸಚಿವ ಕೃಷ್ಣ ಬೈರೇಗೌಡ ಟೀಕೆ

**ಬೆಂಗಳೂರು:** ಕೋಗಿಲು ಬಡಾವಣೆಯಲ್ಲಿ ಒತ್ತುವರಿಯಾಗಿರುವುದು 2021ರಲ್ಲಿ. ಆಗ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಆಡಳಿತದಲ್ಲಿ ಇತ್ತು. ಇದನ್ನು ಬಿಜೆಪಿ ಪ್ರಾಯೋಜಿತ ಒತ್ತುವರಿ ಎಂದು ಕರೆಯಬೇಕೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.



ಕಂದಾಯಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಒತ್ತುವರಿಗೆ ಬೆಂಬಲ ನೀಡಿದ್ದರೆ ತೆರವಿಗೆ ಮುಂದಾಗುತ್ತಿರಲಿಲ್ಲ. ಎರಡು ತಿಂಗಳ ಹಿಂದೆಯೇ ಕೋಗಿಲು ಬಡಾವಣೆಯಲ್ಲಿ 10 ಅನಧಿಕೃತ ಮನೆ ತೆರವು ಮಾಡಿಸಿ ಇತರರೂ ಖಾಲಿ ಮಾಡುವಂತೆ ಸೂಚಿಸಲಾಗಿತ್ತು. ಆದರೂ ತೆರವಿಗೆ ಮುಂದಾಗಿದ್ದರಿಂದ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ಪುಟ 2ಕ್ಕೆ

## ಕನ್ನಡ ಮಾತನಾಡಲು ನಿರ್ಬಂಧ: ಹಾಸ್ಟೆಲ್ ವಾರ್ಡನ್ ಬಂಧನ

**ಬೆಂಗಳೂರು:** ಕನ್ನಡ ಮಾತನಾಡುವುದನ್ನು ನಿನ್ನ ಮನೆಯಲ್ಲಿ ಇಟ್ಕೊ. ಇಲ್ಲಿ ಹಿಂದಿ ಮಾತನಾಡು ಎಂದು ಬೆಂಗಳೂರಿನ ಕಾಲೇಜು ಒಂದರ ಹಾಸ್ಟೆಲ್‌ನಲ್ಲಿ ವಾರ್ಡನ್ ಒಬ್ಬರು ವಿದ್ಯಾರ್ಥಿಗಳಿಗೆ ನೀಡಿರುವ ಎಚ್ಚರಿಕೆ ವಿಡಿಯೊ ವೈರಲ್ ಆಗಿದೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಎಎಂಸಿ ಕಾಲೇಜಿನಲ್ಲಿ ಕನ್ನಡದ ವಿದ್ಯಾರ್ಥಿಗೆ ಕನ್ನಡ ಮಾತನಾಡದಂತೆ ಬೆದರಿಕೆ ಹಾಕಲಾಗಿದೆ. ಕನ್ನಡದ ಬಗ್ಗೆ ಕೇವಲವಾಗಿ ಮಾತನಾಡಿರುವ ವಾರ್ಡನ್ ಅನ್ನು ಪೊಲೀಸರು ಬಂಧಿಸಿದ್ದಾರೆ. ವಾರ್ಡನ್ ಸುರೇಶ್ ಎಂಬಾತನನ್ನು ಕಾಲೇಜು ಆಡಳಿತ ಮಂಡಳಿ ಕೆಲಸದಿಂದ ವಜಾ ಮಾಡಿದೆ.

ಹಿಂದಿ, ತಮಿಳು, ತೆಲುಗು, ಮಲಯಾಳಂ ಸೇರಿ ನಾನಾ ಭಾಷಿಕರಿಗೆ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡುರುವ ಬೆಂಗಳೂರಿನಲ್ಲಿ ಆಗಾಗ ಕನ್ನಡದ ಮೇಲೆ ದಬ್ಬಾಳಿಕೆ ನಡೆಯುತ್ತಿರುವುದನ್ನು ನೋಡಿದ್ದೇವೆ. ಸದ್ಯ ಕನ್ನಡ ನಿಮ್ಮ ಮನೆಯಲ್ಲಿ ಇಟ್ಕೊ, ಇಲ್ಲಿ ಹಿಂದಿ ಮಾತನಾಡು ಎಂದು ಆತ ಎಚ್ಚರಿಕೆ ನೀಡಿದ್ದಾನೆ.

ವಾರ್ಡನ್ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ವಿದ್ಯಾರ್ಥಿ, ನಾನು ಯಾಕೆ ಕನ್ನಡದಲ್ಲಿ ಮಾತನಾಡಬಾರದು? ಎಂದು ಪ್ರಶ್ನಿಸಿದ್ದಾರೆ. ಅದಕ್ಕೆ ವಾರ್ಡನ್ ಇಲ್ಲಿ ಯಾವ ಭಾಷೆ ಮಾತನಾಡ ಬೇಕು ಎಂಬುದನ್ನು ನಾನು ನಿರ್ಧಾರ ಮಾಡು ತ್ತೇನೆ. ಇದು ನಿಮ್ಮ ಮನೆಯಲ್ಲ, ಕಾಲೇಜು ಎಂದು ಕನ್ನಡದ ವಿದ್ಯಾರ್ಥಿಗಳಿಗೆ ಕನ್ನಡ ಮಾತನಾಡದಂತೆ ಸೂಚನೆ ನೀಡಿದ್ದಾರೆ.

## ನಾನು ಸಿಎಂ ರೇಸ್‌ನಲ್ಲಿಲ್ಲ: ಸಚಿವ ಸತೀಶ್ ಜಾರಕಿಹೊಳಿ

**ಮೈಸೂರು:** ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ಆಯ್ಕೆಯಾಗಿರುವುದು 5 ವರ್ಷಕ್ಕೆ. ಇದನ್ನು ಹಲವು ಬಾರಿ ಹೇಳಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಇದನ್ನೇ ಹೇಳಿದ್ದಾರೆ. ಮತ್ತೆ ಮತ್ತೆ ಈ ಪ್ರಶ್ನೆ ಮತ್ತು ಚರ್ಚೆ ಬೇಡ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಸತೀಶ್ ಜಾರಕಿಹೊಳಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಮತ್ತೆ ಬ್ಯಾಟಿಂಗ್ ಮಾಡಿದರು. ಬಜೆಟ್ ಬಳಿಕ ನಾಯಕತ್ವ ಬದಲಾವಣೆಯಾಗುತ್ತದೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ನಾನು ಸಿಎಂ ರೇಸ್‌ನಲ್ಲಿಯೂ ಇಲ್ಲ ಎಂದು ತಿಳಿಸಿದರು.

ಸಿದ್ದರಾಮಯ್ಯ ಐದು ವರ್ಷಕ್ಕೆ ಸಿಎಂ ಆಗಿ ಆಯ್ಕೆ ಪುಟ 2ಕ್ಕೆ

## ಕಲ್ಲು ತೂರಿದವರು ಚಿಕ್ಕ ಹುಡುಗರು!

### ಮಾಲಾಧಾರಿಗಳ ಮೇಲೆ ಕಲ್ಲೆಸೆದವರ ಬಂಧನ | ಸಚಿವ ಪರಮೇಶ್ವರ್

**ಬೆಂಗಳೂರು:** ಓಂ ಶಕ್ತಿ ಮಾಲಾಧಾರಿಗಳ ಮೇಲೆ ನಾಲ್ಕೈದು ಚಿಕ್ಕ ಹುಡುಗರು ಕಲ್ಲೆಸಿದಿದ್ದಾರೆ. ಅವರನ್ನೆಲ್ಲ ಬಂಧಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಜೆ ಆರ್ ನಗರದ ವಿಎಸ್ ಗಾರ್ಡನ್‌ನ ಓಂ ಶಕ್ತಿ



ದೇವಸ್ಥಾನದ ಬಳಿ ಮಾಲಾಧಾರಿಗಳ ಮೇಲೆ ನಡೆದ ಕಲ್ಲು ತೂರಾಟದ ಬಗ್ಗೆ ಮಾಹಿತಿ ನೀಡಿದರು. 15–17 ವರ್ಷದವರು ಕಲ್ಲೆಸೆದಿದ್ದಾರೆ. ಎಲ್ಲರನ್ನೂ ಈಗಾಗಲೇ ಬಂಧಿಸಲಾಗಿದೆ. ಇದು ಬಾಲಾಪರಾಧದ ವ್ಯಾಪ್ತಿಗೆ ಬರುತ್ತದೆ. ಮುಂದಿನ ಕ್ರಮ ಕೈಗೊಳ್ಳುತ್ತಾರೆ ಎಂದರು.

### ರಥಯಾತ್ರೆ ಮೇಲೆ ಕಲ್ಲು

ಬೆಂಗಳೂರು ನಗರದ ವಿಎಸ್ ಗಾರ್ಡನ್‌ನ ಓಂಶಕ್ತಿ ದೇವಸ್ಥಾನದ ಬಳಿ ಭಾನುವಾರ ರಾತ್ರಿ ದೇವಿಯ ತೇರು ಎಳೆಯುತ್ತಿರುವ ವೇಳೆ ತೇರಿನ ಮೇಲೆ ಹಾಗೂ ಮಾಲಾಧಾರಿಗಳ ಮೇಲೆ ಕೆಲವು ಕಿಡಿಗೇಡಿಗಳು ಕಲ್ಲು ಎಸೆದಿದ್ದರು.ಮೂವರಿಗೆ ಕಲ್ಲು ಬಿದ್ದು ಗಾಯಗೊಂಡಿದ್ದಾರೆ. ಕಲ್ಲು ಎಸೆದು ಕಿಡಿಗೇಡಿಗಳು ಪರಾರಿಯಾಗಿದ್ದರು. ಮಗು, ಯುವತಿ, ವಯಸ್ಕ ಮಹಿಳೆಯ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದರು. ಕಿಡಿಗೇಡಿಗಳನ್ನು ಬಂಧಿಸುವಂತೆ ಬಿಗಿಪಟ್ಟು ಹಿಡಿಯಲಾಗಿತ್ತು. ತೇರಿನ ಮೇಲೆ ಅನ್ಯ ಕೋಮಿನವರಿಂದ ಕಲ್ಲು ಎಸೆದ ಆರೋಪವಿದೆ. ಓಂ ಶಕ್ತಿ ಮಾಲೆ ಧರಿಸಿದ್ದ ಮಗುವಿಗೂ ಕಲ್ಲೇಟು ಬಿದ್ದಿದೆ. ಘಟನೆ ಬಳಿಕ ಓಂ ಶಕ್ತಿ ಮಾಲಾಧಾರಿಗಳು ಜೆಜೆಆರ್ ನಗರ ಠಾಣೆಯ ಮುಂದೆ ಜಮಾಯಿಸಿ ಕ್ರಮಕ್ಕಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು.

## ರಾಜ್ಯದಲ್ಲಿ ಹುಲಿ ಗಣತಿ ಆರಂಭ

### ಹುಲಿ ಸಂಖ್ಯೆಯಲ್ಲಿ ದೇಶದಲ್ಲಿಯೇ ರಾಜ್ಯಕ್ಕೆ 2ನೇ ಸ್ಥಾನ | ಈಶ್ವರ್ ಖಂಡ್ರೆ

**ಬೀದರ್:** ರಾಜ್ಯದ ಎಲ್ಲಾ ಅರಣ್ಯ ಪ್ರದೇಶಗಳಲ್ಲಿ ಹುಲಿ ಗಣತಿ ಪ್ರಕ್ರಿಯೆ ಸೋಮವಾರ ಪ್ರಾರಂಭವಾಗಿದೆ. ಕಾಳಿ, ಭದ್ರಾ, ನಾಗರಹೊಳೆ, ಬಂಡೀಪುರ ಮತ್ತು ಬಿಳಿಗಿರಿರಂಗ ಸ್ವಾಮಿ ಹುಲಿ ಮೀಸಲು ಅರಣ್ಯ ಸೇರಿದಂತೆ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ನಡೆಯಲಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.



ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ರಾಷ್ಟ್ರದಲ್ಲಿ ಹುಲಿ ಗಣತಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ಇದು ಆರನೇ ಗಣತಿ. ಹಿಂದಿನ ಗಣತಿಗಳನ್ನು 2006, 2010, 2014, 2018 ಮತ್ತು 2022ರಲ್ಲಿ ನಡೆಸಲಾಗಿತ್ತು. ಕರ್ನಾಟಕದಲ್ಲಿ ಈ ಹಿಂದೆ ಸುಮಾರು 563 ಹುಲಿಗಳಿವೆ ಎಂದು ಅಂದಾಜಿಸಲಾಗಿತ್ತು. ಹುಲಿ ಸಂಖ್ಯೆಯಲ್ಲಿ ರಾಜ್ಯ



ದೇಶದಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿತ್ತು ಎಂದು ಅವರು ತಿಳಿಸಿದರು.

ರಾಜ್ಯದ ಪ್ರತಿಯೊಂದು ಅರಣ್ಯ ವ್ಯಾಪ್ತಿಯ 38 ಅರಣ್ಯ ವಿಭಾಗಗಳ ಗಸ್ತು ಪ್ರದೇಶಗಳಲ್ಲಿ ಗಣತಿ ಮಾಡಲಾಗುವುದು. ಈ ಉದ್ದೇಶಕ್ಕಾಗಿ, ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ ಐದು ಹುಲಿ ಮೀಸಲು ಪ್ರದೇಶಗಳ ಮುಂಚೂಣಿ ಸಿಬ್ಬಂದಿಗೆ ಪ್ರತ್ಯೇಕವಾಗಿ ಮತ್ತು 13 ಪುಟ 2ಕ್ಕೆ

#### ಜ.15ರಿಂದ 2ನೇ ಹಂತದ ಗಣತಿ

ಜನವರಿ 15ರಿಂದ 17ರವರೆಗೆ 14 ಅರಣ್ಯ ವಿಭಾಗಗಳಲ್ಲಿ ಎರಡನೇ ಹಂತದ ಗಣತಿ ನಡೆಸಲಾಗುತ್ತದೆ. ಈ ಸಮಯದಲ್ಲಿ ತಂಡಗಳು ಜಿಂಕೆ, ಸಾಂಬಾರ್, ಗೌರ್ ಮತ್ತು ಕಾಡುಕೋಣಗಳಂತಹ ಸಸ್ಯಾಹಾರಿ ಪ್ರಾಣಿಗಳ ನೇರ ವೀಕ್ಷಣೆಯ ಆಧಾರದ ಮೇಲೆ ಡೇಟಾವನ್ನು ಸಂಗ್ರಹಿಸಲಿವೆ. ಕ್ಯಾಮೆರಾ ಅಳವಡಿಸಲು ಸ್ಥಳಗಳನ್ನು ನಿರ್ಧರಿಸಲು ಈ ಡೇಟಾ ಸಹಾಯ ಮಾಡುತ್ತದೆ. ಹುಲಿ ಯೋಜನಾ ನಿರ್ದೇಶಕ ರಮೇಶ್ ಕುಮಾರ್ ಅವರನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಸಂಪೂರ್ಣ ಗಣತಿ ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತಾರೆ ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

**ಮೊದಲ ಪುಟದಿಂದ**

## ಚರ್ಚಿಸಿ ಸಂಪುಟ ವಿಸ್ತರಣೆ

ಬರುತ್ತಿವೆ. ಕೂಡಲೇ ಸೆರೆ ಹಿಡಿಯುವಂತೆ ಸೂಚಿಸಿದ್ದೇನೆ. ಮೈಸೂರು ಭಾಗದಲ್ಲಿನ ಹುಲಿಗಳನ್ನು ಹಿಡಿದು ಬೇರೆ ಕಾಡಿಗೆ ಬಿಡಲು ತಿಳಿಸಿದ್ದೇನೆ ಎಂದು ತಿಳಿಸಿದರು. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶಾಸಕರಾದ ಡಿ.ರವಿಶಂಕರ್, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ ಇದ್ದರು.

## ಮೈಸೂರು ವಿವಿ ಉಳಿವಿಗೆ ಚಿಂತನೆ

ಭಾಗವಾಗಿ ವಿಭಜನೆ ಮಾಡಿದರೂ ಅಲ್ಲಿ ಇಂತಹ ದುಸ್ಥಿತಿ ನಿರ್ಮಾಣವಾಗಿಲ್ಲ. ಇಲ್ಲಿ ಏಕೆ ಹೀಗೆ ಆಯಿತು? ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ಮೈವಿವಿ ಇರಬೇಕಿತ್ತು. ಆದರೆ, ಇದು ಸಾಧ್ಯವಾಗಿಲ್ಲ. ಈ ಕುರಿತು ಇದೀಗ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು. ಆರ್ಥಿಕ ಸಂಕಷ್ಟಕ್ಕೆ ಮೈಸೂರು ವಿವಿಯೊಂದಿಗೆ ಧಾರವಾಡ ಕರ್ನಾಟಕ ವಿವಿ, ಮಂಗಳೂರು ವಿವಿ, ಇದೀಗ ಶಿವಮೊಗ್ಗದ ಕುವೆಂಪು ವಿವಿ ಸಹ ಸೇರ್ಪಡೆಗೊಂಡಿವೆ. ಸಾರ್ವಜನಿಕ ವಿವಿಗಳು ಯಾರಿಗೆ ಸೇವೆ ಕೊಡುತ್ತಿವೆ ಎಂಬುದನ್ನು ಮೊದಲು ಅರ್ಥ ಮಾಡಿಕೊಂಡಿದ್ದರೆ ಹೀಗೆ ಆಗುತ್ತಿರಲಿಲ್ಲ ಎಂದು ಕಿಡಿಕಾರಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿ, ರಾಜ್ಯಪಾಲರಾದ ಥಾವರ್ ಚಂದ್ ಗೆಲ್ಲೋಟ್ ಪದವಿ ಪ್ರಧಾನ ಮಾಡಿದರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥ್ ಘಟಿಕೋತ್ಸವ ಭಾಷಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ, ಪ್ರೊ.ಎನ್.ನಾಗರಾಜು ಹಾಜರಿದ್ದರು.

## ರಾಜ್ಯದಲ್ಲಿ ಹುಲಿ ಗಣತಿ ಆರಂಭ

ಅರಣ್ಯ ವೃತ್ತಗಳ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ತಲಾ ಮೂವರು ಸದಸ್ಯರನ್ನು ಒಳಗೊಂಡ ತಂಡಗಳು ಜನವರಿ 5ರಿಂದ ಮೂರು ದಿನಗಳ ಕಾಲ ರಾಜ್ಯಾದ್ಯಂತ ಅರಣ್ಯ ಪ್ರದೇಶಗಳಲ್ಲಿ ಪ್ರತಿದಿನ ಸುಮಾರು ಐದು ಕಿ.ಮೀ. ಗಸ್ತು ತಿರುಗಲಿದ್ದಾರೆ. ಹುಲಿಗಳು, ಚಿರತೆಗಳು ಮತ್ತು ಇತರ ಮಾಂಸಾಹಾರಿ ಪ್ರಾಣಿಗಳ ಹಾಗೂ ಆನೆಗಳ ಪಗ್‌ಮಾರ್ಕ್ಗಳು, ಸ್ಕ್ಯಾಟ್ ಮತ್ತು ನೇರ ವೀಕ್ಷಣೆಯಂತಹ ಡೇಟಾವನ್ನು ಸಂಗ್ರಹಿಸಲಿವೆ. ಐದು ಹುಲಿ ಮೀಸಲು ಪ್ರದೇಶಗಳಲ್ಲಿ ಒಟ್ಟು 2,230 ಕ್ಯಾಮೆರಾಗಳು ಲಭ್ಯವಿದೆ. ಅವೆಲ್ಲದರಲ್ಲೂ ಸಮೀಕ್ಷೆಗಳು ಈಗಾಗಲೇ ಪ್ರಾರಂಭವಾಗಿವೆ. ನಾಗರಹೊಳೆ ಹುಲಿ ಮೀಸಲು ಪ್ರದೇಶದಲ್ಲಿ 600 ಕ್ಯಾಮೆರಾ ಆಪ್‌ಗಳಿವೆ. ಬಂಡೀಪುರದಲ್ಲಿ 550, ಬಿಆರ್‌ಟಿ 300, ಭದ್ರಾದಲ್ಲಿ 330 ಮತ್ತು ಕಾಳಿ ಹುಲಿ ಮೀಸಲು ಪ್ರದೇಶದಲ್ಲಿ 450 ಕ್ಯಾಮೆರಾ ಆಪ್‌ಗಳಿವೆ ಎಂದು ಅವರು ಹೇಳಿದರು.

## ಎಎಸ್‌ಪಿ, ಐಜಿ ಲೋಪ ಇಲ್ಲವೇ?

ಜನಾರ್ದನ ರೆಡ್ಡಿ ಅವರು ಭದ್ರತೆ ಕೊಡಿ ಎಂದಿದ್ದಕ್ಕೆ ಅಮೆರಿಕ, ಇರಾನ್‌ನಿಂದ ಭದ್ರತೆ ತನ್ನಿ ಅಂತ ಡಿ.ಕೆ.ಶಿವಕುಮಾರ್ ಹೇಳ್ತಾರೆ. ನಿಮ್ಮ ಯೋಗ್ಯತೆಗೆ ಭದ್ರತೆ ಕೊಡಲು ಆಗದೇ ಇದ್ರೆ ಟ್ರಂಪ್ ಗೆ ಸರ್ಕಾರ ಬಿಟ್ಟು ಕೊಡಿ ಅಂತ ವಾಗ್ದಾಳಿ ನಡೆಸಿದರು. ಸಿದ್ದರಾಮಯ್ಯ ಅವರೇ, ಬಳ್ಳಾರಿವರೆಗೆ ಪಾದಯಾತ್ರೆ ಮಾಡಿದ್ದೀರಿ. ಆದರೆ ಈಗ ಜನರೇ ನಿಮ್ಮನ್ನ ಸರ್ವನಾಶ ಮಾಡುತ್ತಾರೆ. ಈ ರಾಜ್ಯದ ಕೊನೆಯ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯ. ಇದು ಕಾಂಗ್ರೆಸ್ ಕೊನೆ ಆಡಳಿತ ಬರೆದಿಟ್ಟುಕೊಳ್ಳಿ. ಅಧಿಕಾರಿಗಳನ್ನು ಗುಲಾಮರಾಗಿ ಇಟ್ಟುಕೊಂಡಿದ್ದಕ್ಕೆ ಪ್ರಾಯಶ್ಚಿತ್ತ ಅನುಭವಿಸುತ್ತೀರಿ ಎಂದು ಗುಡುಗಿದರು.

## ನಾನು ಸಿಎಂ ರೇಸ್‌ನಲ್ಲಿಲ್ಲ: ಸಚಿವ ಸತೀಶ್ ಜಾರಕಿಹೊಳಿ

ಆಗಿರುವುದು. ಈ ಬಗ್ಗೆ ನಾವು ಹಲವು ಬಾರಿ ಹೇಳಿಕೆ ನೀಡಿದ್ದೇವೆ. ಅಧಿಕಾರ ಹಂಚಿಕೆ ನಿರ್ಧಾರ ಮಾಡುವ ಸ್ಥಾನದಲ್ಲೂ ನಾನು ಇಲ್ಲ ಎಂದರು. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಈಗ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆಯೂ ಚರ್ಚೆ ಮಾಡಿಲ್ಲ. ಸಮಯ ಬಂದಾಗ ನೋಡೋಣ ಎಂದು ಹೇಳಿದರು.

## ಬಿಜೆಪಿ ಅವಧಿಯಲ್ಲಿ ಒತ್ತುವರಿ: ಸಚಿವ ಕೃಷ್ಣ ಬೈರೇಗೌಡ ಟೀಕೆ

ಅಲ್ಲಿ ನೆಲೆಸಿರುವ ನಿವಾಸಿಗಳ ಸಮೀಕ್ಷೆ ಮುಗಿದಿದೆ. ವರದಿ ಬಂದ ನಂತರ ಪರ್ಯಾಯ ವ್ಯವಸ್ಥೆಯನ್ನೂ ಅರ್ಹರಿಗೆ ಮಾಡಲಾಗುತ್ತದೆ. ಮುಖ್ಯಮಂತ್ರಿ ಅವರು ಮಾನವೀಯ ನೆಲೆಯಲ್ಲಿ ಇದನ್ನು ನೋಡಿದ್ದಾರೆ. ಇದರಲ್ಲಿ ರಾಜಕೀಯ ಮಾಡುವುದು ಏನಿದೆ. ಕೆಲವರು ನನ್ನ ವಿರುದ್ಧ ಕೆಲವು ಕಾರಣಗಳಿಗೆ ಇದನ್ನು ರಾಜಕೀಯ ಅಸ್ತ್ರ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲ ಜಗ್ಗದೇ ನನ್ನ ಒಳ್ಳೆಯ ಕೆಲಸ ಮುಂದುವರೆಸುವೆ ಎಂದು ತಿಳಿಸಿದರು. ಇನ್ಫೋಸಿಸ್ ಗೆ ನೀಡಿದ ಭೂಮಿ ಮಾರಾಟ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಬೆಂಗಳೂರು ಜಿಲ್ಲಾಧಿಕಾರಿ ಅವರಿಗೆ ಸೂಚನೆ ನೀಡಲಾಗಿದೆ ಎಂದರು.

## ಎರಡು ಬಾರಿ ಶವ ಪರೀಕ್ಷೆ ಏಕೆ?

ಎರಡನೇ ಬಾರಿ ಶವ ಪರೀಕ್ಷೆ ಮಾಡಲಾಗಿದೆ. ಬಳ್ಳಾರಿಯಲ್ಲಿ ಗುಂಡಿನ ದಾಳಿ ನಡೆದಿದ್ದರೂ ಈ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ರಾಜ್ಯದಲ್ಲಿ ಸರ್ಕಾರ ಬದುಕಿದೆಯಾ? ಸತ್ತು ಹೋಗಿದೆಯಾ ಎಂದು ಕಿಡಿಕಾರಿದರು. ದೇವರಾಜ ಅರಸು ದಾಖಲೆಯ ಮುರಿದು ಸಿದ್ದರಾ ಮಯ್ಯ ಸಾಧನೆ ಮಾಡಲು ಹೊರಟಿದ್ದಾರೆ. ಅವರ ಸಾಧನೆಗೆ ಮಣ್ಣು ಹೊಯ್ದುಕೊಳ್ಳಬೇಕು. ಸತೀಶ್‌ರೆಡ್ಡಿ ಗನ್‌ನಿಂದ ಫೈಯರ್ ಆಗಿದೆ ಅಂತ ಸಿಎಂ ಅವರೇ ಹೇಳಿದ್ದಾರೆ. ಆತನನ್ನು ಬಂಧನ ಮಾಡದೇ ಸತೀಶ್ ರೆಡ್ಡಿಗೆ ಸರ್ಕಾರವೇ ರಕ್ಷಣೆ ಕೊಡುತ್ತಿದೆ. ಡಿಸಿಎಂ ಡಿಕೆಶಿವಕುಮಾರ್ ಭರತ್ ರೆಡ್ಡಿ ಬೆನ್ನಿಗೆ ನಿಲ್ಲುತ್ತೇವೆ ಎಂದು ಹೇಳಿರುವಾಗ ಯಾವ ರೀತಿ ತನಿಖೆ ಮಾಡ್ತಾರೆ ಎಂದು ಎಚ್‌ಡಿಕೆ ಪ್ರಶ್ನಿಸಿದರು.

## ಅರಸು ಜೊತೆ ಹೋಲಿಕೆ ಬೇಡ

ನಾನು ಸಾಮಾಜಿಕವಾಗಿ ತಳ ಸಮುದಾಯದಿಂದ ಬಂದವನು. ನಾನು ದಾಖಲೆ ಮಾಡುವುದು ಬಿಡಿ. ಮಂತ್ರಿ ಅಥವಾ ಮುಖ್ಯಮಂತ್ರಿ ಆಗುತ್ತೇನೆ ಎಂದುಕೊಂಡಿರಲೇ ಇಲ್ಲ. ಶಾಸಕನಾಗಬೇಕು ಎಂದುಕೊಂಡಿದ್ದೆ. ಆ ಕಾಲದಲ್ಲಿ ಜನರು ದುಡ್ಡು ಹಾಕಿ ನನ್ನನ್ನು ಶಾಸಕನನ್ನಾಗಿ ಮಾಡಿದ್ದರು. ಅದೇ ಜನರ ಆಶೀರ್ವಾದದಿಂದ ಇಲ್ಲಿಯವರೆಗೂ ಬೆಳೆದಿದ್ದೇನೆ ಎಂದು ಸಿಎಂ ಹೇಳಿದರು.

# ಮೂವರಿಗೆ ಮೈವಿವಿ ಗೌರವ ಡಾಕ್ಟರೇಟ್

## ಮೈಸೂರು ವಿವಿ ಉಳಿವಿಗೆ ಚಿಂತನೆ ಎಂದ ಸುಧಾಕರ್ | 106ನೇ ಘಟಿಕೋತ್ಸವ

ಮೈಸೂರು: ಶತಮಾನ ಪೂರೈಸಿರುವ ಮೈಸೂರು ವಿಶ್ವವಿದ್ಯಾನಿಲಯದ 106 ಘಟಿಕೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. 30,966 ಅಭ್ಯರ್ಥಿಗಳು ಪದವಿ ಪಡೆದು ಸಂಭ್ರಮಿಸಿದರು.

ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ ಘಟಿಕೋತ್ಸವದಲ್ಲಿ ಹಿರಿಯ ಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ. ಶಾಮ್ ಭಟ್ ಹಾಗೂ ಶಿಕ್ಷಣ ತಜ್ಞ ಮತ್ತು ಪರಿಸರವಾದಿ ಪಿ. ಜುಂಚಂದ್ರ ರಾಜು ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ 106ನೇ ಘಟಿಕೋತ್ಸವದಲ್ಲಿ ಈ ಸಲವೂ ಚಿನ್ನದ ಪದಕ ಬೇಟೆಯಲ್ಲಿ ವನಿತೆಯರು ಪಾರುಪತ್ಯ ಮೆರೆದರು. ಪ್ರತಿ ವರ್ಷವೂ ಮಹಿಳೆಯರು ಚಿನ್ನದ ಪದಕ ನಗದು ಬಹುಮಾನ ಗಳಿಸಿ ಮೇಲುಗೈ ಸಾಧಿಸುತ್ತಿದ್ದರು. ಅದು ಈ ವರ್ಷವೂ ಮುಂದುವರಿಯಿತು. ಒಟ್ಟು 30,966 ಅಭ್ಯರ್ಥಿಗಳು ವಿವಿಧ ವಿಷಯಗಳಲ್ಲಿ ಪದವಿ ಪ್ರಧಾನವಾಯಿತು. ಅವರಲ್ಲಿ 18, 612 ಮಹಿಳೆಯರು ಮತ್ತು 12,354 ಪುರುಷರು.

452 ಅಭ್ಯರ್ಥಿಗಳಿಗೆ ಪಿಎಚ್.ಡಿ ಪದವಿ ಪಡೆದರು. 449 ಪದಕಗಳು ಮತ್ತು 197 ಬಹುಮಾನಗಳನ್ನು 213 ಅಭ್ಯರ್ಥಿಗಳು ಪಡೆದುಕೊಂಡರು. ಇದರಲ್ಲಿ 161 ಮಹಿಳೆಯರದ್ದೆ ಪಾರುಪತ್ಯ ಸಾಧಿಸಿದರು. 5,796 ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಮತ್ತು 24, 721 ಸ್ನಾತಕ ಪದವಿ ಪಡೆದರು.



## ಅಪಾರ ಸಂತಸ ತಂದ ಪದವಿ: ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಸಂತಸ

ಮೈಸೂರು: ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ದೊರಕಿದ್ದು ಅಪಾರ ಸಂತಸ ತಂದಿದೆ ಎಂದು ಹಿರಿಯ ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಸಂತಸ ಹಂಚಿಕೊಂಡರು.

ವಿವಿಯ ಕ್ರಾಫರ್ಡ್ ಭವನದಲ್ಲಿ ಗೌರವ ಡಾಕ್ಟರೇಟ್ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಚಿಕ್ಕಂದಿನಲ್ಲಿ ಮೈಸೂರಿನಲ್ಲೇ ಆಟವಾಡುತ್ತಾ ಬೆಳೆದವನು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ತನ್ನದೇ ಆದ ಘನತೆ ಇದೆ. ನಾನು ಆಡುತ್ತಾ ಬೆಳೆದ ಊರಿನ ಪ್ರತಿಷ್ಠಿತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ ದೊರಕಿದ್ದು ತುಂಬಾ ಸಂತಸ ತಂದಿದೆ. ಈ ಮೂಲಕ ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ ಎಂದು ಹೇಳಿದರು. ಕ್ನನಡ ಚಿತ್ರರಂಗದಲ್ಲಿ ನಡೆಯುತ್ತಿರುವ ಸ್ಟಾರ್‌ವಾರ್ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ತಮಿಳು, ತೆಲುಗು ಚಿತ್ರರಂಗಗಳಿಗೆ ಹೋಲಿಸಿದರೆ ಕನ್ನಡ ಚಿತ್ರರಂಗ ಚಿಕ್ಕದು. ತುಂಬಾ ಪೈಪೋಟಿಯನ್ನು ಎದುರಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಸ್ಟಾರ್ ವಾರ್ ನಡೆಯುತ್ತಿರುವುದು ಸರಿಯಲ್ಲ. ಕನ್ನಡ ಚಿತ್ರಗಳಿಗೆ ಥಿಯೇಟರ್‌ಗಳು ಕೂಡ ಸರಿಯಾಗಿ ಸಿಗುತ್ತಿಲ್ಲ. ಹಲವಾರು ಚಿತ್ರಮಂದಿರಗಳು ನೆಲಸಮವಾಗಿವೆ. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಮುನ್ನಡೆಯಬೇಕಿದೆ ಎಂದರು.

ಮೈಸೂರಿನಲ್ಲಿ ಫಿಲ್ಮ್ ಸಿಟಿ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಅವರು, ಮೈಸೂರಿನವರೇ ಆಗಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದರಿಂದ ಚಿತ್ರನಗರಿ ನಿರ್ಮಾಣ ಕಾರ್ಯ ಬೇಗನೆ ಆರಂಭವಾಗುವ ನಿರೀಕ್ಷೆ ಇತ್ತು. ಆದರೆ, ಚಿತ್ರನಗರಿ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿದ್ದು, ವಿಳಂಬವಾಗಿ ನೆನೆಗುದಿಗೆ ಬಿದ್ದಿದೆ. ಸಿದ್ದರಾಮಯ್ಯನವರ ಅಧಿಕಾರದ ಅವಧಿಯಲ್ಲಿ ಮಾತ್ರ ಚಿತ್ರ ನಗರಿ ನಿರ್ಮಾಣ ಸಾಧ್ಯವಿದೆ. ಹಾಗಾಗಿ ಆದಷ್ಟು ಬೇಗನೆ ಚಿತ್ರ ನಗರಿ ನಿರ್ಮಾಣ ಕಾರ್ಯ ಆರಂಭವಾಗಬೇಕು. ಚಿತ್ರನಗರಿ ನಿರ್ಮಾಣವಾದರೆ ಕನ್ನಡ ಚಿತ್ರರಂಗಕ್ಕೆ ತುಂಬಾ ಪ್ರಯೋಜನ ಆಗಲಿದೆ ಎಂದು ಹೇಳಿದರು.

## ಚಿನ್ನದ ಹುಡುಗಿ ಅದಿತಿ

ಮೈಸೂರು ವಿವಿ ರಾಸಾಯನ ಶಾಸ್ತ್ರ ವಿಷಯದಲ್ಲಿ ಎನ್.ಅದಿತಿ 24 ಚಿನ್ನದ ಪದಕ ಗಳಿಸಿದ್ದು, 7 ನಗದು ಬಹುಮಾನ ಪಡೆದು ವಿವಿಗೆ ಚಿನ್ನದ ಹುಡುಗಿಯಾಗಿ ಹೊರ ಹೊಮ್ಮಿದ್ದಾರೆ. ಮೂಲತಹ ಅಕೋಲದ ಇವರ ತಂದೆ ನಿರಂಜನ ನಾಯಕ, ತಾಯಿ ಶುಭಲಕ್ಷ್ಮೀ ಇಬ್ಬರೂ ಶಿಕ್ಷಕರು. ಹೀಗಾಗಿ ಸಹಜವಾಗಿ ಮನೆಯಲ್ಲಿ ಶಿಕ್ಷಣದ ವಾತಾವರಣ ಹೆಚ್ಚಿತ್ತು. ಚಿನ್ನದ ಪದಕ ಸಿಗುತ್ತದೆ ಎಂದು ಓದುತ್ತಿರಲಿಲ್ಲ. ಮನೆಯಲ್ಲಿ ಓದಿದಕ್ಕಿಂತ ತರಗತಿಯಲ್ಲಿ ಅರ್ಥ ಮಾಡಿಕೊಂಡು ಪಾಠ ಕೇಳುತ್ತಿದ್ದೆ. ಮಂಗಳೂರು ವಿವಿ ಮತ್ತು ಮೈಸೂರು ವಿವಿಗೆ ಅರ್ಜಿ ಹಾಕಿದ್ದೆ. ಎರಡರಲ್ಲೂ ಸೀಟು ಸಿಕ್ಕಿತು. ಕೊನೆಗೆ ಮೈಸೂರು ವಿವಿಯನ್ನೇ ಆಯ್ಕೆ ಮಾಡಿಕೊಂಡೆ. ಕೆಮಿಕಲ್ ಬಯೋಲಾಜಿಯಲ್ಲಿ ಪಿಎಚ್.ಡಿ ಮಾಡುವ ಆಸೆಯಿದ್ದು, ಭವಿಷ್ಯದಲ್ಲಿ ಪ್ರಾಧ್ಯಾಪಕಿ ಆಗುವ ಗುರಿ ಇಟ್ಟುಕೊಂಡಿದ್ದೇನೆ ಎಂದು ಎನ್.ಅದಿತಿ ಸಂತಸ ವ್ಯಕ್ತಪಡಿಸಿದರು.

## ಮಂಡ್ಯದ ಹುಡುಗಿಗೆ 16 ಚಿನ್ನ

ಸಕ್ಕರೆ ನಾಡು ಮಂಡ್ಯದ ಎಸ್.ಎಲ್.ಪ್ರೇರಣಾ ಎಂ–ಟೆಕ್ ಅರ್ಬನ್ ಅಂಡ್ ರಿಜಿನಲ್ ಪ್ಲಾನಿಂಗ್ ವಿಷಯದಲ್ಲಿ 16 ಚಿನ್ನದ ಪಡೆದುಕೊಂಡಿದ್ದಾರೆ. ಐಕೆವಿಯಲ್ಲಿ ಅಕಾಡೆಮಿಕ್ ಡೀನ್ ಆಗಿರುವ ತಂದೆ ಮತ್ತು ಪ್ರೌಢಶಾಲೆ ಮುಖ್ಯ ಶಿಕ್ಷಕರಾಗಿರುವ ತಾಯಿ ಕೆಲಸ ಮಾಡುತ್ತಿದ್ದಾರೆ. ನನಗೆ ಚಿನ್ನದ ಪದಕಗಳು ಬರುತ್ತವೆ ಎಂಬ ನಿರೀಕ್ಷೆ ಇರಲಿಲ್ಲ. ಓದುವುದಷ್ಟೇ ನನ್ನ ಗುರಿಯಾಗಿತ್ತು. ಕಷ್ಟಪಡದೆ ಇಷ್ಟಪಟ್ಟು ಖುಷಿಯಿಂದ ಅಭ್ಯಾಸ ಮಾಡಿದರೆ ಫಲಿತಾಂಶ ಉತ್ತಮವಾಗಿರುತ್ತದೆ. ಪಿಎಚ್.ಡಿ ಪದವಿ ಪಡೆದು ಶಿಕ್ಷಕ ವೃತ್ತಿಯಲ್ಲಿ ತೊಡಗಿಕೊಳ್ಳಬೇಕು ಎಂಬ ಗುರಿ ಇದೆ ಎಂದು ಪ್ರೇರಣಾ ಸಂತಸ ಹಂಚಿಕೊಂಡರು.

## ಬಸ್ ನಿರ್ವಾಹಕನ ಮಗಳಿಗೆ 6 ಪದಕ

ಕೆಎಸ್‌ಆರ್‌ಟಿ ಬಸ್ ನಿರ್ವಾಹಕನ ಮಗಳೊಬ್ಬಳು ವಿಜ್ಞಾನ ವಿಭಾಗದಲ್ಲಿ 6 ಚಿನ್ನದ ಪದಕ ಮತ್ತು 5 ನಗದು ಬಹುಮಾನ ಪಡೆದು ಮಾದರಿಯಾಗಿದ್ದಾರೆ. ಮೈಸೂರಿನ ರಾಜ್ ಕುಮಾರ್ ರಸ್ತೆಯಲ್ಲಿರುವ ನಿವಾಸಿಯಾದ ಬಸ್ ನಿರ್ವಾಹಕ ತಂದೆ ಮತ್ತು ಪ್ರೌಢಶಾಲಾ ಶಿಕ್ಷಕಿಯಾದ ದಂಪತಿಯ ಪುತ್ರಿ ಹರ್ಮಂಟಿಯ 6 ಪದಕಗಳಿಗೆ ಕೊರಳೊಡ್ಡಿದ್ದಾರೆ. ಯುಪಿಎಸ್‌ಸಿ ತೇರ್ಗಡೆಯಾಗಬೇಕು ಎಂಬ ಗುರಿ ಹೊಂದಿರುವ ನಾನು ದ್ವಿತೀಯ ಪಿಯುಸಿಯಲ್ಲಿ ಶೇ.95ರಷ್ಟು ಅಂಕ ಪಡೆದು ಬಿಎಸ್‌ಸ್ಸಿ ಪದವಿ ಶಿಕ್ಷಣ ಪ್ರವೇಶಕ್ಕೆ ಪಡೆದೆ. ಇದೀಗ 11 ಪದಕಗಳನ್ನು ಪಡೆದುಕೊಂಡಿದ್ದೇನೆ. ಈಗಾಗಲೇ ಗುರಿಯೆಡೆಗೆ ನಡೆಯುವ ನಿಟ್ಟಿನಲ್ಲಿ ಓದಲು ಆರಂಭಿಸಿದ್ದೇನೆ. ಮುಂದಿನ ವರ್ಷದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯುವೆ ಎಂದು ತಮ್ಮ ಸಂಭ್ರಮ ಹಂಚಿಕೊಂಡರು.



## ಕುರಿಗಾಹಿ ಮಗನ ಚಿನ್ನದ ಸಾಧನೆ

ಧನಿಕರಷ್ಟೇ ಸಾಧನೆ ಮಾಡಬಹುದು ಎಂಬುದನ್ನು ಸಾಮಾನ್ಯ ಕುರಿಗಾಹಿ ಕೃಷಿಕ ತಂದೆ–ತಾಯಿಯ ಮಗನೊಬ್ಬ ಸುಳ್ಳಾಗಿಸಿದ್ದಾನೆ. ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಎಂ.ಎಂ ಕನ್ನಡ ವಿಭಾಗದಲ್ಲಿ 13 ಚಿನ್ನದ ಪದಕ 4 ನಗದು ಪಡೆದು ಹೆತ್ತವರಿಗೆ ಕೀರ್ತಿ ತಂದಿದ್ದಾನೆ. ಮೂಲತಃ ಕೊಪ್ಪಳ ಜಿಲ್ಲೆಯ ಕುರಿಗಾಹಿ ಸಣ್ಣಪ್ಪ–ಶಾಂತಮ್ಮ ದಂಪತಿಗಳ ಮೂರನೇ ಪುತ್ರ ಚಂದ್ರಶೇಖರ್ ವಿಶೇಷ ಸಾಧನೆ ಮಾಡಿರುವ ವಿದ್ಯಾರ್ಥಿ. ಬಿ.ಇಡಿ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದ ನಾನು ಸಾಹಿತ್ಯದ ಮೇಲೆ ಒಲವು ಮೂಡಿ ಸ್ನಾತಕೋತ್ತರ ಪದವಿಗೆ ಮಾನಸ ಗಂಗೋತ್ರಿಯ ಸೇರ್ಪಡೆಯಾದೆ. ಕಥೆ–ಕಾದಂಬರಿಗಳ ವಿಮರ್ಶೆ ಭಾಗದಿಂದ ನನಗೆ ಹೆಚ್ಚಿನ ಆಸಕ್ತಿ. ನನಗೆ ಐಎಎಸ್–ಐಪಿಎಸ್ ಮಾಡಬೇಕೆಂಬ ದೊಡ್ಡ ಕನಸುಗಳು ಇಲ್ಲ. ನನ್ನ ತಂದೆ–ತಾಯಿಗೆ ಮೂರೊತ್ತು ಅನ್ನ ಹಾಕಬೇಕು ಎಂಬುದಷ್ಟೆ ನನ್ನ ಗುರಿ. ಹೀಗಾಗಿ ಭವಿಷ್ಯದಲ್ಲಿ ಪಿಎಚ್.ಡಿ ಪದವಿ ಪಡೆದು ಸಹಾಯಕ ಪ್ರಾಧ್ಯಾಪಕರಾಗಿ ಅಥವಾ ಶಿಕ್ಷಕನ್ನಾಗುವ ಗುರಿ ಹೊಂದಿದ್ದೇನೆ. ನನ್ನ ಅಣ್ಣ ಮತ್ತು ಅಕ್ಕ ವಿದ್ಯಾಭ್ಯಾಸ ಮೊಟಕುಗೊಳಿಸಿದ್ದರು. ಆದರೆ, ನನಗೆ ಓದುವ ಆಸಕ್ತಿ ಬೆಳೆದು ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆಯುವಂತೆ ಮಾಡಿದೆ ಎಂದು ಸಂತಸ ಹಂಚಿಕೊಂಡರು. ನಮ್ಮೂರಿನಲ್ಲಿ ಇರುವ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದೇವೆ. ನನ್ನ ಮಗಳು ಓದುತ್ತಿದಳು. ಆದರೆ, ಕಾರಣಾಂತರಗಳಿಂದ ಆಕೆಯ ವಿದ್ಯಾಭ್ಯಾಸ ಮೊಟಕುಗೊಂಡಿತು. ಇದೀಗ ನಮ್ಮ ಕಿರಿಯ ಪುತ್ರ ಓದಿ ಸಾಧನೆ ಮಾಡಿರುವುದು ನಮಗೆ ಸಂತಸ ತಂದಿದೆ ಎಂದು ಚಂದ್ರಶೇಖರ್ ತಂದೆ ಸಣ್ಣಪ್ಪ ತಾಯಿ ಶಾಂತಮ್ಮ ಭಾವುಕವಾಗಿ ಸಣ್ಣ ಧ್ವನಿಯಲ್ಲಿ ಹೇಳಿದರು.


ನಾನು ಮೈಸೂರು ತಾಲೂಕಿನ ಮಾರಶೆಟ್ಟಗಳ್ಳಿ ಗ್ರಾಮದವಳು. ನಮ್ಮದು ಕೃಷಿಕ ಕುಟುಂಬ. ನಮ್ಮ ತಂದೆ ಮಹೇಶ್, ತಾಯಿ ಮಂಜುಳ ಕೃಷಿ ಮಾಡುತ್ತಾರೆ. ನನ್ನ ಅಧ್ಯಾಪಕರ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಗಿದೆ. ನನ್ನ ತಂದೆ ತಾಯಿಯೂ ಸಾಕಷ್ಟು ಪ್ರೋತ್ಸಾಹ ನೀಡಿ ಬೆಂಬಲವಾಗಿ ನಿಂತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಒಲವಿದ್ದು, ಅಧ್ಯಾಪಕಿಯಾಗಬೇಕೆಂಬ ಆಸೆ ಇದೆ.

**ಸುಮಲತಾ.ಎಂ**
7 ಚಿನ್ನದ ಪದಕ ವಿಜೇತೆ

## ಸಫಾರಿ ತೆರೆದರೆ ಉಗ್ರ ಹೋರಾಟ

ಗುಂಡ್ಲುಪೇಟೆ: ಬಂಡೀಪುರದಲ್ಲಿ ಸಫಾರಿಯನ್ನು ಪುನರ್ ಆರಂಬಿಸುವ ಸಂಬಂಧ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವರು ಹಾಗೂ ಅಧಿಕಾರಿಗಳನ್ನು ಒಳಗೊಂಡಂತೆ ಸಭೆ ನಡೆಸಲಾಗಿದ್ದು ಹಂತ ಹಂತವಾಗಿ ಸಫಾರಿಯನ್ನು ಪುನರ್ ಆರಂಭಿಸುವಂತೆ ಸಭೆಯಲ್ಲಿ ಸೂಚನೆ ನೀಡಿರುವ ಕ್ರಮವನ್ನು ರೈತಸಂಘ ತೀವ್ರವಾಗಿ ಖಂಡಿಸುತ್ತದೆ. ಸಫಾರಿ ತೆರೆದರೆ ಸಫಾರಿ ಕೇಂದ್ರದ ಬಳಿಯೇ ಉಗ್ರ ಹೋರಾಟ ನಡೆಸಲಾಗುವುದು ಎಂದು ರೈತಸಂಘದ ತಾಲ್ಲೂಕು ಅಧ್ಯಕ್ಷ ದಿಲೀಪ್ ಹಂಗಳ ಎಚ್ಚರಿಕೆ ನೀಡಿದ್ದಾರೆ.

ಗುಂಡ್ಲುಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾ ಡುತ್ತಿದ್ದ ಅವರು ಸಫಾರಿ ಆರಂಬಿಸುವ ಸಂಬಂಧ ತಜ್ಞರ ಸಮಿತಿ ನೇಮಕ ಮಾಡುತ್ತಾರೆ ಅದರೆ ಅವರು ಸುತ್ತಮುತ್ತಲಿನ ಗ್ರಾಮದ ರೈತರ ಬಳಿ ಮಾಹಿತಿ ಪಡೆಯದೇ, ಈ ತಜ್ಞರ ತಂಡ ರೆಸಾರ್ಟ್ ಹಾಗೂ ಅಲ್ಲಿ ಕೆಲಸ ಮಾಡುವ 30 ಮಂದಿಯ ಹಿತಕ್ಕೋಸ್ಕರ ಸಫಾರಿ ತೆರೆಯುವುದು ಸರಿಯಲ್ಲ.ಮೊದಲು ಜಾನುವಾರುಗಳನ್ನು ಕಾಡಿಗೆ ಮೇಯಲು ಬಿಡಲು ಅವಕಾಶ ವಿತ್ತು ನಾಡಿನತ್ತ ಯಾವುದೇ ಕಾಡು ಪ್ರಾಣಿಗಳು ಬರುತ್ತಿರಲಿಲ್ಲ, ಇವರ ಸ್ವಾರ್ಥ ಕ್ಕೆ



ಅದನ್ನು ನಿಲ್ಲಿಸಿದರು. ನಾಡಿನತ್ತ ಕಾಡುಪ್ರಾಣಿಗಳು ಬರುತ್ತಿವೆ, ಹಂಗಳ ಒಂದೇ ಗ್ರಾಮದಲ್ಲಿ ಹತ್ತು ಸಾವಿರ ನಾಡ ಹಸುಗಳಿದ್ದವು ಆದರೆ ಅರಣ್ಯ ಇಲಾಖೆ ಕಾಡಿಗೆ ಬಿಡದಂತೆ ನಿಷೇಧ ಮಾಡಿದ ನಂತರ ಎಲ್ಲವನ್ನು ಜನ ಮಾರಿದರು ನಾಡ ಹಸುಗಳ ಸಂತತಿಯೇ ಇಲ್ಲದಂತೆ ಮಾಡಿದರು. ಸಫಾರಿ ಯಿಂದ, ರೆಸಾರ್ಟ್ ಗಳಿಂದ ರೈತರಿಗೆ ಜನಸಾಮಾನ್ಯರಿಗೆ ಯಾವುದೇ ಅನುಕೂಲವಿಲ್ಲ ಹಾಗಾಗಿ ಸಪಾರಿ ತೆರೆದು ರೈತರ ಜೀವದ ಜೊತೆ ಸರ್ಕಾರ ಚೆಲ್ಲಾಟವಾಡಿದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ರೈತಸಂಘದ ತಾಲ್ಲೂಕು ಅಧ್ಯಕ್ಷ ದಿಲೀಪ್, ಮಲ್ಲಯ್ಯನಪುರ ಶಿವಣ್ಣ, ಸ್ವಾಮಿ, ಮಹದೇವ ಶೆಟ್ಟಿ, ಪ್ರವೀಣ್, ಶಿವಕುಮಾರ್, ಮಹದೇವಪ್ಪ, ಬಸವೇಶ್,ಸುರೇಶ್, ಸೋಮೇಶ್, ಪ್ರಕಾಶ್, ಮತ್ತಿತರರು ಹಾಜರಿದ್ದರು.

## ಇಂದು 2025–26ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ

ಮೈಸೂರು:– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025–26 ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಜನವರಿ 06 ರಂದು ಬೆಳಗ್ಗೆ 9:30 ಗಂಟೆಗೆ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ(ಪ್ರೌಢಶಾಲಾ ವಿಭಾಗ) ಆಯೋಜಿಸಲಾಗಿದೆ.

ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ ಅವರ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ. ಹೆಚ್.ಸಿ ಮಹದೇವಪ್ಪ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಕೆ. ಹರೀಶ್ ಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರಾದ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಕುಮಾರ್.ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷರಾದ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ಅವರು ಗೌರವ ಉಪಸ್ಥಿತರಿರಲಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದರಾದ ಸುನೀಲ್ ಬೋಸ್ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪ ಅಮರನಾಥ್, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಅವರು ಆಗಮಿಸಲಿದ್ದಾರೆ. ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಆರ್ ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ರವಿಶಂಕರ್ ಡಿ., ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಟಿ.ಎಸ್. ಶ್ರೀವತ್ಸ, ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಡಿ. ಹರೀಶ್ ಗೌಡ, ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಭಾಗವಹಿಸಲಿದ್ದಾರೆ.

**ಪಟೇಲ್ ಆಂಗ್ಲ ಶಾಲಾ ವಾರ್ಷಿಕೋತ್ಸವ**

# ಪೋಷಕರು ಮಕ್ಕಳನ್ನು ಮೊಬೈಲ್ ಗೀಳಿನಿಂದ ದೂರ ಇರಿಸಿ

ರಾಮನಗರ: ತಾಯಂದಿರು ಮಗುವಿನ ಮೊದಲ ಗುರು. ಮಕ್ಕಳು ಮೊಬೈಲ್, ಟಿವಿಯಿಂದ ದೂರ ಇದ್ದು, ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂಬುದನ್ನು ತಿಳಿಸಿಕೊಡಬೇಕು ಎಂದು ಬೆಂಗಳೂರು ಶಿಕ್ಷಣ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಕರೆ ನೀಡಿದರು.

ನಗರದ ಆರ್.ವಿ.ಸಿ.ಎಸ್ ಕನ್ವೆಷನ್ ಹಾಲ್‌ನಲ್ಲಿ ಪಟೇಲ್ ಆಂಗ್ಲ ಶಾಲೆ ಆಯೋಜಿಸಿದ್ದ 22ನೇ ಶಾಲಾ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣದ ಮಹತ್ವವನ್ನು ಪೋಷಕರು ತಮ್ಮ ಮಕ್ಕಳಿಗೆ ತಿಳಿಸಿಕೊಡಬೇಕು. ಶಿಕ್ಷಕರು ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಸದಾ ಶ್ರಮಿಸಬೇಕು ಎಂದ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯ ಒಟ್ಟಾರೆ ಫಲಿತಾಂಶದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಬಹುಮುಖ್ಯವಾಗಿದೆ ಎಂದರು.

ಪಟೇಲ್ ಆಂಗ್ಲ ಶಾಲೆಯ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದ ಅವರು 22 ವರ್ಷಗಳಿಂದ ಈ ಸಂಸ್ಥೆ ಅಸ್ತಿತ್ವದಲ್ಲಿದೆ. ಅಂದರೆ ಈ ಶಾಲೆಯ ಮಹತ್ವ ಮತ್ತು ಆಡಳಿತ ಮಂಡಳಿ ಪದಾಧಿಕಾರಿಗಳ ಸಹಕಾರ ಪೋಷಕರಿಗೆ ತಿಳಿದಿದೆ. ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ರಾಜು ತಮ್ಮನ್ನು ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಿಸಿಕೊಂಡಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಈ ಶಾಲೆಗೆ ದಾಖಲಿಸುವ ಮೂಲಕ ತಮ್ಮ ಕೊಡುಗೆ ಯನ್ನು ನೀಡಬೇಕು ಎಂದರು.





ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯ ಪ್ರಕಟವಾಗಲು ಶಿಕ್ಷಣೇತರ ಚಟುವಟಿಕೆಗಳು ಅವಶ್ಯಕವಾಗಿದೆ. ಶಾಲಾ ವಾರ್ಷಿಕೋತ್ಸವಗಳು ಇದಕ್ಕೆ ಪೂರಕವಾಗಿವೆ. ಪಟೇಲ್ ಆಂಗ್ಲ ಶಾಲೆ ಇಂತಹ ಚಟುವಟಿಕೆಗಳನ್ನು ನಿರಂತರ ಹಮ್ಮಿಕೊಳ್ಳುತಿದೆ. ಇದು ಮಕ್ಕಳ ಒಟ್ಟಾರೆ ಬೆಳವಣಿಗೆಗೆ ಸಹಕಾರಿ ಎಂದರು. ಪರೀಕ್ಷೆಗಳಲ್ಲೂ ಶಾಲೆ ಉತ್ತಮ ಫಲಿತಾಂಶಗಳನ್ನು ಗಳಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದುರ.

ರಾಮನಗರ ವಿಧಾನ ಸಭಾ ಕ್ಷೇತ್ರದ ಜನರ ಒಳಿತಿಗಾಗಿ ರಾಮನಗರದಲ್ಲಿ ರಾಮೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹಲವಾರು ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ನಾಗರೀಕರು ಇವುಗಳಲ್ಲಿ ಭಾಗವಹಿಸಿ ರಾಮೋತ್ಸವದ ಯಶಸ್ಸಿಗೆ ಸಹಕರಿಸಬೇಕು ಎಂದರು.

ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದ ಮಾಜಿ ಶಾಸಕರು ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಯ ಅಧ್ಯಕ್ಷರಾದ ರಾಜು ಕೆ ಮಾತನಾಡಿ, ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳಲ್ಲಿನ ಪ್ರತಿಭೆಗೆ ಸಹಕಾರಿಯಾಗಿದೆ. ಶಿಕ್ಷಣ ಕ್ಷೇತ್ರದಲ್ಲ ಪಟೇಲ್ ರಾಜು ಅವರ ಶ್ರಮವಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ ರಾಜು ಮಾತನಾಡಿ, ನಮ್ಮ ಶಾಲೆಯಲ್ಲಿ ಹಿಂದುಳಿದ, ಮಧ್ಯಮ ವರ್ಗ ಮತ್ತು ಗ್ರಾಮೀಣ ಭಾಗದಿಂದ ಬರುವ ಮಕ್ಕಳಿಗೆ ವಿಶೇ? ರಿಯಾಯಿತಿಯನ್ನು ನೀಡಲಾಗುತ್ತಿದೆ. ಶಿಕ್ಷಣ ಕೈಗೆಟುಕುವಂತಿರಬೇಕು ಎಂಬುದು ತಮ್ಮ ಆಶಯ ಎಂದರು. ಇಂದು ಇಂಗ್ಲೀಷ್ ಭಾಷೆ ಜಾಗತಿಕ ಸಂವಹನ ಭಾಷೆಯಾಗಿದೆ. ಹೀಗಾಗಿ ಬದುಕಿಗಾಗಿ ಆಂಗ್ಲ ಭಾ?ಯನ್ನು ಮಕ್ಕಳು ಕಡ್ಡಾಯವಾಗಿ ಕಲಿಯುವ ಅವಶ್ಯಕತೆ ಇದೆ. ತಾಯಿ ಭಾ? ಕನ್ನಡ ಭಾ?ಯನ್ನು ಎಂದಿಗೂ ನಾವು ಮರೆಯಬಾರದು. ತಮ್ಮ ಶಾಲೆಯಲ್ಲಿ ಕನ್ನಡ ಭಾಷೆಗೆ ಇರುವ ಪ್ರಾಮುಖ್ಯತೆಗೆ ಕೊರತೆ ಇಲ್ಲ ಎಂದರು. ಇದೇ ವೇದಿಕೆಯಲ್ಲಿ ನೇಗಿಲ ಯೋಗಿ ಟ್ರಸ್ಟ್ ಹೊರತಂದಿರುವ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಗಣ್ಯರು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ನೇಗಿಲ ಯೋಗಿ ಟ್ರಸ್ಟ್‌ನ ರಾಜ್ಯಾಧ್ಯಕ್ಷ ರವಿಕುಮಾರ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಶಿವಲಿಂಗಪ್ಪ, ಪ್ರಮುಖರಾದ ಸುರೇಶ್, ಶಿವಣ್ಣ, ವಕಿಲ ರವಿ, ನೇಗಿಲಯೋಗಿ ಟ್ರಸ್ಟ್ ಪದಾದಿಕಾರಿಗಳಾದ ಗಬ್ಬಾಡಿ ಕಾಡೇಗೌಡ, ಶಿವದ್ಯಾವೇಗೌಡ, ಮಲ್ಲೇಶ್, ಕೂ.ಗಿ.ಗಿರಿಯಪ್ಪ, ಉಸ್ತಾರ್ಡ್ ಅಧ್ಯಕ್ಷ ಪ್ರದೀಪ್, ಶಾಲೆಯ ಮುಖ್ಯ ಶಿಕ್ಷಕರು ಮತ್ತು ಇತರರು ಭಾಗವಹಿಸಿದ್ದರು. ಶಾಲೆಯ ಮಕ್ಕಳು ನಡೆಸಿಕೊಟ್ಟ ನೃತ್ಯ ಎಲ್ಲರ ಗಮನ ಸೆಳೆಯಿತು.

# ವಿಹಾರದ ಸಂಪೂರ್ಣ ಆಡಳಿತವನ್ನು ಬೌದ್ಧರಿಗೆ ಒಪ್ಪಿಸಬೇಕು

ಚಾಮರಾಜನಗರ, ಬಿಹಾರದಲ್ಲಿರುವ ಬೌದ್ಧರ ಪವಿತ್ರ ಸ್ಥಳವಾದ ಬೋಧಗಯಾ ಮಹಾ ವಿಹಾರದ ಸಂಪೂರ್ಣ ಆಡಳಿತವನ್ನು ಬೌದ್ಧರಿಗೆ ಒಪ್ಪಿಸಬೇಕು ಹಾಗೂ ಬಿ.ಟಿ.ಆಕ್ಟ್–1949 ಅನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಹೋರಾಟಕ್ಕೆ ಬೌದ್ಧ ಉಪಾಸಕರು, ಅಂಬೇಡ್ಕರ್ ಅನುಯಾಯಿಗಳು ಕೈ ಜೋಡಿಸಬೇಕು ಎಂದು ಬಿಹಾರದ ವಿನಯಾಚಾರ್ಯ ಬಂತೇಜಿ ಮನವಿ ಮಾಡಿದರು.



ನಗರದ ಹೊರವಲಯದ ಯಡಬೆಟ್ಟದಲ್ಲಿರುವ ನಳಂದ ಬೌದ್ಧ ವಿಶ್ವವಿದ್ಯಾನಿಲಯ ಧ್ಯಾನ ಮತ್ತು ಅಧ್ಯಯನ ಕೇಂದ್ರದಲ್ಲಿ ಭಾನುವಾರ ಇಂಟರ್ ನ್ಯಾಷನಲ್ ಬುದ್ದಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್, ಉಪಾಸಿಕ ಮತ್ತು ಉಪಾಸಕ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಮತ್ತು ಮಾತೆ ಸಾವಿತ್ರಿ ಬಾಪುಲೆ ಜನ್ಮ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಬೋಧಗಯಾದ ಮಹಾವಿಹಾರ ಸಂಪೂರ್ಣವಾಗಿ ಬುದ್ದರ ಅಧೀನ ದಲ್ಲಿಲ್ಲ. ಹಾಗಾಗಿ ಆ ಮಹಾ ವಿಹಾರವನ್ನು ಬೌದ್ಧರಿಗಾಗಿ ಬಿಡಿಸಿಕೊಳ್ಳಲು ಹೋರಾಟ ರೂಪಿಸಿದ್ದೇವೆ. ನಮ್ಮ ಪೂರ್ವಿಕರು ಅಪಮಾನದ ವಿರುದ್ಧ ಹೋರಾಡಿ ಭೀಮಾ ಕೋರೆಗಾಂವ್ ವಿಜಯೋತ್ಸವ ಸಾಧಿಸಿದ್ದಾರೆ. ಪ್ರಸ್ತುತ ನಾವು ಮಹಾಬೋಧಿ ಮಹಾ ವಿಹಾರಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ. ಎಲ್ಲರೂ ಸಂಪೂರ್ಣ ಸಹಕಾರ ನೀಡಬೇಕು ಎಂದು ಕೋರಿದರು.

ಬಿಹಾರದಲ್ಲಿರುವ ಬೌದ್ಧ ಮಹಾವಿಹಾರವನ್ನು ಬೌದ್ದರಿಗೆ ಬಿಡಿಸಿಕೊಡಬೇಕೆಂದು ಶ್ರೀಲಂಕಾ ಮತ್ತು ಜಪಾನ್ ದೇಶಗಳು ಪ್ರಯತ್ನ ನಡೆಸಿದವು ಆದರೆ, ಬೆಂಬಲ ಸಿಗದೆ ಸಾಧ್ಯವಾಗಲಿಲ್ಲ. ಆದರೆ, ನಾವು ಮಹಾವಿಹಾರವನ್ನು ಪಡೆಯಲು ಹೋರಾಟ ಶುರು ಮಾಡಿದ್ದೇವೆ. ದೇಶಾದ್ಯಂತ ಸಂಚಾರ ಮಾಡಿ ಬೌದ್ಧರನ್ನು ಸಂಘಟಿಸಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ತಿಳಿಸಿದರು.

**ಮಹಿಳಾ ದಿನವಾಗಿ ಘೋಷಿಸಲಿ : ಡಾ.ಟಿ.ಪದ್ಮಶೀ**

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಉಪನ್ಯಾಸಕಿ ಡಾ.ಟಿ.ಪದ್ಮಶ್ರೀ ಮಾತನಾಡಿ, ತೆಲಂಗಾಣ ಸರ್ಕಾರದ ಮಾದರಿಯಲ್ಲಿ ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳು ಅಕ್ಷರದವ್ವ ಸಾವಿತ್ರಿಬಾಯಿಪುಲೆ ಅವರ ಜನ್ಮ ದಿನವನ್ನು ಮಹಿಳಾ ದಿನಾಚರಣೆಯನ್ನಾಗಿ ಘೋಷಿಸಬೇಕು ಎಂದರು.

ಪತಿ ಪತ್ನಿಯರಾದ ಜ್ಯೋತಿಬಾಪುಲೆ ಮತ್ತು ಸಾವಿತ್ರಿಬಾಪುಲೆ ಅವರಿಬ್ಬರನ್ನು ಬೇರ್ಪಡಿಸಿ ಮಾತನಾಡುವುದು ಸಾಧ್ಯವೇ ಇಲ್ಲ. ಈ ಮಾದರಿ ದಂಪತಿಯನ್ನು ಇತಿಹಾಸದಲ್ಲೂ ಕಾಣಲು ಸಾಧ್ಯವಿಲ್ಲ. ಅವರ ಹೆಜ್ಜೆಗಳು ಚರಿತ್ರೆಯ ಪುಟದಲ್ಲಿ ಜೊತೆಯಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅಮರಜ್ಯೋತಿ ಬಂತೇಜಿ ಮಾತನಾಡಿದರು. ನಾಗರತ್ನ ಬಂತೇಜಿ, ಯಶ ಬಂತೇಜಿ, ಬಿ.ಆರ್. ರಂಗಸ್ವಾಮಿ, ನಾಗಸಿದ್ದಾರ್ಥ ಹೊಲೆಯಾರ್, ಎನ್.ನಾಗಯ್ಯ, ನಲ್ಲೂರು ಪರಮೇಶ್, ಕೃಷ್ಣಯ್ಯ, ಎಂ.ಸಿದ್ದರಾಜು ಸೋಮವಾರಪೇಟೆ, ಭಾರತೀಯ ಬೌದ್ಧ ಮಹಾಸಭಾ ಮಹಿಳಾ ಘಟಕ ಅಧ್ಯಕ್ಷೆ ನಾಗಶಿಲ್ಪ, ರಮಾಬಾಯಿ ಫೌಂಡೇಶನ್ ಅಧ್ಯಕ್ಷೆ ಪುಷ್ಪ ಮರಿಸ್ವಾಮಿ ಬೌದ್ಧ ಉಪಾಸಕರು ಹಾಜರಿದ್ದರು.

## ನಾನು ಜೆಡಿಎಸ್ ಶಾಸಕ ಎಂಬ ಕಾರಣಕ್ಕೆ ನನಗೆ ಸಹಕಾರ ನೀಡುತ್ತಿಲ್ಲ:ಹೆಚ್.ಟಿ.ಮಂಜು



ಕೆ.ಆರ್.ಪೇಟೆ, ನಾನು ಜೆಡಿಎಸ್ ಶಾಸಕ ಎಂಬ ಒಂದೇ ಕಾರಣಕ್ಕೆ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ನನಗೆ ಸಹಕಾರ ನೀಡುತ್ತಿಲ್ಲ. ಇದರಿಂದ ಕ್ಷೇತ್ರ ಅಭಿವೃದ್ಧಿ ನಿರೀಕ್ಷೆಗೆ ತಕ್ಕಂತೆ ಆಗುತ್ತಿದೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಅವರು ತಾಲ್ಲೂಕಿನ ಬೂಕನಕೆರೆ ಹೋಬಳಿಯ ಮತ್ತೀಕೆರೆ ಗ್ರಾಮದಲ್ಲಿ ಕಾವೇರಿ ನೀರಾವರಿ ನಿಗಮದ ಹೇಮಾವತಿ ಜಲಾಶಯ ಯೋಜನೆಯ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ನಿಧಿಯ ವಿಶೇಷ ಅನುಧಾನದಲ್ಲಿ ಸುಮಾರು 85 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸಿಸಿ ಮತ್ತು ಡಾಂಬರ್ ರಸ್ತೆ ಹಾಗೂ ಬಾಕ್ಸ್ ಡ್ರೈನೇಜ್ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡ್ಯ ಜಿಲ್ಲೆಯಲ್ಲಿ ಅಭಿವೃದ್ಧಿ ವಿಚಾರವಾಗಿ ಜಿಲ್ಲೆಯ ಶಾಸಕರ ಸಭೆ ಕರೆಯುವಾಗ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಶಾಸಕರನ್ನು ಕರೆಯುತ್ತಾರೆ ಆದರೆ ನನ್ನನ್ನು ಜೆಡಿಎಸ್ ಶಾಸಕ ಎಂಬ ಕಾರಣಕ್ಕೆ ಸಭೆಗೆ ಕರೆಯುವುದಿಲ್ಲ. ಈ ಮಲತಾಯಿ ಧೋರಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಡಬೇಕು. ಜೆಡಿಎಸ್–ಬಿಜೆಪಿ ಶಾಸಕರನ್ನೂ ಸಮಾನವಾಗಿ ನೋಡಬೇಕು ಕ್ಷೇತ್ರದ ಅಭಿವೃದ್ಧಿಗೆ ನೀಡುವ ಅನುದಾನವನ್ನು ಎಲ್ಲಾ ಶಾಸಕರಿಗೂ ಸಮಾನವಾಗಿ ಹಂಚಿಕೆ ಮಾಡಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಸರ್ಕಾರವು ಎಲ್ಲಾ 224 ಶಾಸಕರನ್ನು ಒಂದೇ ಎಂದು ನೋಡುತ್ತಿಲ್ಲ. ಕಾಂಗ್ರೆಸ್ ಶಾಸಕರಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 50 ಕೋಟಿ ಅನುಧಾನ ನೀಡಿದೆ. ಜೆಡಿಎಸ್ ಮತ್ತು ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ತಲಾ 25 ಕೋಟಿ ನೀಡುತ್ತಿದೆ. ಕಳೆದ ವರ್ಷ ಕಾಂಗ್ರೆಸ್ ಶಾಸಕರಿಗೆ 25ಕೋಟಿ, ವಿರೋಧಿ ಶಾಸಕರಿಗೆ ಕೇವಲ 10 ಕೋಟಿ ಅನುಧಾನ ನೀಡಿತ್ತು. ಈ ತಾರತಮ್ಯವನ್ನು ಕೂಡಲೇ ನಿಲ್ಲಿಸಿ ಎಲ್ಲಾ 224 ಶಾಸಕರಿಗೂ ಒಂದೇ ರೀತಿಯ ಅನುಧಾನ ನೀಡಬೇಕು. ಜೊತೆಗೆ ಎಲ್ಲಾ ಕ್ಷೇತ್ರಗಳಿಗೆ ರಸ್ತೆ ಅಭಿವೃದ್ಧಿಗೆ ವಿಶೇಷ ಅನುಧಾನ ನೀಡಬೇಕು ಎಂದು ಶಾಸಕ ಹೆಚ್.ಟಿ.ಮಂಜು ಸಿಎಂ ಮತ್ತು ಡಿಸಿಎಂ ಅವರನ್ನು ಆಗ್ರಹಿಸಿದರು. 2028ಕ್ಕೆ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷವು ಅಧಿಕಾರಕ್ಕೆ ಬರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆಗ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಸಾಕಷ್ಟು ಅನುಧಾನ ತಂದು ಕೊಡುತ್ತೇನೆ. ಹಾಗಾಗಿ ಕ್ಷೇತ್ರದ ಜನತೆ ನನಗೆ ಮತ್ತೊಮ್ಮೆ ಆಶೀರ್ವಾದ ಮಾಡಬೇಕು ಎಂದು ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾವೇರಿ ನೀರಾವರಿ ನಿಗಮದ ಹೇಮಾವತಿ ಜಲಾಶಯ ಯೋಜನೆಯ ನಂ.3 ರ ಎಕ್ಸಿಕ್ಯೂಟೀವ್ ಇಂಜಿನಿಯರ್ ಜಯರಾಂ, ತಾ.ಪಂ.ಮಾಜಿ ಸದಸ್ಯ ಹೆಳವೇಗೌಡ(ಹುಲ್ಲೇಗೌಡ), ಗ್ರಾ.ಪಂ.ಅಧ್ಯಕ್ಷ ಪರಮೇಶ್, ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಹಾಗೂ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕುರುಬಹಳ್ಳಿ ಕೆ.ಬಿ.ನಾಗೇಶ್, ಗಂಜಿಗೆರೆ ಸೊಸೈಟಿ ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ, ಬೂಕನಕೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ನಂದೀಶ್, ಗ್ರಾ.ಪಂ.ಮಾಜಿ ಅಧ್ಯಕ್ಷೆ ಚೇತನಾಬೋರೇಗೌಡ, ಗ್ರಾ.ಪಂ.ಸದಸ್ಯರಾದ ಎಂ.ಕೆ.ಮನು, ಚೇತನಾಬೋರೇಗೌಡ, ಮಾಜಿ ಸದಸ್ಯ ಮಂಜು, ಗ್ರಾಮದ ಹಿರಿಯ ಮುಖಂಡರು ಹಾಗೂ ಸಮಾಜ ಸೇವಕರಾದ ಡಾ.ದೇವೇಂದ್ರಕುಮಾರ್, ಮುಖಂಡರಾದ ಬೋರೇಗೌಡ, ಎಂ.ಸಿ.ಚೇತನ್, ಎಂ.ಆರ್.ಜಗದೀಶ್, ಎಂ.ಆರ್.ಪ್ರಕಾಶ್, ಎಂ.ಕೆ.ಜಗನ್ನಾಥ್, ಸ್ವಾಮೀಗೌಡ, ಎಂ.ಎಲ್.ಶೇಖರ್, ಎಂ.ಎಸ್.ರಾಮಚಂದ್ರೇಗೌಡ, ಎಂ.ಎಸ್.ಲಕ್ಕೇಗೌಡ, ಬಾಲಚಂದ್ರು, ಎಂ.ಎಸ್.ಸಾಗರ್, ಇಟ್ಟಿಗೆ ಮಂಜುನಾಥ್, ಡೇರಿ ಅಧ್ಯಕ್ಷ ಎಂ.ಕೆ.ಸುರೇಶ್, ಎಸ್.ಡಿ.ಎಂ.ಸಿ ಅಧ್ಯಕ್ಷ ಸತೀಶ್, ಎಂ.ಆರ್.ಕುಮಾರ್, ಎಂ.ಕೆ.ನಾಗೇಗೌಡ, ಎಂ.ಎನ್.ಸುರೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಈ.ಮಂಜುನಾಥ್, ಶಾಸಕರ ಆಪ್ತ ಸಹಾಯಕ ಧ್ರುವ ಸೇರಿದಂತೆ ನೂರಾರು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕೊಲೆ ಆಪರಾಧಿಗೆ ಜೀವಾವಧಿ ಶಿಕ್ಷೆ, ದಂಡ

ರಾಮನಗರ: ಕೊಲೆ ಪ್ರಕರಣದಲ್ಲಿ ಆರೋಪಿಗೆ ಕನಕಪುರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ಒಂದು ಲಕ್ಷ ರೂಪಾಯಿಗಳ ದಂಡ ವಿಧಿಸಿದೆ.

**ವಿವರ ಇಂತಿದೆ:** ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕಿನ ಮರಳವಾಡಿ ಹೋಬಳಿಯ ಅರೆಗಡಕಲು ಗ್ರಾಮದ ವಾಸಿ ಜಯಮ್ಮ ಅವರ ಮನೆಯ ಬಳಿ 2025ರ ಫೆಬ್ರವರಿ 22ರಂದು ಬೆಳಿಗ್ಗೆ ಮರಳವಾಡಿ ಹೋಬಳಿಯ ಅರೆಗಡಕಲು ಗ್ರಾಮದ ಆರೋಪಿಯಾದ ಬೈರಪ್ಪ ಬಿನ್ ಮಲ್ಲಯ್ಯ ಜಯಮ್ಮ ಅವರ ಬಳಿ ಹಣವನ್ನು ಸಾಲವಾಗಿ ನೀಡುವಂತೆ ಕೇಳಿದಾಗ ಈಗಾಗಲೇ ಆರೋಪಿಯು ಹಣ ಪಡೆದುಕೊಂಡಿದ್ದು, ಅದನ್ನು ವಾಪಸ್ ಕೊಡದ ಕಾರಣ ಮತ್ತೆ ಹಣ ಕೊಡಲು ನಿರಾಕರಿಸಿರುತ್ತಾರೆ.ದ್ವೇಷ ಇಟ್ಟುಕೊಂಡು ಜಯಮ್ಮ ಅವರನ್ನು ಕೊಲೆ ಮಾಡಿದರೆ ಈ ಹಿಂದೆ ಪಡೆದಿದ್ದ ಹಣವನ್ನು ವಾಸಪ್ ಕೊಡುವ ಹಾಗಿರುವುದಿಲ್ಲ ಹಾಗೂ ಆಕೆಯ ಕತ್ತಿನಲ್ಲಿರುವ ಚಿನ್ನದ ಮಾಂಗಲ್ಯ ಸರವನ್ನು ಬಿಚ್ಚಿಕೊಂಡು ಹೋಗಬಹುದೆಂಬ ದುರಾಲೋಚನೆಯಿಂದ ಅವರ ಮನೆಗೆ ಹೋಗಿ ಆಕೆಯ ಬಳಿ ನೀರು ಕೇಳುವ ನೆಪದಲ್ಲಿ ಸುತ್ತಿಗೆಯಿಂದ ಹೊಡೆದು ಕಬ್ಬಿಣದ ಮೊಳೆಯಿಂದ ಮೃತಳ ಮುಖದ ಮೇಲೆಲ್ಲಾ ಚುಚ್ಚಿ ರಕ್ತಣಾಪಡಿಸಿ ಕೊಲೆ ಮಾಡಿ ನಂತರ ಮೃತಳ ಕತ್ತಿನಲ್ಲಿದ್ದ ತಾಳಿ, 2 ಗುಂಡುಗಳು ಮತ್ತು 4 ಮಣಿಗಳಿದ್ದ ಸುಮಾರು 70 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಬಿಚ್ಚಿಕೊಂಡು ಹೊರಟು ಹೋಗಿರುತ್ತಾನೆ. ನಂತರ ತನಿಖಾಧಿಕಾರಿ ಆರೋಪಿಯನ್ನು ಪತ್ತೆ ಮಾಡಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಕನಕಪುರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ್ ಎಚ್.ಎನ್ ಅವರು ಜೀವಾವಧಿ ಶಿಕ್ಷೆ ಹಾಗೂ 1,00,000 ರೂ.ಗಳ ದಂಡ ಮತ್ತು ಮೃತಳ ಮಗನಾದ ಅನೀಲ ಅವರಿಗೆ 75,000 ರೂ.ಗಳ ಪರಿಹಾರವನ್ನು ಆದೇಶಿಸಿರುತ್ತಾರೆ.

# ಧರ್ಮಸ್ಥಳ ಕಾರ್ಯ ಶ್ಲಾಘನೀಯ

## ಬಿ.ಕೆ. ರವಿಕುಮಾರ್ ಹೇಳಿಕೆ | ಮಹಿಳಾ ವಿಚಾರಗೋಷಿ

ಚಾಮರಾಜನಗರ, ಮಹಿಳೆಯರ ಅರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣ ಕ ಪ್ರಗತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಗಳು ಪೂರಕವಾಗಿದ್ದು, ಅಲ್ಪಾವಧಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಗಮನಾರ್ಹ ಬದಲಾವಣೆ ಗಳಾಗಿವೆ ಎಂದು ಜಿಲ್ಲಾ ಜನ ಜಾಗೃತಿ ವೇದಿಕೆಯ ಉಪಾಧ್ಯಕ್ಷರು ಅದ ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ತಿಳಿಸಿದರು.

ನಗರದ ಜೆಎಚ್ ಪಟೇಲ್ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ತಾಲೂಕು ಘಟಕದ ವತಿಯಿಂದ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ನಡೆದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ನಮ್ಮ ಜಿಲ್ಲೆಗೆ ಬಂದ ಕೆಲವೇ ವರ್ಷಗಳಾಗಿದೆ. ಬಹಳ ಕಡಿಮೆ ಅವಧಿಯಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿ ತಮ್ಮ ಕಾರ್ಯಕ್ರಮಗಳ ಮೂಲಕ ಮಹಿಳೆಯಲ್ಲಿ ಜಾಗೃತಿ ಮೂಡಿಸಿದ್ದಾರೆ. ಸರ್ಕಾರ ಮಾಡಲಾಗದ ಕೆಲಸವನ್ನು ಶ್ರೀ ಕ್ಷೇತ್ರದ ಧರ್ಮಸ್ಥಳದ ಡಾ. ಸಿ. ವಿರೇಂದ್ರ ಹೆಗಡೆ ಅವರು ಮಾಡುತ್ತಿದ್ದಾರೆ. ಮಹಿಳೆಯರಿಗೆ ಸಾಲ ಸೌಲಭ್ಯ ಕಲ್ಪಿಸಿಕೊಡುವುದಷ್ಟೇ ನಮ್ಮ ಉದ್ದೇಶವಲ್ಲ. ಅವರನ್ನು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣ ಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಬೇಕೆಂಬ ಅವರು ಸಂಕಲ್ಪ ಮಾಡಿ, ಅನುಷ್ಠಾನ ಮಾಡಿರುವ ಯೋಜನೆಗಳು ಮನೆ ಮಾತಾಗಿವೆ. ನಮ್ಮ ಜಿಲ್ಲೆಯ ಬರ ಹಾಗೂ ಹಿಂದುಳಿದ ಜಿಲ್ಲೆಯಾಗಿದೆ. ಕೃಷಿಯನ್ನು ಹೆಚ್ಚು ಅವಲಂಬಿಸಿರುವ ರೈತಾಪಿ ವರ್ಗದವರಿಗೆ ಕೃಷಿಆಧಾರಿತವಾಗಿ ಜೀವನ ನಡೆಸುವ ಕ್ರಮವನ್ನು ಸಹ ಹೇಳಿಕೊಟ್ಟಿದ್ದಾರೆ. ಇಂಥ ಹತ್ತು ಹಲವಾರು ಕಾರ್ಯಕ್ರಮಗಳು ಸಂಸ್ಥೆಯ ವತಿಯಿಂದ ನಡೆಯುತ್ತಿದೆ. ಇಂದಿನ ವಿಚಾರ ಗೋಷ್ಠಿಗೆ ಆಗಮಿಸಿರುವ ಮಹಿಳೆಯರು, ಅವರಲ್ಲಿರುವ ಶಿಸ್ತು ಮತ್ತು ಭಾಗವಹಿಸಿಕೆಯಲ್ಲಿ ಧರ್ಮ ಸ್ಥಳ ಸಂಸ್ಥೆಯ ಪರಿಶ್ರಮವನ್ನು ತಿಳಿಸುತ್ತದೆ ಎಂದು ರವಿಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಿಳೆಯರನ್ನು ಸಂಘಟಿಸಿ, ಜಾಗೃತಗೊಳಿಸಿ, ಸಂಘ ರಚನೆ ಮಾಡಿ, ಬ್ಯಾಂಕ್ ಮೂಲಕ ಅವರಿಗೆ ಸಾಲ ಕೊಡಿಸುವ ಜೊತೆಗೆ ಅದನ್ನು ಮರುಪಾವತಿ ಮಾಡುವ ವಿಧಾನ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಕೌಶಲ್ಯ ತರಬೇತಿಗಳು. ಕೃಷಿ ಕ್ಷೇತ್ರವನ್ನು ಬಲಿಷ್ಠಗೊಳಿಸಲು ಹೈನುಗಾರಿಕೆಗಾಗಿ ಹೆಚ್ಚು ಪ್ರೋತ್ಸಾಹ, ಕೃಷಿ ಪರಿಕರಣಗಳನ್ನು ಸಂಸ್ಥೆಯಿಂದ ರಿಯಾಯಿತಿ ಹಾಗೂ ಬಾಡಿಗೆ ರೂಪದಲ್ಲಿ ನೀಡುವುದು, ಕುಡಿತದ ಚಟ ಬಿಡಿಸುವ ಶಿಬಿರಗಳು, ಸಂಘದ ಸದಸ್ಯರ ಮಕ್ಕಳು ಉನ್ನತ ವ್ಯಾಸಂಗಕ್ಕಾಗಿ ಸುಜ್ಞಾನ ನಿಧಿ, ಕುಟೀರ ಯೋಜನೆ, ವೃದ್ಯಾಪ್ಯ, ಆರೋಗ್ಯ ಸಂಜೀವಿನಿ ಸೇರಿದಂತೆ ಅನೇಕ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಸಬಲೀಕರಣ ಜೊತೆಗೆ ಜಿಲ್ಲೆಯನ್ನು ಅಭಿವೃದ್ದಿಯತ್ತ ಕೊಂಡೊಯತ್ತಿದ್ದಾರೆ ಎಂದರು.

ಬಸವರಾಜೇಂದ್ರ ಅಸ್ಪತ್ರೆಯ ವೈದ್ಯಾಧಿಕಾರಿ ಡಾ. ಶ್ವೇತಾ ಶಶಿಧರ್ ಮಾತನಾಡಿ, ಮಹಿಳೆಯು ಕುಟುಂಬದ ಆಧಾರ ಸ್ತಂಭ, ಹೀಗಾಗಿ ಕುಟುಂಬದ ಇತರೇ ಸದಸ್ಯರ ಆರೋಗ್ಯ ಕಾಳಜಿ ಜೊತೆಗೆ ನಿಮ್ಮ ಆರೋಗ್ಯಕ್ಕು ಹೆಚ್ಚು ಗಮನ ನೀಡಬೇಕು. ಇತ್ತಿಚೆಗೆ ಮಹಿಳೆಯರಲ್ಲಿ ಸ್ತನ ಹಾಗೂ ಗರ್ಭಕೋಶ ಕ್ಯಾನ್ಸರ್ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟಲು ಪ್ರಥಮ ಹಂತದಲ್ಲಿಯೇ ಪರೀಕ್ಷೆ ಮಾಡಿಕೊಂಡು ಚಿಕಿತ್ಸೆ ಪಡೆದುಕೊಂಡರೆ ಗುಣಮುಖರಾಗಲು ಸಾಧ್ಯವಿದೆ ಎಂದರು.

ಈ ಎರಡು ಕಾಯಿಲೆ ಗುಣಲಕ್ಷಣಗಳು ಹಾಗೂ ಇದರ ಪರಿಣಾಮ ಕುರಿತು ತಿಳಿಸಿಕೊಟ್ಟರು. ಮಹಿಳಾ ಸಂಘಗಳ ಸದಸ್ಯರಿಗೆ ಈ ರೋಗ ಬಗ್ಗೆ ಪರೀಕ್ಷೆ ಮಾಡಲು ನಮ್ಮ ಅಸ್ಪತ್ರೆಯಲ್ಲಿ ಧರ್ಮ ಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಹಿಳಾ ಸಂಘ ಸದಸ್ಯರಿಗೆ ಉಚಿತವಾಗಿ ಪರೀಕ್ಷೆ ಮಾಡಿಸುವುದಾಗಿ, ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಪೌರ ಕಾರ್ಮಿಕರಾದ ವಿಜಯ, ತುಳಸಿ, ಗೌರಿ, ಹಾಗು ಪೋಸ್ಟ್ ಮಾಸ್ಟರ್ ಅಪ್ರೀಯಾ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಮಂಜುಳಾ, ಸಂಪನ್ಮೂಲ ವ್ಯಕ್ತಿ ಶ್ರೀಕಾಂತ್, ಯೋಜನೆಯ ಜಿಲ್ಲಾ ನಿರ್ದೇಶಕ ಎ. ದಿನೇಶ್, ತಾಲೂಕು ಸಂಯೋಜಕ ಸಿ.ಟಿ. ಹರೀಶ್‌ಕುಮಾರ್, ಇತರರು ಹಾಜರಿದ್ದರು.

## ಅಕ್ಕ ಪಡೆಗೆ ಚಾಲನೆ




ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಅಕ್ಕ ಪಡೆ ಯೋಜನೆಗೆ ಜ.05ರ ಸೋಮವಾರ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಂಕೀರ್ಣದ ಆವರಣದಲ್ಲಿ ಚಾಲನೆ ನೀಡಲಾಯಿತು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ರಾಮಚಂದ್ರಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ದಿನೇಶ್, ಡಿವೈಎಸ್‌ಪಿ ಶ್ರೀನಿವಾಸ, ಜಿಲ್ಲಾ ನಿರೂಪಣಾಧಿಕಾರಿ ಡಾ. ಲಕ್ಷ್ಮೀ ದೇವಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಜನಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಕ್ಯಾಪ್ಟನ್ ಡಾ. ಲಕ್ಷ್ಮೀ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಹಾಜರಿದ್ದರು.

## ಪತ್ರಕರ್ತರಿಂದ ರಾಜಕುಮಾರ್ ಭಾವಸಾರ್‌ಗೆ ಶ್ರದ್ಧಾಂಜಲಿ ಸಲ್ಲಿಕೆ

ಚಾಮರಾಜನಗರ, ಹಿರಿಯ ಪತ್ರಕರ್ತ ರಾಜ್‌ಕುಮಾರ್ ಭಾವಸಾರ್ ನಿಧನದ ಗೌರವಾರ್ಥ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ನಗರದಲ್ಲಿ ನಡೆಸಲಾಯಿತು.




ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ರಾಜ್‌ಕುಮಾರ್ ಭಾವ ಸಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಮೌನಾ ಚರಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಮಾತನಾಡಿ, ಹಿರಿಯ ಪತ್ರಕರ್ತ ರಾಜ್‌ಕುಮಾರ್ ಭಾವ ಸಾರ್ ಅವರು ಕಳೆದ 30 ವರ್ಷಗಳಿಗಿಂತಲೂ ಹೆಚ್ಚು ಕಾಲ ಪತ್ರಿಕಾ ರಂಗ ದಲ್ಲಿದ್ದು ಹಲವು ಪತ್ರಿಕೆಗಳಲ್ಲಿ ಚಾಮರಾಜನಗರ, ಮೈಸೂರಿ ನಲ್ಲಿ ಕರ್ತವ್ಯ ನಿರ್ವಹಿಸಿದ್ದರು ಎಂದು ಸ್ಮರಿಸಿದರು.

ಬಹುಮುಖ ಪ್ರತಿಭೆ ಹೊಂದಿದ್ದ ಭಾವಸಾರ್ ಅವರು ಪತ್ರಿಕಾ ರಂಗದಲ್ಲಿ ಕೆಲಸ ನಿರ್ವಹಿಸಿದ್ದರು. ಅವರ ಸೇವೆ ಪತ್ರಿಕಾರಂಗಕ್ಕೆ ಇನ್ನೂ ಬೇಕಾಗಿತ್ತು. ಆದರೆ, ವಿಧಿಯಾಟಕ್ಕೆ ಎಲ್ಲರೂ ತಲೆಬಾಗಲೇ ಬೇಕು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಹಾಗೆಯೇ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ. ಭಾವಸಾರ್ ಕುಟುಂಬಕ್ಕೆ ಸಂಘ ನೆರವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಖಜಾಂಚಿ ಪುಟ್ಟರಾಜು, ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಕಾರ್ಯದರ್ಶಿ ಫಾಲಲೋಚನಾ ಆರಾಧ್ಯ, ಉಪಾಧ್ಯಕ್ಷ ಚಂದ್ರಶೇಖರ್, ಮಾಜಿ ಅಧ್ಯಕ್ಷ ದೇವರಾಜ ಕಪ್ಪಸೋಗೆ, ನಿರ್ದೇಶಕರಾದ ಅಬ್ರಹಾಂ ಡಿ.ಸಿಲ್ವ, ಎಸ್.ಎಂ.ನಂದೀಶ್, ಪ್ರಕಾಶ್ ಬೆಲ್ಲದ್, ವಿಜಯ್‌ಕುಮಾರ್, ಲಿಂಗಪ್ಪ, ರಾ.ಬಾಬು, ಬಸವಣ್ಣ, ಕಾರ್ತಿಕ್, ಪತ್ರಿಕಾ ವಿತರಕ ಶಿವಲಿಂಗಮೂರ್ತಿ ಹಾಜರಿದ್ದರು.

## ಚಾಮರಾಜನಗರ ಜಿಲ್ಲಾಧಿಕಾರಿಯಾಗಿ ಶ್ರೀರೂಪ ಅಧಿಕಾರ ಸ್ವೀಕಾರ

ಚಾಮರಾಜನಗರ, ಜಿಲ್ಲಾ ನೂತನ ಜಿಲ್ಲಾಧಿಕಾರಿಯಾಗಿ ಶ್ರೀರೂಪ ಸೋಮವಾರ ಅಧಿಕಾರ ಸ್ವೀಕರಿಸಿದರು.

ಮೊದಲು ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಂದ ಅಧಿಕಾರ ಸ್ವೀಕರಿಸಿದರು. ನಂತರ ಸುದ್ದಿಗಾರರೊಂದಿ ಮಾತನಾಡಿ, ಹಿಂದಿನ ಜಿಲ್ಲಾಧಿಕಾರಿ ಅವರು ಮಾಡಿರುವ ಕೆಲಸ ಕಾರ್ಯಗಳನ್ನು ಮುಂದುವರಿಸುವುದು ಎಂದರು.



### ಕಾಂಗ್ರೆಸ್ ಪದಾಧಿಕಾರಿಗಳ ಸಭೆ

# ಪಕ್ಷದ ಸಂಘಟನೆಗೆ ಆದ್ಯತೆ ನೀಡಿ: ಪಿ.ರವಿಪ್ರಕಾಶ್

ಚಾಮರಾಜನಗರ, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಪರಿಶಿಷ್ಟಜಾತಿ ವಿಭಾಗದ ಬ್ಲಾಕ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಪದಾಧಿಕಾರಿಗಳ ಸಭೆ ನಡೆಯಿತು.

ಮುಂಬರುವ ಜಿಲ್ಲಾ, ತಾಲ್ಲೂಕು ಪಂಚಾಯತ್ ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆಗೇರಲು ಜಿಲ್ಲೆಯ ಎಲ್ಲ ಪರಿಶಿಷ್ಟಜಾತಿ ವಿಭಾಗದ 8 ಬ್ಲಾಕ್ ಅಧ್ಯಕ್ಷರು ಉಪಾಧ್ಯಕ್ಷರು ಈಗಿನಿಂದಲೇ ಕಾರ್ಯ ಪ್ರವೃತ್ತರಾಗಬೇಕು ಎಂದು ಜಿಲ್ಲೆ ಕೆಪಿಸಿಸಿ ಎಸ್ಸಿ ವಿಭಾಗದ ಉಸ್ತುವಾರಿ ಪಿ.ರವಿಪ್ರಕಾಶ್ ತಿಳಿಸಿದರು.




ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಜಿಲ್ಲಾ ಪರಿಶಿಷ್ಟ ಜಾತಿ ಬ್ಲಾಕ್ ಅಧ್ಯಕ್ಷರು,ಉಪಾಧ್ಯಕ್ಷರು ಪದಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಪಕ್ಷದ ಬಲವರ್ಧನೆಗಾಗಿ ಪಟ್ಟಣ ಪಂಚಾಯಿತಿ ನಗರಸಭೆ, ಪುರಸಭೆ, ಗ್ರಾಮ ಪಂಚಾಯಿತಿ ಒಳಗೊಂಡಂತೆ ಒಂದೊಂದು ಪಂಚಾಯಿತಿಯಲ್ಲಿ 12 ಮಂದಿ ಪ್ರಮುಖ್‌ಕಾರ್ಯಕರ್ತರನ್ನು ಗುತ್ತಿಸಿ ಅವರನ್ನು ಆಯ್ಕ ಮಾಡಲು ಪಟ್ಟಿ ಮಾಡಿ ಕೊಡಿ ಎಂದು ಅಧ್ಯಕ್ಷರಿಗೆ ಸೂಚಿಸಿರು, ಯಾವುದೇ ಚುನಾವಣೆಯಾಗಲೀ, ಪಕ್ಷ ಗೆಲ್ಲಬೇಕಾದರೆ ಪಕ್ಷದ ಬಲವರ್ಧನೆ ಜತೆಗೆ ಕಾರ್ಯಕರ್ತರು ಒಗ್ಗೂಡುವಿಕೆ ಮುಖ್ಯವಾಗುತ್ತದೆ.. ಪ್ರತಿತಿಂಗಳು ಸಭೆ ಆಯೋಜನೆ ಮಾಡುವ ಮೂಲಕ ಪಕ್ಷ ಸಂಘಟನೆಮಾಡಬೇಕು ಎಂದು ಕೆಪಿಸಿಸಿ ಅದೇಶ ನೀಡಿದೆ. ಪ್ರತಿತಿಂಗಳು ಆಯಾ ಬ್ಲಾಕ್ ಅಧ್ಯಕ್ಷರ ಸಭೆ ನಡೆಸಿ, ಪಕ್ಷ ಸಂಘಟನೆಗೆ ಬೇಕಾದ ಸೂಕ್ತ ಸಲಹೆ ನೀಡಲಾಗುವುದು ಎಂದರು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟಜಾತಿ ವಿಭಾಗದ ಜಿಲ್ಲಾಧ್ಯಕ್ಷ ನಲ್ಲೂರು ಸೋಮೇಶ್ವರ್, ಅಧ್ಯಕ್ಷತೆ ವಹಿಸಿದ್ದರು, ಉಪಾಧ್ಯಕ್ಷ ನಾಗರಾಜು ರಾಮಸಮ??ದ್ರ, ಹೆಬ್ಬಸೂರು ರಂಗಸ್ವಾಮಿ, ಚಾಮರಾಜನಗರ ನಗರ ಘಟಕ ಬ್ಲಾಕ್ ಅಧ್ಯಕ್ಷ ಕುಮಾರ್ ಮರಿಯಾಲದ ಹುಂಡಿ, ಸಿದ್ದಯ್ಯ ಗುಂಡ್ಲುಪೇಟೆ ಪರಿಶಿಷ್ಟಜಾತಿ ವಿಭಾಗದ ಅಧ್ಯಕ್ಷ, ಬೇಗೂರು ಬ್ಲಾಕ್ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ನಾಗೇಶ್, ಮನೋಹರ್ ಕೊಳ್ಳೇಗಾಲ ಬ್ಲಾಕ್ ಅಧ್ಯಕ್ಷ ಮಂಜುನಾಥ್ ಜಿಲ್ಲಾ ಉಪಾಧ್ಯಕ್ಷ ಬ್ಲಾಕ್‌ಮೂಳ್ಳೂರು, ಕೃಷ್ಣಮೂರ್ತಿ ಮಾಧ್ಯಮ ವಕ್ತಾರ, ಚುಡಾ ಸದಸ್ಯ ಪುಟ್ಟಸ್ವಾಮಿ ಕೆ,ನಾಗರಾಜು ರಾಮಸಮುದ್ರ,ಲೋಕೇಶ್ ಬದನಗುಪ್ಪೆ, ಗುರುದೇವ್ ರಾಮಪುರ ಬ್ಲಾಕ್ ಉಪಾಧ್ಯಕ್ಷ, ನರಸಿಂಹಗುಂಡುಪೇಟೆ ಟೌನ್‌ಬ್ಲಾಕ್ ಉಪಾಧ್ಯಕ್ಷ, ಪ್ರಕಾಶ್ ಸತ್ತೇಗಾಲ, ರಾಜೇಶ್‌ಭೋಗಾಪುರ, ಚಂದಕವಾಡಿ ಮಹೇಶ್, ಮಹದೇವಸ್ವಾಮಿ, ಸೇರಿದಂತೆ ಪದಾಧಿಕರಿಗಳು ಭಾಗವಹಿಸಿದ್ದರು.

# ಸಿಎಂ ಅಭಿಮಾನಿಗಳಿಂದ ಭೋಜನ ವ್ಯವಸ್ಥೆ



ಗುಂಡ್ಲುಪೇಟೆ: ತಾಲ್ಲೂಕಿನ ಅಹಿಂದ ವರ್ಗದ ಜನರ ಅಚ್ಚು ಮೆಚ್ಚಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರನ್ನು ಹಿಂದಿಕ್ಕಿ ಧೀರ್ಘಾವಧಿಯ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಿರುವ ಹಿನ್ನಲೆಯಲ್ಲಿ ಅವರಿಗೆ ಇಷ್ಟವಾದ ನಾಟಿಕೋಳಿ ಬಿರಿಯಾನಿ ಯನ್ನು ಗುಂಡ್ಲುಪೇಟೆ ತಾಲ್ಲೋಕಿನ ಕುರುಬ ಸಮುದಾಯದ ವತಿಯಿಂದ ಹಾಗೂ ಯುವ ಅಹಿಂದ ಒಕ್ಕೂಟದ ವತಿಯಿಂದ ಎರಡು ಸಾವಿರಕ್ಕೂ ಹೆಚ್ಚು ಸಿದ್ದರಾಮಯ್ಯ ಅಭಿಮಾನಿಗಳಿಗೆ ನಾಟಿಕೋಳಿ ಬಿರಿಯಾನಿ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಆದ್ದರಿಂದ ಸಿದ್ದರಾಮಯ್ಯನವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕುರುಬ ಸಮುದಾಯದ ಮುಖಂಡರಾದ ಜಿ ಎಲ್ ರಾಜುರವರು ತಿಳಿಸಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಟ್ಟಣದ ಕುರುಬ ಸಮುದಾಯದ ಹಿರಿಯ ಮುಖಂಡರಾದ ಜಿ ಎಲ್ ರಾಜು, ಬಸವರಾಜು ಹಾಲಹಳ್ಳಿ, ಯವರು ನಾಳೆ ಬುಧವಾರ ಕನಕದಾಸ ವೃತ್ತ ದಿಂದ ಬೈಕ್ ಅಟೋ ಮೂಲಕ ಸಿದ್ದರಾಮಯ್ಯ ಭಾವಚಿತ್ರ ಮೆರವಣಿಗೆ ಹೊರಟು, ಕನಕ ಭವನದ ವರೆಗೆ ಸಾಗಲಿದ್ದು, ನಂತರ ಸಾವಿರಾರು ಅಹಿಂದ ವರ್ಗದ ಅಭಿಮಾನಿಗಳಿಗೆ ನಾಟಿಕೋಳಿ ಬಿರಿಯಾನಿ ವಿತರಿಸಲಾಗುವುದು ಎಂದರು. ರಾಜ್ಯದಲ್ಲಿ ಧೀರ್ಘಾವದಿ ಸಿಎಂ ಎಂಬ ಹೆಗ್ಗಳಿಕೆ ಪಾತ್ರರಾದ ಸಿದ್ದರಾಮಯ್ಯ ನವರು ನಮ್ಮ ಕುರುಬ ಸಮುದಾಯಕ್ಕೆ ಹೆಮ್ಮೆ ತಂದಿದ್ದು ಅಹಿಂದ ವರ್ಗ ದ ಎಲ್ಲರಿಗೂ ಸಂತಸದ ವಿಚಾರ ಹಾಗಾಗಿ ಈ ಸಂಭ್ರಮದ ಅಂಗವಾಗಿ ನಾಟಿಕೋಳಿ ಬಿರಿಯಾನಿಯನ್ನು ಎರಡು ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿಗೆ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಕುರುಬ ಸಂಘದ ಅಧ್ಯಕ್ಷ ಜಿ ಎಲ್ ರಾಜು, ಉಪಾಧ್ಯಕ್ಷರಾದ ಹೊಣಕಣಪುರದ ಸ್ವಾಮಿ, ಮುಖಂಡರಾದ ಹೆಚ್ ಎನ್ ಬಸವರಾಜು, ರಾಜೇಶ್, ರಘು, ಜಿಕೆ ಎನ್ ವಿಶ್ವನಾಥ್, ಮನು, ಶಿವಣ್ಣ, ನಾಗರಾಜು, ಶಶಿಕುಮಾರ್,ಗೋವಿಂದ, ಸ್ವಾಮಿ,ಮಂಜುನಾಥ್, ಸಂದೀಪ್ ಕುಮಾರ್ ಜಿ.ಎಸ್, ಸಾಗರ್, ಪ್ರಮೋದ್,ಮಹದೇವ ಹಾಜರಿದ್ದರು.

# ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸೌಹಾರ್ದ ಕೂಟ

ಕೆ.ಆರ್.ಪೇಟೆ,ಪಟ್ಟಣದ ಆಶೀರ್ವಾದ್ ವಿದ್ಯಾಸಂಸ್ಥೆ ವತಿಯಿಂದ ಕ್ರಿಸ್‌ಮಸ್ ಮತ್ತು 2026ನೇ ಹೊಸ ವರ್ಷದ ಅಂಗವಾಗಿ ಪಟ್ಟಣದ ಬಾಲ ಏಸು ದೇವಾಲಯದ ಪಕ್ಕದಲ್ಲಿರುವ ಆಶೀರ್ವಾದ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸೌಹಾರ್ದ ಕೂಟ ಕಾರ್ಯಕ್ರಮ ನಡೆಯಿತು.

ಸೌಹಾರ್ದ ಕೂಟವನ್ನು ಶಾಸಕರ ಸಹೋದರ ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಟಿ.ಲೋಕೇಶ್ ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತರ ಕೊಡುಗೆ ಅಪಾರವಾಗಿದೆ. ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕ್ರಿಶ್ಚಿಯನ್ನರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಸೇವೆ ಸಲ್ಲಿಸಿದ್ದಾರೆ. ಎಲ್ಲರಿಗೂ ಶಿಕ್ಷಣ ಸಿಗಬೇಕು ಎಂದು ಏಸು ದೇವರ ಆಶಯದಂತೆ ಶಿಕ್ಷಣ, ಆರೋಗ್ಯ ಸೇವೆ ನೀಡುವಲ್ಲಿ ಕ್ರೈಸ್ತ ಮಿಷನರಿಗಳು ಉತ್ತಮ ಕೆಲಸ ಮಾಡುತ್ತಿವೆ. ಮದರ್ ಥೆರೇಸಾ ಅವರು ನಮ್ಮ ಭಾರತ ದೇಶದ ಕಲ್ಕತ್ತಾ ಪಟ್ಟಣದಲ್ಲಿ ಬಡವರು ಮತ್ತು ನಿರ್ಗತಿಕರು, ಅನಾರೋಗ್ಯ ಪೀಡಿತರ ಸೇವೆ ಮಾಡುವ ಮೂಲಕ ತಮ್ಮ ಜೀವನವನ್ನು ಕಳೆದರು. ಮ್ಯಾಸಿಡೀನಿಯಾದ ದೇಶದಲ್ಲಿ ಜನಿಸಿದರು. ನಂತರ 1929ರಲ್ಲಿ ಭಾರತಕ್ಕೆ ಬಂದು ಕೊಲ್ಕೊತ್ತಾದ ಸೇಂಟ್ ಮೇರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿದರು. 1950ರಲ್ಲಿ ಮಿಷನರಿ ಆಫ್ ಚಾರಿಟಿ ಸಂಸ್ಥೆಯನ್ನು ಆರಂಭಿಸಿ ಕೊಲ್ಕಾತ್ತಾದ ಅನಾಥಾಶ್ರಮಗಳಲ್ಲಿಮ ಕುಷ್ಠ ರೋಗಿ ಮತ್ತು ಇತರೆ ರೋಗಿಗಳ ಆರೈಕೆಯಲ್ಲಿ ತೊಡಗಿಸಿಕೊಂಡರು. ಇವರ ಬಡವರು ಮತ್ತು ರೋಗಿಗಳ ಸೇವೆಯನ್ನು ಗುರುತಿಸಿ ವಿಶ್ವಸಂಸ್ಥೆಯು ನೊಬೆಲ್ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಭಾರತ ಸರ್ಕಾರವು ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ ಇಂತಹ ಮಾನವೀಯ ಗುಣಗಳನ್ನು ಕ್ರೈಸ್ತ ಮಿಷನರಿಗಳು ನೀಡಿವೆ. ಮದರ್ ಥೆರೇಸಾ ಒಂದು ಉದಾಹರಣೆ ಅಷ್ಟೆ ಅವರಂತೆ ಲಕ್ಷಾಂತರ ಮಂದಿ ಶಿಕ್ಷಣ ಮತ್ತು ಆರೋಗ್ಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ ಇದೇ ರೀತಿ ನಮ್ಮ ತಾಲ್ಲೂಕಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಆಶೀರ್ವಾದ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಸೇವೆಯನ್ನು ಹೆಚ್.ಟಿ.ಲೋಕೇಶ್ ಸ್ಮರಿಸಿದರು.

ಕಾಪನಹಳ್ಳಿ ಗವೀಮಠದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಬಾಲ ಏಸು ದೇವಾಲಯದ ಮುಖ್ಯಸ್ಥ ರೆವರೆಂಡ್ ಫಾದರ್ ಪೊಲೂಸ್ ಥಾಮಸ್, ತಾಲ್ಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ಮುಖ್ಯ ಶಿಕ್ಷಕ ಕಾಂತರಾಜು, ಸಂಸ್ಥೆಯ ಸಂಚಾಲಕಿ ರೂಪಾ ಡಿಸೋಜ, ಶಿಕ್ಷಕರಾದ ಸತೀಶ್, ಹರೀಶ್, ಶಿವಮೂರ್ತಿ, ಜಯೇಶ್, ಪ್ರಭುಕುಮಾರ್, ಕೇಶವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



# ಜಿಲ್ಲಾ ಬಂಜಾರ ಸೇವಾ ಸಂಘ ಅಸ್ತಿತ್ವಕ್ಕೆ

## ಸಂವಿಧನಾತ್ಮಕ ಹಕ್ಕುಗಳ ಪ್ರತಿಪಾದನೆಗೆ ಆದ್ಯತೆ | ಜಿಲ್ಲೆಯಲ್ಲಿ ಬಂಜಾರ ಭವನ ನಿರ್ಮಾಣಕ್ಕೆ ಒತ್ತು

ರಾಮನಗರ: ಜಿಲ್ಲೆಯಲ್ಲಿರುವ ಬಂಜಾರ ಸಮಾಜದ ಏಳಿಗೆಗೆ ಶ್ರಮಿಸುವ ಉದ್ದೇಶದಿಂದ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘವನ್ನು ಸ್ಥಾಪಿಸಲಾಗಿದೆ ಎಂದು ಬಂಜಾರ ಸಂಸ್ಕೃತಿ ಭಾಷಾ ಅಕಾಡೆಮಿಯ ನಿಕಟ ಪೂರ್ವ ಅಧ್ಯಕ್ಷ ಎ.ಆರ್.ಗೋವಿಂದ ಸ್ವಾಮಿ ತಿಳಿಸಿದರು.

ನಗರದ ಎಂ.ಜಿ.ರಸ್ತೆಯಲ್ಲಿ ನೂತನ ಕಚೇರಿಯ ಉದ್ಘಾಟನೆ ಹಾಗೂ ನೋಂದಣಿ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು. ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯಲ್ಲಿ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಘಟಕ ಇರಲಿಲ್ಲ. ಜಿಲ್ಲೆಯಲ್ಲಿರುವ ಸಮುದಾಯ ದವರ ಅನುಕೂಲಕ್ಕಾಗಿ ಈ ಸಂಘ ಸ್ಥಾಪಿಸಲಾಗಿದೆ ಎಂದರು.

ಜಿಲ್ಲೆಯ ನಿವಾಸಿಗಳಾಗಿರುವ ಸಮುದಾಯದ ಎಲ್ಲರಿಗೂ ಸಂವಿಧನಾತ್ಮಕ ಮೀಸಲಾತಿ ಹಕ್ಕುಗಳು ಸೇರಿದಂತೆ ಸರ್ಕಾರದ ಸವಲತ್ತುಗಳನ್ನು ದೊರಕಿಸಿ ಕೊಡಲು ಈ ಸಂಘ ಶ್ರಮಿಸಲಿದೆ. ಇಡೀ ರಾಜ್ಯಕ್ಕೆ ಮಾದರಿಯಾಗುವಂತಹ ಕಾರ್ಯನಿರ್ವಹಣೆಗೆ ಹುಮ್ಮಸಿರುವ ಯುವಕರು ಸಂಘದ ಪದಾಧಿಕಾರಿಗಳಾಗಿದ್ದಾರೆ. ಇವರೆಲ್ಲ ನಿಷ್ಠೆಯಿಂದ ಕೆಲಸ ಮಾಡುವ ಭರವಸೆ ಇದೆ. ಇವರಿಗೆಲ್ಲ ಬೆಂಬಲವಾಗಿ ರಾಜ್ಯದ ಪದಾಧಿಕಾರಿಗಳು ಹಾಗೂ ತಾವು ಇರುವುದಾಗಿ ತಿಳಿಸಿದರು. ಜಿಲ್ಲೆಯ ಎಲ್ಲಾ ಪಕ್ಷಗಳ ಜನಪ್ರತನಿಧಿಗಳಿಗೆ ಮನವಿ ಸಲ್ಲಿಸಿದ ಬಂಜಾರ ಭವನ



ನಿರ್ಮಾಣಕ್ಕೆ ಉಚಿತ ನಿವೇಶನ ಪಡೆಯಲು ಪ್ರಯತ್ನಿಸೋಣ. ಇನ್ನೊಂದು ವರ್ಷದಲ್ಲಿ ಈ ಪ್ರಮುಖ ಕೆಲಸವಾಗಬೇಕಾಗಿದೆ. ಸಮುದಾಯದ ಅಭಿವೃದ್ದಿಗೆ ಹಂತ, ಹಂತವಾಗಿ ಕೆಲಸ ಮಾಡೋಣ, ಇದಕ್ಕೆ ಸಮುದಾಯದವರ ಸಹಕಾರ ಬೇಕಾಗಿದೆ ಎಂದರು.

ಜಿಲ್ಲೆಯಲ್ಲಿ ಸಮುದಾಯದ ಸಂಘಟನೆಯ ಕೊರತೆಯಿಂದಾಗಿ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ. ಈ ವಿಚಾರದಲ್ಲಿಯೂ ಸಂಘ ಕಾರ್ಯನ್ಮುಖವಾಗಲಿದೆ ಎಂದರು. ತಮ್ಮನ್ನು ಜಿಲ್ಲಾ ಸಂಘದ ಕಾರ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಧನ್ಯವಾದ ತಿಳಿಸಿದರು.

### ರಾಜಕೀಯ ಪ್ರಾತಿನಿಧ್ಯಕ್ಕೆ ಒತ್ತಾಯ ? ಎಚ್.ವಿ.ಸಿದ್ದಯ್ಯ ನಾಯ್ಕ

ನೂತನ ಕಚೇರಿಯನ್ನು ಉದ್ಘಾಟಿಸಿದ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ನೂತನ ಜಿಲ್ಲಾ ಸಂಘದ ಸಲಹೆಗಾರರಾದ ಎಚ್.ವಿ.ಸಿದ್ದಯ್ಯ ನಾಯ್ಕ ಮಾತನಾಡಿ, ಮುಂಬರುವ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಚುನಾವಣೆಗಳಲ್ಲಿ ಬಂಜಾರ ಸಮುದಾಯವನ್ನು ಎಲ್ಲಾ ಪಕ್ಷಗಳು ಪರಿಗಣಿಸಬೇಕು. ಟಿಕೆಟ್ ಕೊಟ್ಟು ಸ್ಪರ್ಧೆಗೆ ಅವಕಾಶ ಮಾಡಿಕೊಡಬೇಕು. ಈ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಸಂಪರ್ಕಿಸಲಾಗುವುದು. ತಮ್ಮ ಆಶೋತ್ತರಗಳಿಗೆ ಸ್ಪಂದಿಸುವ ಎಲ್ಲಾ ಪಕ್ಷಗಳಿಗೆ ತಮ್ಮ ಸಮುದಾಯದ ಬೆಂಬಲ ಸಿಗಲಿದೆ ಎಂದರು.

ಬಂಜಾರ ಸಮುದಾಯಕ್ಕೆ ಅನೇಕ ವಿಚಾರಗಳಲ್ಲಿ ಅನ್ಯಾಯವಾಗುತ್ತಿದೆ. ಸವಲತ್ತುಗಳು ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ನೂತನ ಸಂಘದ ಮೂಲಕ ಹಕ್ಕುಗಳನ್ನು ಪ್ರತಿಪಾದಿಸೋಣ ಎಂದು ಕರೆ ನೀಡಿದರು. ಸಂಘ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕಚೇರಿ ತೆರೆಯಲಾಗಿದೆ. ಪದಾಧಿಕಾರಿಗಳ ನೇಮಕವಾಗಿದೆ. ಜಿಲ್ಲೆಯಲ್ಲಿ ಲಂಬಾಣಿ ಸಮುದಾಯದ ಜನಸಂಖ್ಯೆ ಸಾಕಷ್ಟಿದೆ. ಇವರ ಶ್ರೇಯೋಭಿವೃದ್ದಿಗೆ ಸಂಘ ಸ್ಥಾಪನೆಯಾಗಿದೆ. ತಕ್ಷಣದಿಂದಲೇ ಕಾರ್ಯಾರಂಭವಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿರುವ ಅಭಿವೃದ್ಧಿ ಪ್ರಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬಂಜಾರ ಭವನಗಳನ್ನು ನಿರ್ಮಿಸಿಕೊಳ್ಳಲು ಸೂಕ್ತ ನಿವೇಶನಗಳನ್ನು ಮಂಜೂರು ಮಾಡಬೇಕು. ಈ ವಿಚಾರದಲ್ಲಿ ರಾಜ್ಯದಲ್ಲಿರುವ ಬಂಜಾರ ಅಭಿವೃದ್ಧಿ ನಿಗಮವೂ ಸಹಕಾರ ನೀಡಬೇಕು ಇಲ್ಲದಿದ್ದರೆ ಹೋರಾಟದ ಮಾಡಬೇಕಾದ ಅನಿವಾರ್ಯತೆ ಇರಲಿದೆ ಎಂದರು. ನೂತನ ಸಂಘದ ಜಿಲ್ಲಾಧ್ಯಕ್ಷ ಧನಂಜಯ ನಾಯ್ಕ, ಪ್ರಧಾನ ಕಾರ್ಯದರ್ಶಿ ಕೃಷ್ಣ ನಾಯ್ಕ ಸೇರಿದಂತೆ ಪದಾಧಿಕಾರಿಗಳು ಮತ್ತು ಇತರರು ಹಾಜರಿದ್ದರು.

# ರೈತರ ಕೆಲಸ ಮಾಡದ ತಹಸೀಲ್ದಾರ್

## ದೂರರ್ಜಿ ಬಗ್ಗೆ ಕ್ರಮವಹಿಸದ ಆರೋಪ | ಕಚೇರಿಗೆ ಅಲೆದು ಸುಸ್ತಾದ ಸಾರ್ವಜನಿಕರು

ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಪೋಡಿ, ದುರಸ್ತಿ, ಒತ್ತುವರಿ ತೆರವು, ಸರ್ಕಾರದ ಯೋಜನೆಗಳು ಸಾರ್ವಜನಿಕರಿಗೆ ತಲುಪದಿ ರುವುದು ಸೇರಿದಂತೆ ರೈತರ ಕೆಲಸಗಳನ್ನು ತ್ವರಿತಗತಿಯಲ್ಲಿ ಮಾಡದಿರುವುದು ಹಾಗೂ ಕಂದಾಯ ವಿವಾದಗಳನ್ನು ಬಗೆಹರಿಸುವಲ್ಲಿ ತಹಸೀಲ್ದಾರ್ ಶ್ರೀನಿವಾಸ್ ಸಂಪೂರ್ಣ ವಿಫಲರಾಗಿದ್ದಾರೆ ಎಂದು ತಾಲೂಕಿನ ಬಹುತೇಕ ರೈತರು ಆರೋಪ ಮಾಡುತ್ತಿದ್ದಾರೆ.

ಕಂದಾಯ ಇಲಾಖೆಗೆ ಒಂದು ಅರ್ಜಿ ಸಲ್ಲಿಸಿ ವರ್ಷಗಳೇ ಕಳೆದರೂ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಸಂಬಂಧ ಎಷ್ಟು ಬಾರಿ ಕಚೇರಿಗೆ ಅಲೆದರೂ ಕೆಲಸ ಮಾತ್ರ ಶೂನ್ಯ ಎಂದು ರೈತರು ಅಲವತ್ತುಗೊಳ್ಳುತ್ತಿದ್ದಾರೆ. ಸಭೆ, ಸಮಾರಂಭಗಳಲ್ಲಿ ರೈತರು ಈ ದೇಶದ ಬೆನ್ನು ಲುಬು ಎಂದು ಭಾಷಣ ಬಿಗಿಯುವ ತಹಸೀಲ್ದಾರ್ ಶ್ರೀನಿವಾಸ್, ನಮ್ಮಗಳ ಕೆಲಸ ಮಾಡಲು ಮುಂದಾಗಿಲ್ಲ. ಅರ್ಜಿ ಸಂಬಂಧ ನಾವು ಕಚೇರಿಗೆ ಬಂದು ವಿಚಾರಿಸಿದರೆ ಅಧಿಕಾರಿಗಳು ಅವರಿವರ ಮೇಲೆ ಹೇಳುತ್ತಾರೆ. ಎಷ್ಟು ಸಲ ಕಚೇರಿಗೆ ಬಂದು ವಿಚಾರಿಸುವುದು ಎಂದು ರೈತರು ಕೆಂಡಕಾರುತ್ತಿದ್ದಾರೆ. ತಾಲೂಕು ಕೇಂದ್ರ ಸ್ಥಾನಕ್ಕೂ ಕೆಲವು ಹಳ್ಳಿ ಗಳಿಗೂ ಭಾರೀ ಅಂತರವಿರುವುದರಿಂದ ತಮ್ಮ ಕೆಲಸ, ಕಾರ್ಯಗಳ ವಿಚಾರಣೆಗಾಗಿ ಆಡಳಿತ ಸೌಧಕ್ಕೆ ಬಂದರೆ ಒಂದು ದಿನದ ಸಮಯ ವ್ಯರ್ಥ, ಜಾನುವಾರುಗಳನ್ನು ಮೇಯಿಸುವುದು, ಕೃಷಿ ಚಟುವಟಿಕೆಗಳ ತೊಡಕು ಸೇರಿದಂತೆ ಹತ್ತು, ಹಲವು ಸಮಸ್ಯೆಗಳು ಉದ್ಭವವಾಗಲಿವೆ. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ನಮ್ಮ ತೆರಿಗೆ ದುಡ್ಡಿನಿಂದ ಸಂಬಳ ಪಡೆಯುವ ಅಧಿಕಾರಿಗಳು ಕೆಲಸ ಏಕೆ ಮಾಡುತ್ತಿಲ್ಲ ಎಂಬುದೇ ತಿಳಿಯುತ್ತಿಲ್ಲ ಎಂದು ರೈತರಾದ ಕೃಷ್ಣ, ಚನ್ನಯ್ಯ, ಸುರೇಶ, ಹೈರಿಗೆ ಉಮೇಶ್, ಲೋಕೇಶ್ ಗೌಡ, ಶಂಕಹಳ್ಳಿ ಶಿವು, ಅಂತರ ಸಂತೆಯ ಸೈಯ್ಯದ್ ಅಕ್ರಮ್, ಸೋಮಣ್ಣ, ಪ್ರಮೋದ್ ಸೇರಿದಂತೆ ಅನೇಕರು ದೂರುತ್ತಿದ್ದಾರೆ.




### ಕಂದಾಯ ಇಲಾಖೆ ಬಗ್ಗೆ ರೈತ ಸಂಘಟನೆಗಳ ಆಕ್ರೋಶ

ಕಂದಾಯ ಇಲಾಖೆಯಲ್ಲಿ ಲಂಚಗಳಿತನ ಮಿತಿ ಮೀರಿದೆ, ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಅನಗತ್ಯವಾಗಿ ಅಲೆದಾಡು ಸುತ್ತಿದ್ದಾರೆ ಇದರಿಂದ ಸಾಕಷ್ಟು ತೊಂದರೆಯಾಗುತ್ತಿದೆ ಎಂದು ಪ್ರಗತಿ ಪರಿಶೀಲನಾ ಸಭೆ ಹಾಗೂ ಸಂಸದರಾಗಿ ಆಯ್ಕೆಯಾದ ಸುನೀಲ್ ಬೋಸ್ ತಾಲೂಕು ಕಚೇರಿಯಲ್ಲಿ ನಡೆಸಿದ ಜನಸ್ಪಂದನಾ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ್ದರು. ಇದಾದ ಕೆಲ ದಿನಗಳ ನಂತರ ರಾಜ್ಯ ರೈತ ಕಲ್ಯಾಣ ಸಂಘಟನೆಯ ಭೂಮಿ ಪುತ್ರ ಚಂದನ್ ಗೌಡ ತಮ್ಮ ಸದಸ್ಯರೊಂದಿಗೆ ತಾಲೂಕು ಕಚೇರಿಗೆ ಭೇಟಿ ನೀಡಿ, ನಾಡಿಗೆ ರೈತರ ಮಹತ್ವವನ್ನು ತಿಳಿಸಿ ಅವರ ಕೆಲಸದಲ್ಲಿ ಅನಗತ್ಯ ವಿಳಂಬವನ್ನು ಸಹಿಸುವುದಿಲ್ಲ ಎಂದು ತಹಸೀಲ್ದಾರ್ ಶ್ರೀನಿವಾಸ್ ಗೆ ಎಚ್ಚರಿಸಿದ್ದರು. ನಂತರದ ದಿನಗಳಲ್ಲಿ ಹಲವು ರೈತ ಸಂಘಟನೆಗಳು ಪ್ರತಿಭಟನೆ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೆಲವು ರೈತರು ತಮ್ಮ ಕೆಲಸ ಸಂಬಂಧ ತಹಸೀಲ್ದಾರ್ ಗೆ ಸಲ್ಲಿಸಿರುವ ಅರ್ಜಿಯ ನಕಲು ಪ್ರತಿ ಹಿಡಿದು ಶಾಸಕರ ನಿವಾಸಕ್ಕೆ ತೆರಳಿ ಅನಿಲ್ ಚಿಕ್ಕಮಾದು ಅವರ ಮೂಲಕ ದೂರವಾಣಿ ಕರೆ ಮಾಡಿಸುತ್ತಿದ್ದಾರೆ. ಕೆಲಸ ಮಾಡುವುದಾಗಿ ಶಾಸಕರಿಗೆ ತಿಳಿಸಿದ ನಂತರ, ಅರ್ಜಿದಾರ ಕಚೇರಿಗೆ ಬಂದರೆ ತಹಸೀಲ್ದಾರ್ ಇಲ್ಲ-ಸಲ್ಲದ ಸಬೂಬು ಹೇಳಿ ಮತ್ತೆ ಕಾಲಹರಣ ಮಾಡುತ್ತಿದ್ದಾರೆ ಹೊರತು ಕೆಲಸ ಮಾಡುತ್ತಿಲ್ಲ ಎನ್ನಲಾಗುತ್ತಿದೆ..

### ಶ್ರೀನಿವಾಸ್ ವಿರುದ್ಧ ದೂರು ನೀಡಲು ನಿರ್ಧಾರ

ತಾಲೂಕು ಕಚೇರಿಗೆ ರೈತರ ಸಮಸ್ಯೆಗಳ ಬಗ್ಗೆಯೇ ಸಾಕಷ್ಟು ಅರ್ಜಿಗಳು ಬರುತ್ತವೆ. ಅದರಲ್ಲೂ ಜಮೀನುಗಳಿಗೆ ಸಂಬಂಧಿಸಿದ ರಸ್ತೆ ಮುಚ್ಚಿರುವುದು, ಒತ್ತುವರಿ ತೆರವು ಸಂಬಂಧ ಅತೀ ಹೆಚ್ಚಿನ ದೂರುಗಳು ಬರುತ್ತವೆ. ರೈತರ ಕೆಲಸಗಳನ್ನು ತ್ವರಿತಗತಿಯಲ್ಲಿ ಮಾಡಬೇಕು. ಒತ್ತುವರಿ ತೆರವುಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಅಧಿಕಾರಿಗಳಿಗೆ ಖಡಕ್ ಆಗಿ ಸೂಚಿಸಿದ್ದಾರೆ. ರೈತರ ಜಮೀನುಗಳ ರಸ್ತೆ ಸಂಬಂಧವಾಗಿ ಇಂಡಿಯನ್ ಈಸ್ಮೆಂಟ್ ಆಕ್ಟ್ ನ 1882ರಂತೆ ಪ್ರತಿ ಜಮೀನಿನ ಮಾಲೀಕರು ಅಥವಾ ಅನುಭೋಗದಲ್ಲಿರುವವರು ಅವರ ಭೂಮಿಯನ್ನು ಪ್ರವೇಶಿಸುವ ಹಕ್ಕು ಹಾಗೂ ವಹಿವಾಟಿನ ಹಕ್ಕನ್ನು ಹೊಂದಿದ್ದು, ಇದಕ್ಕೆ ಬಾಜುದಾರರಿಂದ ಯಾವುದೇ ಹಸ್ತಕ್ಷೇಪ ಅಥವಾ ಸದರಿ ಹಕ್ಕನ್ನು ಕ್ಷೀಣಿಸುವುದಕ್ಕೆ ಸಾಧ್ಯವಿರು ವುದಿಲ್ಲ. ಈ ನಿಟ್ಟಿನಲ್ಲಿ ಕ್ರಮವಹಿಸಲು ಅವಕಾಶವಿದೆ.

ಅಲ್ಲದೇ, 1973ರ ಕಲಂ 147ರ ಅನ್ವಯ ಭೂಮಿ ಮತ್ತು ನೀರಿನ ಹಕ್ಕಿನ ಉಪಯೋಗದ ಕುರಿತು ಭಂಗ ಉಂಟಾದರೆ ಅದನ್ನು ನಿವಾರಿಸಲು ಕಾನೂನು ರೀತ್ಯಾ ತಹಸೀಲ್ದಾರ್ ತಾಲೂಕು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಆಗಿ ಕ್ರಮವಹಿಸುವ ಅಧಿಕಾರ ಹೊಂದಿದ್ದಾರೆ. ಇದಲ್ಲದೇ, ಕಾಲುದಾರಿ, ಬಂಡಿದಾರಿ ಹಾಗೂ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರಿಗೆ ಅವಕಾಶ ನೀಡದೆ ಅಡ್ಡಿಪಡಿಸುವ, ರಸ್ತೆ(ದಾರಿ)ಗಳು ಮುಚ್ಚಿರುವ ಸಂದರ್ಭಗಳಲ್ಲಿ ಅವುಗಳನ್ನು ತೆರವುಗೊಳಿಸಿ ದಾರಿಗಳನ್ನು ಸುಗಮಗೊಳಿಸಿ ಕ್ರಮವಹಿಸುವಂತೆ 2023 ಅ.20ರಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಇಷ್ಟಿದ್ದರೂ ರೈತರ ಕೆಲಸ ಮಾಡದೆ ಕಾಲಹರಣ ಮಾಡುತ್ತಿರುವ ತಹಸೀಲ್ದಾರ್ ಶ್ರೀನಿವಾಸ್ ವಿರುದ್ಧ ಜಿಲ್ಲಾಧಿ ಕಾರಿ ಹಾಗೂ ಲೋಕಾಯುಕ್ತಕ್ಕೆ ದೂರು ನೀಡಲು ತಾಲೂಕಿನ ಕೆಲ ರೈತ ಸಂಘಟನೆಗಳು ನಿರ್ಧರಿಸಿವೆ.



ನೋಂದಣಿ ಕಚೇರಿಯಲ್ಲಿ ಹಕ್ಕು ಖುಲಾಸೆಯಾಗಿರುವ ಕಡತಗಳನ್ನು ಖಾತೆ ಮಾಡದೆ, ಮಧ್ಯವರ್ತಿಗಳಿಂದ ಕಂದಾಯ ಇಲಾಖೆಯ ಅಧಿಕಾರಿ ಗಳೇ ದೂರು ಕೊಡಿಸಿ, ದೂರು ನೀಡಿರುವ ವಿಚಾರಕ್ಕೆ ಯಾವುದೇ ಪೂರಕ ದಾಖಲೆಗಳಿಲ್ಲ ದಿದ್ದರೂ ಖಾತೆ ಕಡತಗಳನ್ನು ಪೆಂಡಿಂಗ್ ಇಡುತ್ತಾರೆ. ಕೆಲ ಗ್ರಾಮ ಆಡಳಿತಾಧಿಕಾರಿಗಳೇ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದ್ದಾರೆ. ಬಡಜನರ ಕೆಲಸಗಳನ್ನು ಮಾಡದೆ, ಕೆಲ ಕಂದಾಯ ಅಧಿಕಾರಿಗಳು ತಾಲೂಕಿನಲ್ಲಿ ತಮ್ಮ ಮತ್ತು ತಮ್ಮ ಕುಟುಂಬದವರ ಹೆಸರಿಗೆ ಜಮೀನು ನೋಂದಣಿ ಮಾಡಿಸಿಕೊಂಡು ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು.

ಎಂ.ಬಿ.ಕುಮಾರಸ್ವಾಮಿ ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ ಮಾದಾಪುರ ಘಟಕ.

### ಅರ್ಜಿ ಸಲ್ಲಿಸಿ ವರ್ಷ: ರೈತರಿಗಿಲ್ಲ ಹರ್ಷ

ಅಂತರಸಂತೆ ಹೋಬಳಿ ನೂರಲಕುಪ್ಪೆ ಗ್ರಾಮದ ಸ.ನಂ 65ರಲ್ಲಿರುವ ನಾಲ್ಕು ಎಕರೆ ಜಮೀನಿಗೆ ನಕಾಶೆಯಲ್ಲಿದ್ದ ರಸ್ತೆಯನ್ನು ಬಾಜುದಾರರು ಒತ್ತುವರಿ ಮಾಡಿಕೊಂಡಿರುವುದರಿಂದ, ಕೃಷಿ ಸಲಕರಣೆಗಳನ್ನು ಸಾಗಿಸಲು, ಉಳುಮೆ ಮಾಡಲು, ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ತೊಂದರೆಯಾಗುತ್ತಿದ್ದು, ಆರ್ಥಿಕ ನಷ್ಟ ಅನುಭ ವಿಸುತ್ತಿದ್ದೇವೆ. ಆದ್ದರಿಂದ, ಒತ್ತುವರಿ ತೆರವುಗೊಳಿಸಿ ರಸ್ತೆ ನಿರ್ಮಿಸಿಕೊಡುವಂತೆ ಅಂತರಸಂತೆ ಗ್ರಾಮದ ಜಾಫರ್ ಅಲಿ ಅವರು 2024 ಡಿ.5 ರಂದು ತಹಸೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ. ದೂರುದಾರರಿಗೆ ಈವರಿಗೆ ಉತ್ತರವೇ ಬಂದಿಲ್ಲ. ನಿಲುವಾಗಿಲು ಹಾಗೂ ಚೌಡಹಳ್ಳಿ ಎಲ್ಲೆಯ ಸ.ನಂ 51, 52, 54 ಸೇರಿದಂತೆ ಇತರೆ ಜಮೀನುಗಳ ರೈತರು ಪೂರ್ವಜನರ ಕಾಲದಿಂದಲೂ ಕೃಷಿ ಚಟುವಟಿಕೆಗೆ ಬಳಸುತ್ತಿದ್ದ, ಇದೇ ಮಾರ್ಗದಲ್ಲಿದ್ದ ಕೆರೆಗೆ ತೆರಳಿ ಜಾನುವಾರುಗಳಿಗೆ ನೀರು ಕುಡಿಸಲು ಇದ್ದ ರಸ್ತೆಯನ್ನು ಬಾಜುದಾರ ಮುಚ್ಚಿರುವುದರಿಂದ ದನಕರುಗಳು, ಕೃಷಿ ಚಟುವಟಿಕೆಗೆ ತೊಂದರೆಯಾ ಗಿದೆ. ಈ ಬಗ್ಗೆ ಕ್ರಮವಹಿಸುವಂತೆ ತುಂಬಸೋಗೆ ಗ್ರಾಮದ ನಾಗನಾಯಕ ಬಿನ್ ಜವರನಾಯಕ, ಶಿರಮಹಳ್ಳಿ ಗ್ರಾಮದ ಪುಟ್ಟಮ್ಮ, ಹೊಂಬಾಳಯ್ಯ, ರೈತರಾದ ನಾಗೇಶ್, ಅಂಕಪ್ಪ, ವೀರಭದ್ರನಾಯಕ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚಿನ ರೈತರು ಸೆ.30 ರಂದು ಅರ್ಜಿ ಸಲ್ಲಿಸಿ ಮೂರ್ನಾಲ್ಕು ತಿಂಗಳೇ ಕಳೆದರೂ ಅರ್ಜಿ ಸಂಬಂಧ ದೂರುದಾರರಿಗೆ ಕಂದಾಯ ಇಲಾಖೆಯಿಂದ ಈ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

# ಬ್ಯಾಂಕ್ ಪ್ರಭಾರ ಅಧ್ಯಕ್ಷರ ಅಧಿಕಾರ ಸ್ವೀಕಾರ

ಕೆ.ಆರ್.ಪೇಟೆ: ಪಿ.ಎಲ್.ಡಿ ಬ್ಯಾಂಕ್ ಆಡಳಿತ ಮಂಡಳಿಯ ನೂತನ ಪ್ರಭಾರ ಅಧ್ಯಕ್ಷರಾಗಿ ಎಂ.ಆರ್. ರಮೇಶ್ ಅವರು ಅಧಿಕಾರ ಸ್ವೀಕರಿಸಿದರು.

ಹಿಂದಿನ ಅಧ್ಯಕ್ಷರಾದ ಕಬ್ಬಲಗೆರೆ ಪುಟ್ಟಸ್ವಾಮಿಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸಹಕಾರ ಇಲಾಖೆಯ ನಿಯಮದ ಪ್ರಕಾರ ನೂತನ ಪ್ರಭಾರ ಅಧ್ಯಕ್ಷರಾಗಿ ಹಾಲಿ ಉಪಾಧ್ಯಕ್ಷ ಎಂ.ಆರ್. ರಮೇಶ್ ರವರು ಅಧಿಕಾರ ಸ್ವೀಕರಿಸಿದ್ದಾರೆ ಪಿ.ಎಲ್.ಡಿ ಬ್ಯಾಂಕ್ ವ್ಯವಸ್ಥಾಪಕ ಎಂ.ಆನಂದ್ ಪ್ರಕಟಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಪ್ರಭಾರ ಅಧ್ಯಕ್ಷ ಎಂ.ಆರ್ ರಮೇಶ್ ನಾನು ಮೊದಲ ಬಾರಿಗೆ ಬ್ಯಾಂಕ್ ನಿರ್ದೇಶಕರಾಗಿ ಸರ್ವಾನುಮತದಿಂದ ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಿದ್ದ ನಿರ್ದೇಶಕರು ಈಗ ಮತ್ತೆ ಪ್ರಭಾರ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಹಾಗಾಗಿ ಬ್ಯಾಂಕಿನ ಎಲ್ಲಾ ನಿರ್ದೇಶಕರಿಗೆ ಋಣಿಯಾಗಿರುತ್ತೇನೆ. ನನಗೆ ಸಿಕ್ಕಿರುವ ಅಧಿಕಾರದ ಅವಧಿಯಲ್ಲಿ ಬ್ಯಾಂಕಿನ ಶೇರುದಾರ ಸದಸ್ಯರಿಗೆ ಕೊಡಿಸಬಹುದಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲು ಹಿರಿಯ ನಿರ್ದೇಶಕರಾದ ಕಬ್ಬಲಗೆರೆ ಪುಟ್ಟಸ್ವಾಮೀಗೌಡ ಅವರ ಮಾರ್ಗದರ್ಶನದಲ್ಲಿ ಶ್ರಮಿಸುತ್ತೇನೆ. ಈ ಮೂಲಕ



ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ನೂತನ ಪ್ರಭಾರ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ಆರ್.ರಮೇಶ್ ಅವರನ್ನು ಬ್ಯಾಂಕಿನ ನಿರ್ದೇಶಕರು ಮುಖಂಡರು ಹಾರ ಹಾಕಿ,ಸಿಹಿ ತಿನ್ನಿಸುವ ಮೂಲಕ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಿ.ಎಲ್.ಡಿ ಬ್ಯಾಂಕ್ ನಿಕಟ ಪೂರ್ವ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ನಿರ್ದೇಶಕರಾದ ಅಣ್ಣೇಚಾಕನಹಳ್ಳಿ ನಾಗರಾಜೇಗೌಡ, ನಿರ್ದೇಶಕರಾದ ಮಾಳಗೂರು ಜಗದೀಶ್,ಬಣ್ಣೇನಹಳ್ಳಿ ಬಿ.ಎನ್. ಧನಂಜಯ್, ಲಕ್ಷ್ಮೀಪುರ ಚಂದ್ರೇಗೌಡ, ಬಂಡಿಹೊಳೆ ನಾಗೇಶ್, ಮಂಜುಳಾ ಕೃಷ್ಣೇಗೌಡ,ಕವಿತ ಚಂದ್ರೇಗೌಡ, ಅರೆಬೊಪ್ಪನಹಳ್ಳಿ ಸುನಿಲ್, ಗ್ರಾ.ಪಂ.ಸದಸ್ಯ ಹೊನ್ನೇನಹಳ್ಳಿ ಕೃಷ್ಣೇಗೌಡ ಸೇರಿದಂತೆ ಉಪಸ್ಥಿತರಿದ್ದರು.

ಶ್ರೀನಿಧಿಕುದರ್ ಹೇಳಿಕೆ

# ಯುವಕರು ಕ್ರೀಡಾ ಮನೋಭಾವನೆ ಬೆಳಸಿಕೊಳ್ಳಿ

ಚಾಮರಾಜನಗರ, ಚಾಮರಾಜೇಶ್ವರ ಕ್ರಿಕೆಟ್ ಕ್ಲಬ್ ವತಿಯಿಂದ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಗುಂಡ್ಲುಪೇಟೆ ತಾಲೂಕಿನ ಅಣ್ಣೂರು ಕ್ರಿಕೆಟ್ ತಂಡ ಪ್ರಥಮ ಸ್ಥಾನ ಪಡೆದು ನಗದು ಬಹುಮಾನ, ಆಕರ್ಷಕ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿರೆ. ನಂಜನಗೂಡು ತಾಲೂಕಿನ ಗಟ್ಟವಾಡಿಪುರ ಕ್ರಿಕೆಟ್ ತಂಡ ದ್ವಿತೀಯ ಸ್ಥಾನ ಪಡೆದು ನಗದು ಬಹುಮಾನ, ಆಕರ್ಷಕ ಟ್ರೋಫಿಯನ್ನು ಪಡೆದುಕೊಂಡಿದೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಾಲ್ಕು ದಿನಗಳಿಂದ ನಡೆದ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಸುತ್ತಿನಲ್ಲಿ ಗುಂಡ್ಲುಪೇಟೆ ತಾಲೂಕಿನ ಅಣ್ಣೂರು ಕ್ರಿಕೆಟ್ ತಂಡ, ನಂಜನಗೂಡು ತಾಲೂಕಿನ ಗಟ್ಟವಾಡಿಪುರ ಕ್ರಿಕೆಟ್ ತಂಡದ ನಡುವೆ ಸೆಣಸಾಟ ಏರ್ಪಟ್ಟು ಅಣ್ಣೂರು ಕ್ರಿಕೆಟ್ ತಂಡ ಪ್ರಥಮ ಸ್ಥಾನ, ಗಟ್ಟವಾಡಿಪುರ ಕ್ರಿಕೆಟ್ ತಂಡ ದ್ವಿತೀಯ ಸ್ಥಾನ ಪಡೆದಿದೆ.

ಸಮಾರೋಪ ಸಮಾರಂಭದಲ್ಲಿ ಎರಡು ತಂಡಗಳಿಗೆ ಉದ್ಯಮಿ ಶ್ರೀನಿಧಿ ಕುದರ್ ನಗದು ಬಹುಮಾನ, ಆಕರ್ಷಕ ಟ್ರೋಫಿ ವಿತರಿಸಿ ಮಾತನಾಡಿ,




ಎಲ್ಲ ಕ್ರೀಡಾಭಿಮಾನಿಗಳನ್ನು ಕ್ರೀಡಾಂಗಣದಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿ ಕ್ರಿಕೆಟ್ ಪಂದ್ಯಾವಳಿಗಿದೆ. ಕ್ರೀಡಾಭಿಮಾನಿಗಳಿಗೆ ಹಬ್ಬದ ವಾತಾವರಣವೇ ಸೃಷ್ಟಿಯಾಗಲಿದೆ. ಹಾಗಾಗಿ ಕ್ರೀಡಾಪಟುಗಳು ಕ್ರೀಡಾ ಮನೋಭಾವನೆಯಿಂದ ಭಾಗವಹಿಸಿ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಬೇಕು. ಗೆದ್ದವರು ಅಹಂಪಡದೆ ಸೋತವರು ಧೃತಿಗೆಡದೆ ಸತತ ಅಭ್ಯಾಸದಲ್ಲಿ ತೊಡಗಿಕೊಳ್ಳಬೇಕು ಎಂದರು. ಸಮಾರೋಪ ಸಮಾರಂಭದಲ್ಲಿ ಬುಲೆಟ್ ಚಂದ್ರು, ವಿಶಾಲ್, ವಿಶ್ವ, ಮಹೇಂದ್ರ, ನಿರಂಜನ್, ವಿನಯ್, ಮಹೇಶ್ ವಿರಾಟ್, ಚಿದು, ಕ್ರಿಕೆಟ್ ಆಟಗಾರರು, ಅಭಿಮಾನಿಗಳು ಭಾಗವಹಿಸಿದ್ದರು.

# ಪ್ರತಿಯೊಬ್ಬ ಮನುಷ್ಯನ ಜೀವವು ಅತ್ಯಮೂಲ್ಯ

## ಪ್ರತಿಯೊಬ್ಬರೂ ಉತ್ತಮ ಜೀವನ ನಡೆಸಲು ಭಾರತೀಯ ಸಂವಿಧಾನ ಹಕ್ಕುಗಳನ್ನು ನೀಡಿದೆ: ಆನಂದ್. ಎಂ



**ಮಂಡ್ಯ:** ಇಂದು ನಗರದ ಪ್ರಾದೇಶಿಕ ಸಾರಿಗೆ ಕಚೇರಿಯ ಆವರಣದಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಕಚೇರಿಯ ವತಿಯಿಂದ ನಡೆದ 37 ನೇ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಹಾಸಾಚರಣೆ–2026 "ರಸ್ತೆ ಸುರಕ್ಷೆ –ಜೀವದ ರಕ್ಷೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ನಾವು ಬದುಕಬೇಕು ಹಾಗೂ ಉಳಿದವರನ್ನು ಬದುಕಲು ಬಿಡಬೇಕು. ಇಂದಿನಿಂದ ಎಲ್ಲರೂ ರಸ್ತೆ ನಿಯಮಗಳನ್ನು ಪಾಲಿಸಬೇಕು ಎಂಬ ಸಂಕಲ್ಪವನ್ನು ಮಾಡುವ ಮೂಲಕ ರಸ್ತೆ ಅಪಘಾತಗಳನ್ನು ತಪ್ಪಿಸೋಣ ಎಂದು ಹೇಳಿದರು.

ಇತ್ತೀಚಿಗಷ್ಟೇ ಮೈಸೂರು ಬೆಂಗಳೂರು ಹೈವೇ ಮಾಡಿ ವಾಹನಗಳಿಗೆ ವೇಗದ ಮಿತಿಯನ್ನು ಆಳವಡಿಸಲಾಯಿತು ಆದರೂ ಸಹ ಅಪಘಾತಗಳ ಪ್ರಕರಣಗಳು ಹೆಚ್ಚಾಗುತ್ತಿವೆ. ಬೆಂಗಳೂರಿನಂತಹ ಮಹಾನಗರಗಳಲ್ಲಿ ರಸ್ತೆಗೊಂಡಿಯಿಂದ ಅಪಘಾತ ಸಂಭವಿಸುತ್ತಿವೆ ಆದರೆ ಮಂಡ್ಯದಲ್ಲಿ ಅಂತಹ ರಸ್ತೆಗಳು ಹೆಚ್ಚು ಇಲ್ಲ. ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಿ ರಸ್ತೆ ಸುರಕ್ಷತಾ ಮಾಸಾಚರಣೆಗೆ ಕಾರ್ಯಕ್ರಮದ ಕುರಿತು ಜಾಗೃತಿ ಮೂಡಿಸಬೇಕು ಎಂದರು.

18 ವರ್ಷ ಮೇಲ್ಪಟ್ಟವರಿಗೆ ಮಾತ್ರ ವಾಹನ ಪರವಾಗಿ ನೀಡಲಾಗುತ್ತದೆ ಆದರೆ ತಂದೆ ತಾಯಿಗಳು ತಮ್ಮ ಮಕ್ಕಳು ವಾಹನ ಚಾಲನೆಯನ್ನು ಕಲಿಯಲಿ ಎಂಬ ಉದ್ದೇಶದಿಂದ ಅಪ್ರಾಪ್ತ ಮಕ್ಕಳಿಗೆ ವಾಹನವನ್ನು ನೀಡುತ್ತಿದ್ದಾರೆ. ಇದರಿಂದ ಅದೆಷ್ಟು ಅಪ್ರಾಪ್ತ ಮಕ್ಕಳು ಅಪಘಾತಕ್ಕೆ ಬಲಿಯಾಗಿದ್ದಾರೆ ಇದರ ಕುರಿತಾಗಿ ತಂದೆ ತಾಯಿಗಳು ಜಾಗೃತಿ ವಹಿಸಬೇಕು. ಅಪ್ರಾಪ್ತ ಮಕ್ಕಳಿಗೆ ವಾಹನ ಪರವಾನಿಗೆಲ್ಲದೆ ವಾಹನಗಳನ್ನು ನೀಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ ಇದರ ಅಡಿ 25,000 ದಂಡ ಹಾಗೂ ಪೋಷಕರಿಗೆ ಜೈಲು ಶಿಕ್ಷೆಯನ್ನು ಸಹವಿಧಿಸಬಹುದು ಎಂದು ಹೇಳಿದರು.

ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ. ಆಟೋ ಚಾಲಕರು ತಮ್ಮ ಸಹೋದ್ಯೋಗಿಗಳಿಗೆ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಅರಿವು ಮೂಡಿಸಬೇಕು. ಸಿಗ್ನಲ್ ಗಳನ್ನು ಜಂಪ್ ಮಾಡಿ ಕಷ್ಟಪಟ್ಟು ದುಡಿದ ಹಣವನ್ನು ದಂಡಕ್ಕೆ ನೀಡಬೇಡಿ. ಕಾನೂನು ಸೇವಗಳ ಪ್ರಾಧಿಕಾರದ ಮೂಲಕ ಕಳೆದ ಎರಡು ಲೋಕ ಅದಾಲತ್ ಗಳಲ್ಲಿ ಸಂಚಾರಿ ದಂಡವನ್ನು ಶೇ 50 ರಷ್ಟು ಪಾವತಿ ಮಾಡುವಂತೆ ಅವಕಾಶ ಅರ್ಪಿಸಲಾಯಿತು ಸಾಕಷ್ಟು ಜನರು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ದಂಡವನ್ನು ತೆತ್ತಿದರು ಎಂದು ಹೇಳಿದರು.

ಸಂಚಾರಿ ನಿಯಮಗಳನ್ನು ಪಾಲಿಸುವುದರಿಂದ ಸರ್ಕಾರಕ್ಕೆ ದಂಡವನ್ನು ಕಟ್ಟುವ ಅನಿವಾರ್ಯತೆ ಇರುವುದಿಲ್ಲ. ವಾಹನ ಚಲಾವಣೆ ಮಾಡುವಾಗ ಎಚ್ಚರಿಕೆವಹಿಸಿ ಜಾಗೃತವಾಗಿ ವಾಹನ ಚಲಾಯಿಸಿ. ರಸ್ತೆ ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಅಪಘಾತಗಳನ್ನು ಕಡಿಮೆ ಮಾಡೋಣ ಎಂದು ಕರೆ ನೀಡಿದರು.

ಹೆಚ್ಚುವರಿ ಪೊಲೀಸ್ ಅಧಿಕಾರಿಯಾದ ತಿಮ್ಮಯ್ಯ ಅವರು ಮಾತನಾಡಿ ಜಿಲ್ಲೆಯಲ್ಲಿ 2025 ನೇ ಸಾಲಿನಲ್ಲಿ 496 ಮಾರಣಾಂತಿಕ ಅಪಘಾತಗಳು ಸಂಭವಿಸಿ 547 ಜನರು ಸಾವನ್ನಪ್ಪಿದ್ದಾರೆ. 3000ಕ್ಕೂ ಹೆಚ್ಚು ಸಣ್ಣಪುಟ್ಟ ಅಪಘಾತಗಳು ಸಂಭವಿಸಿದೆ ಇದರಿಂದ ಅನೇಕರು ಕಾಲು ಕೈ ದೃಷ್ಟಿಯನ್ನು ಕಳೆದುಕೊಂಡಿದ್ದಾರೆ. ಇವೆಲ್ಲ ಪ್ರಕರಣಗಳನ್ನು ಅವಲೋಕಿಸಿದಾಗ ಹೆಚ್ಚಿನ ಪ್ರಕರಣಗಳಲ್ಲಿ ಯುವಜನತೆ ಅಪಘಾತಗಳಿಗೆ ಒಳಗಾಗಿದೆ ಎಂದು ಹೇಳಿದರು.

ಅನೇಕ ಅಪಘಾತಗಳು ಸಂಚಾರಿ ನಿಯಮಗಳನ್ನು ಪಾಲಿಸದೆ ಹೋದ ಸಂದರ್ಭದಲ್ಲಿ ಸಂಭವಿಸಿದೆ. ವಾಹನ ಚಲಾಯಿಸುವಾಗ ನಾವು ನಮ್ಮ ಬಗ್ಗೆ ಯೋಚಿಸಬೇಕು ಹಾಗೂ ನಮ್ಮ ಕುಟುಂಬದ ಕುರಿತಾಗಿಯೂ ಯೋಚಿಸಬೇಕು. ವಾಹನವನ್ನು ನಿಧಾನವಾಗಿ ಚಲಾಯಿಸಬೇಕು. ಅತಿಯಾದ ವೇಗದಲ್ಲಿ ವಾಹನ ಚಲಾಯಿಸುವುದರಿಂದ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೂ ಅಪಾಯ ಉಂಟಾಗುತ್ತದೆ. ಪೋಷಕರು ತಮ್ಮ ಮಕ್ಕಳಿಗೆ 18 ವರ್ಷಗಳು ಆದ ನಂತರ ವಾಹನಗಳನ್ನು ನೀಡಿ ಎಂದು ಹೇಳಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ ರವರು ಮಾತನಾಡಿ ರಸ್ತೆಯ ಅಪಘಾತಗಳನ್ನ ಕಡಿಮೆ ಮಾಡುವ ಉದ್ದೇಶದಿಂದ ಎಲ್ಲಾ ನಾಗರಿಕರಿಗೂ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗು ಅರಿವನ್ನ ಮೂಡಿಸಲು 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚಾರಣೆ ಕಾರ್ಯಕ್ರಮವನ್ನ ಅಯೋಜನೆ ಮಾಡಲಾಗಿದೆ ಎಂದರು.

ಸಾರ್ವಜನಿಕರು ಕಾನೂನು ಉಲ್ಲಂಘನೆ ಮಾಡುವುದರಿಂದ ಹೆಚ್ಚು ಅಪಘಾತಗಳು ಉಂಟಾಗುತ್ತಿವೆ ಲೈಸೆನ್ಸ್ ಪಡೆದವರು ಸಹ ಕಾನೂನು ಉಲ್ಲಂಘನೆ ಮಾಡುವುದರಿಂದ ಹೆಚ್ಚು ಅಪಘಾತಗಳು ಸಂಭಾವಿಸುತ್ತಿವೆ. ಸಾರ್ವಜನಿಕರು ವಾಹನವನ್ನು ಚಲಾಯಿಸುವಾಗ ದ್ವಿಚಕ್ರ ವಾಹನ ಸಾವರಾರು ಹೆಲ್ಮೆಟ್ ಅನ್ನು ಧರಿಸುವುದು ಮತ್ತು ನಾಲ್ಕು ಚಕ್ರ ವಾಹನಗಳು ಸೀಟ್ ಬೆಲ್ಟ್ ಅನ್ನು ಧರಿಸಬೇಕು ಹಾಗೂ ಕಾನೂನು ಉಲ್ಲಂಘನೆಯಾಗದಂತೆ ಸಿಗ್ನೇಲ್ ಗಳಲ್ಲಿ ಚಿಹ್ನೆಗಳನ್ನು ಅಳವಡಿಸಲಾಗಿದೆ ಅದರಂತೆ ಸಾರ್ವಜನಿಕರು ವಾಹನ ಚಲಿಸಬೇಕು ಇಲ್ಲವಾದಲ್ಲಿ ದಂಡವನ್ನು ವಿಧಿಸಲಾಗುವುದು ಆದ್ದರಿಂದ ಜಾಗೃತವಾಗಿ ವಾಹನವನ್ನು ಚಲಾಯಿಸಿ ಎಂದು ಹೇಳಿದರು.

ನಂತರ ರಸ್ತೆ ಸಂಚಾರಿ ನಿಯಮಗಳನ್ನು ಉಲ್ಲಂಘಿಸದಂತೆ ಪ್ರಮಾಣವಚನ ಬೋಧಿಸಿ. ಪ್ರಾದೇಶಿಕ ಸಾರಿಗೆ ಕಚೇರಿಯ ಆವರಣದಲ್ಲಿ ಸಸಿಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆಯ ಮೋಟಾರ್ ವಾಹನ ಅಧಿಕ್ಷಕರುಗಳಾದ ಚಿಕ್ಕ ಮಾದೇಗೌಡ, ಅಶೋಕ್, ಪ್ರಾದೇಶಿಕ ಸಾರಿಗೆ ಇಲಾಖೆಯ ನಿವೃತ್ತ ಅಧೀಕ್ಷಕರಾದ ಪ್ರಸಾದ್ ಮಂಗಲ ಯೋಗೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಇತರರು ಬದುಕಲು ಕಟ್ಟುನಿಟ್ಟಾಗಿ ರಸ್ತೆ ನಿಯಮ ಪಾಲಿಸಿ

# ರಸ್ತೆ ಸುರಕ್ಷೆ–ಜೀವದ ರಕ್ಷೆ



**ಮಂಡ್ಯ:** ಪ್ರತಿಯೊಬ್ಬ ಮನುಷ್ಯನ ಜೀವನವು ಅತ್ಯಮೂಲ್ಯ. ಪ್ರತಿಯೊಬ್ಬರೂ ಉತ್ತಮವಾಗಿ ಜೀವನ ನಡೆಸಲು ಭಾರತೀಯ ಸಂವಿಧಾನ ಪ್ರತ್ಯೇಕ ಹಕ್ಕುಗಳನ್ನು ನೀಡಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ ಅವರು ಹೇಳಿದರು.

ಸೋಮವಾರ ನಗರದ ಪ್ರಾದೇಶಿಕ ಸಾರಿಗೆ ಕಚೇರಿಯ ಆವರಣದಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಕಚೇರಿಯ ವತಿಯಿಂದ ನಡೆದ 37 ನೇ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆ–2026 'ರಸ್ತೆ ಸುರಕ್ಷೆ –ಜೀವದ ರಕ್ಷೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ನಾವು ಬದುಕಬೇಕು ಹಾಗೂ ಉಳಿದವರನ್ನು ಬದುಕಲು ಬಿಡಬೇಕು. ಇಂದಿನಿಂದ ಎಲ್ಲರೂ ರಸ್ತೆ ನಿಯಮಗಳನ್ನು ಪಾಲಿಸಬೇಕು ಎಂಬ ಸಂಕಲ್ಪವನ್ನು ಮಾಡುವ ಮೂಲಕ ರಸ್ತೆ ಅಪಘಾತಗಳನ್ನು ತಪ್ಪಿಸೋಣ ಎಂದು ಹೇಳಿದರು.

ಇತ್ತೀಚಿಗಷ್ಟೇ ಮೈಸೂರು ಬೆಂಗಳೂರು ಹೈವೇ ಮಾಡಿ ವಾಹನಗಳಿಗೆ ವೇಗದ ಮಿತಿಯನ್ನು ಆಳವಡಿಸಲಾಯಿತು ಆದರೂ ಸಹ ಅಪಘಾತಗಳ ಪ್ರಕರಣಗಳು ಹೆಚ್ಚಾಗುತ್ತಿವೆ. ಬೆಂಗಳೂರಿನಂತಹ ಮ ಹಾ ನ ಗ ರ ಗ ಳ ಲ್ಲಿ ರಸ್ತೆಗೊಂಡಿಯಿಂದ ಅಪಘಾತ ಸಂಭವಿಸುತ್ತಿವೆ ಆದರೆ ಮಂಡ್ಯದಲ್ಲಿ ಅಂತಹ ರಸ್ತೆಗಳು ಹೆಚ್ಚು ಇಲ್ಲ. ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಿ ರಸ್ತೆ ಸುರಕ್ಷತಾ ಮಾಸಾಚರಣೆಗೆ ಕಾರ್ಯಕ್ರಮದ ಕುರಿತು ಜಾಗೃತಿ ಮೂಡಿಸಬೇಕು ಎಂದರು.

18 ವರ್ಷ ಮೇಲ್ಪಟ್ಟವರಿಗೆ ಮಾತ್ರ ವಾಹನ ಪರವಾಗಿ ನೀಡಲಾಗುತ್ತದೆ ಆದರೆ ತಂದೆ ತಾಯಿಗಳು ತಮ್ಮ ಮಕ್ಕಳು ವಾಹನ ಚಾಲನೆಯನ್ನು ಕಲಿಯಲಿ ಎಂಬ ಉದ್ದೇಶದಿಂದ ಅಪ್ರಾಪ್ತ ಮಕ್ಕಳಿಗೆ ವಾಹನವನ್ನು ನೀಡುತ್ತಿದ್ದಾರೆ. ಇದರಿಂದ ಅದೆಷ್ಟು ಅಪ್ರಾಪ್ತ ಮಕ್ಕಳು ಅಪಘಾತಕ್ಕೆ ಬಲಿಯಾಗಿದ್ದಾರೆ ಇದರ ಕುರಿತಾಗಿ ತಂದೆ ತಾಯಿಗಳು ಜಾಗೃತಿ ವಹಿಸಬೇಕು. ಅಪ್ರಾಪ್ತ ಮಕ್ಕಳಿಗೆ ವಾಹನ ಪರವಾನಿಗೆಲ್ಲದೆ ವಾಹನಗಳನ್ನು ನೀಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ ಇದರ ಅಡಿ 25,000 ದಂಡ ಹಾಗೂ ಪೋಷಕರಿಗೆ ಜೈಲು ಶಿಕ್ಷೆಯನ್ನು ಸಹವಿಧಿಸಬಹುದು ಎಂದು ಹೇಳಿದರು.

ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ. ಆಟೋ ಚಾಲಕರು ತಮ್ಮ ಸಹೋದ್ಯೋಗಿಗಳಿಗೆ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಅರಿವು ಮೂಡಿಸಬೇಕು. ಸಿಗ್ನಲ್ ಗಳನ್ನು ಜಂಪ್ ಮಾಡಿ ಕಷ್ಟಪಟ್ಟು ದುಡಿದ ಹಣವನ್ನು ದಂಡಕ್ಕೆ ನೀಡಬೇಡಿ. ಕಾನೂನು ಸೇವಗಳ ಪ್ರಾಧಿಕಾರದ ಮೂಲಕ ಕಳೆದ ಎರಡು ಲೋಕ ಅದಾಲತ್ ಗಳಲ್ಲಿ ಸಂಚಾರಿ ದಂಡವನ್ನು ಶೇ 50 ರಷ್ಟು ಪಾವತಿ ಮಾಡುವಂತೆ ಅವಕಾಶ ಅರ್ಪಿಸಲಾಯಿತು ಸಾಕಷ್ಟು ಜನರು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ದಂಡವನ್ನು ತೆತ್ತಿದರು ಎಂದು ಹೇಳಿದರು. ಸಂಚಾರಿ ನಿಯಮಗಳನ್ನು ಪಾಲಿಸುವುದರಿಂದ ಸರ್ಕಾರಕ್ಕೆ ದಂಡವನ್ನು ಕಟ್ಟುವ ಅನಿವಾರ್ಯತೆ ಇರುವುದಿಲ್ಲ. ವಾಹನ ಚಲಾವಣೆ ಮಾಡುವಾಗ ಎಚ್ಚರಿಕೆವಹಿಸಿ ಜಾಗೃತವಾಗಿ ವಾಹನ ಚಲಾಯಿಸಿ. ರಸ್ತೆ ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಅಪಘಾತಗಳನ್ನು ಕಡಿಮೆ ಮಾಡೋಣ ಎಂದು ಕರೆ ನೀಡಿದರು.

# ಕರಡಿಕೊಪ್ಪಲಿನಲ್ಲಿ ಸಿದ್ದರಾಮಯ್ಯ ಅಭಿಮಾನಿಗಳಿಂದ ಸಂಭ್ರಮಾಚರಣೆ



**ಮಂಡ್ಯ:** ಸಿಎಂ ಸಿದ್ದರಾಮಯ್ಯ ಅವರು ಜನವರಿ 6 ಕ್ಕೆ ರಾಜ್ಯದಲ್ಲಿ ಸುದೀರ್ಘ ಅವಧಿ ಆಡಳಿತ ನಡೆಸಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ನಿಮಿತ್ತ ಜನವರಿ 7 ರಂದು ತಾಲೂಕಿನ ಕರಡಿಕೊಪ್ಪಲು ಗ್ರಾಮದಲ್ಲಿ ಸಿದ್ದರಾಮಯ್ಯ ಅಭಿಮಾನಿಗಳಿಂದ ಸಂಭ್ರಮಾಚರಣೆ ಏರ್ಪಡಿಸಲಾಗಿದೆ ಎಂದು ಕೆಪಿಸಿಸಿ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಸಿ.ಪುಟ್ಟಸ್ವಾಮಿಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯ ಅವರು ದಿವಂಗತ ದೇವರಾಜು ಅರಸು ಅವರ ದಾಖಲೆ ಸರಿಗಟ್ಟಿ, ಹೊಸ ದಾಖಲೆ ಬರೆಯಲಿದ್ದಾರೆ. ಈ ಸಂಭ್ರಮ ವಿಶೇಷ ದಿನವನ್ನು ಜನವರಿ 7 ರ ಬುಧವಾರದಂದು ಸಂಜೆ 6 ಗಂಟೆಗೆ ಮಂಡ್ಯ ತಾಲೂಕಿನ ಕರಡಿಕೊಪ್ಪಲು ಗ್ರಾಮದಲ್ಲಿ ಆಚರಿಸಿ ಗ್ರಾಮಸ್ಥರಿಗೆ ಸಿಹಿ ಹಂಚಿ ಸಂಭ್ರಮಿಸಿ ಭೋಜನ ಕೂಟ ಕಾರ್ಯಕ್ರಮ ಏರ್ಪಡಿಸುತ್ತಿದ್ದೇವೆ ಎಂದು ತಿಳಿಸಿದರು.

ಈ ಸಂಭ್ರಮ ಕಾರ್ಯಕ್ರಮಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್ ಗಣಿಗ, ಡಾ.ರಾಮ ಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ದಡದಪುರ ಶಿವಣ್ಣ, ಮೈಸೂರು–ಚಾಮರಾಜನಗರ ಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ, ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚ್ಚಿನ್ ಚಲುವರಾಯಸ್ವಾಮಿ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಎಂ.ಎಲ್.ಸುರೇಶ್, ಮಂಡ್ಯ ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಮನ್‌ಮುಲ್ ಅಧ್ಯಕ್ಷ ಉಮ್ಮಡಹಳ್ಳಿ ಶಿವಪ್ಪ, ಮೈಸೂರು ಮಹಾನಗರ ಪಾಲಿಕೆ ಸದಸ್ಯ ಜೆ.ಗೋಪಿ, ಹೊಳೆನರಸೀಪುರ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಮಂಜೇಗೌಡ, ಚಲನಚಿತ್ರ ನಿರ್ಮಾಪಕ ಮಾವಿನಕೆರೆ ಸುರೇಶ್ ಸೇರಿದಂತೆ ಮತ್ತಿತರ ಕಾಂಗ್ರೆಸ್ ಮುಖಂಡರುಗಳು ಭಾಗವಹಿಸುತ್ತಿದ್ದು ಈ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಅಭಿಮಾನಿಗಳು ಹಾಗೂ ಹಾಗೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅವರು ಮನವಿ ಮಾಡಿದರು.

ಗೋಷ್ಠಿಯಲ್ಲಿ ಕೆಂಚಪ್ಪ,ಅಶೋಕ್ ಇದ್ದರು.

# ಫೆ.3 ರಂದು ನೇರಲಕೆರೆಯಲ್ಲಿ ಸರ್ವಧರ್ಮ ಮಾನವ ಸಮ್ಮೇಳನ



**ಮಂಡ್ಯ:** ಮನುಜ ಮತ, ವಿಶ್ವಪಥ ಸಂದೇಶ ಸಾರಿದ ಕುವೆಂಪು, ಇವನಾರವ, ಇವನಾರವ ಎಂದೆಣಿಸದಿರಯ್ಯ ಎಂದ ಬಸವಣ್ಣ,ಕುಲ ಕುಲವೆಂದು ಹೊಡೆದಾಡದಿರಿ ಎಂದ ಭಕ್ತ ಕನಕದಾಸ,ಶಾಂತಿ, ಕರುಣೆ, ಪ್ರೀತಿ, ಮೈತ್ರಿ ಪ್ರತಿಪಾದಿಸಿದ ಗೌತಮಬುದ್ಧ ಈ ಮಹಾತ್ಮರ ಉದ್ದೇಶಗಳಿಗೆ ಪ್ರೇರಣೆ ನೀಡುವ ದೃಷ್ಟಿಯಿಂದ ಫೆಬ್ರವರಿ 3, ರಂದು ಶ್ರೀರಂಗಪಟ್ಟಣ ತಾಲ್ಲೂಕಿನ ನೇರಲಕೆರೆಯಲ್ಲಿ ಸರ್ವಧರ್ಮ ಮಾನವ ಸಮ್ಮೇಳನ–2026 ನ್ನು ಆಯೋಜಿಸಲಾಗಿದೆ ಎಂದು ಬುದ್ಧ ಭಾರತ ಪೌಡೇಷನ್ ಅಧ್ಯಕ್ಷ ಜೆ.ರಾಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ನಾಡಿನ ಸಾಕ್ಷಿಪ್ರಜ್ಞೆಯಂತಿರುವ ಸರ್ವಧರ್ಮದ ಮುಖಂಡರಾದ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಸಮ್ಮೇಳನ ನಡೆಯಲಿದೆ ಎಂದರು.

ಗೌತಮ ಬುದ್ಧರ ಅಷ್ಟಾಂಗ ಮಾರ್ಗಗಳ ಸಂದೇಶ ಸಾರಲು ಪ್ರಗತಿಪರ ಚಿಂತಕರು, ಸಂಘಟನೆಗಳು, ಮಾನವಪರ ಜೀವಪರ ವ್ಯಕ್ತಿಗಳು ಎಲ್ಲರೂ ಸೇರಿ ನೇರಲಕೆರೆಯಲ್ಲಿ "ಸರ್ವಧರ್ಮ ಮಾನವ ಸಮ್ಮೇಳನ–2026" ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ.

ಈ ಕಾರ್ಯಕ್ರಮದಲ್ಲಿ ಸುತ್ತೂರಿನ ಶ್ರೀ ಶಿವರಾತ್ರೀಶ್ವರದೇಶೀಕೇಂದ್ರಸ್ವಾಮೀಜಿಗಳು, ಜೆ.ಎಸ್.ಎಸ್. ಮೈಸೂರು, ಜ್ಞಾನ ಪ್ರಕಾಶ್ ಸ್ವಾಮೀಜಿ ಉರಿಲಿಂಗಿಪೆದ್ದಿಮಠ, ಮೈಸೂರು, ಆನಂದಬಂತೆ ಬೌದ್ಧ ಧಮ್ಮ ಅನುಯಾಯಿಗಳು ಮಹಾಬೋಧಿ ಸೊಸೈಟಿ, ಬೆಂಗಳೂರು, ಮನೋರಬ್ಬಿತಬಂತೆ ಜೇತವನ, ಕೊಳ್ಳೇಗಾಲ,ಬೋಧಿದತ್ತಬಂತೆ,ಮುಖ್ಯರು. ನಳಂದ ವಿ.ವಿ.. ಚಾಮರಾಜನಗರ, ಕ್ರೈಸ್ತ ಧರ್ಮದ ಪಾದ್ರಿಗಳು, ಮುಸ್ಲಿಂ ಧರ್ಮದ ಮೌಲ್ವಿಗಳು, ಸಿಖ್ ಧರ್ಮದ ಧಾರ್ಮಿಕ ಮುಖಂಡರು, ಜೈನ ಧರ್ಮದ ಜೈನಮುನಿಗಳು ಹಾಗೂ ಇತರ ಧರ್ಮದ ಧಾರ್ಮಿಕ ಮುಖಂಡರುಗಳು ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಾರೆ ಎಂದು ವಿವರಿಸಿದರು.

ಇವರುಗಳಲ್ಲದೇ ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್ ಗಣಿಗ ರವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಿದ್ದೇವೆ ಎಂದರು.

ಈ ಕಾರ್ಯಕ್ರಮದಲ್ಲಿ ಬೌದ್ಧ ಬಿಕ್ಕುಗಳಿಂದ ಲೋಕಶಾಂತಿ ಮತ್ತು ಪ್ರಗತಿಗಾಗಿ ಮೆತ್ತಭಾವ ಪ್ರಾರ್ಥನೆ, ಬೌದ್ಧ ಸಮ್ಮೇಳನ–2026 ಉದ್ಘಾಟನೆ, ವಿಶ್ವಮೈತ್ರಿ ಬೌದ್ಧ ಧಮ್ಮ ಧ್ಯಾನ ಮತ್ತು ಇತರ ಕೇಂದ್ರಗಳ ಉದ್ಘಾಟನೆ, ವೃದ್ಧಾಶ್ರಮ,ಲೈಬ್ರರಿ,ರತನ್ ಟಾಟಾ ಸ್ಮರಣಾರ್ಥ ಎ.ಜೆ. ಉದ್ಯೋಗಾಧಾರಿತ ತರಬೇತಿ ಕೇಂದ್ರ ಉದ್ಘಾಟನೆ, 50 ಜನ ಬೌದ್ಧ ಧಮ್ಮಚಾರಿಗಳಿಗೆ ಅಭಿನಂದಿಸಲಾಗುವುದು ಎಂದು ತಿಳಿಸಿದರು. ಗೋಷ್ಠಿಯಲ್ಲಿ ಗಂಗರಾಜು ಹನಕೆರೆ,ನಿರಂಜನ್ ಬೌದ್ಧ,ಮಹೇಂದ್ರ,ಎಂ.ವಿಕೃಷ್ಣ ಮೋಹನ್ ಪ್ರಬುದ್ಧಿ,ಅನ್ನದಾನಿ ಮುಂತಾದವರಿದ್ದರು

# ಕಲುಷಿತ ನೀರು, ಮಾಲಿನ್ಯ ದೂರಿಗೆ ಕಂಟ್ರೋಲ್ ರೂಮ್

## ಪ್ರಕೃತಿ ವಿಕೋಪದಂತಹ ದೂರುಗಳಿದ್ದಲ್ಲಿ ಸಾರ್ವಜನಿಕರು ಕಂಟ್ರೋಲ್ ರೂಮ್ ನಂಬರಿಗೆ ದೂರು ನೀಡುವಂತೆ ಡೀಸಿ ಮನವಿ



**ತುಮಕೂರು:** ಕಲುಷಿತ ನೀರು, ಮಾಲಿನ್ಯ ಸೇರಿದಂತೆ ಯಾವುದೇ ಪ್ರಕೃತಿ ವಿಕೋಪದಂತಹ ದೂರುಗಳಿದ್ದಲ್ಲಿ ಸಾರ್ವಜನಿಕರು ಕಂಟ್ರೋಲ್ ರೂಮ್ ನಂಬರಿಗೆ ದೂರು ನೀಡುವಂತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು, ಕಲುಷಿತ ನೀರು, ಮಾಲಿನ್ಯ ಸೇರಿದಂತೆ ಯಾವುದೇ ದೂರುಗಳಿದ್ದಲ್ಲಿ ಸಾರ್ವಜನಿಕರು ಜಿಲ್ಲೆಯಲ್ಲಿ ತೆರೆಯಲಾಗಿರುವ ಕಂಟ್ರೋಲ್ ರೂಮ್ ದೂರವಾಣಿ ಸಂಖ್ಯೆ 7304975519, ಅಥವಾ 0816–2213400, 155304 ಈ ನಂಬರಿಗೆ ಸಾರ್ವಜನಿಕರು ದೂರು ಸಲ್ಲಿಸಬೇಕು. ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಹೆಚ್ಚಿನ ಅನಾಹುತ ಆಗುವುದನ್ನು ತಪ್ಪಿಸಬಹುದಾಗಿದೆ ಎಂದರು.

ಮಧುಗಿರಿ, ಶಿರಾ, ಕೊರಟಗೆರೆ ಭಾಗಗಳಲ್ಲಿ ಕುಡಿಯಲು ಯೋಗ್ಯವಲ್ಲದ ನೀರು ಸರಬರಾಜಾಗುತ್ತಿರುವ ಬಗ್ಗೆ ಪ್ರಯೋಗಾಲಯದ ವರದಿ ಬಂದಿದ್ದು, ಈಗಾಗಲೆ ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆ. ಅಲ್ಲದೆ ಬಯಲು ಶೌಚ ಇನ್ನಿತರ ಸಾಂಕ್ರಾಮಿಕ ರೋಗ ಹರಡಬಹುದಾದ ವಿಷಯಗಳ ಬಗ್ಗೆ ಗಮನ ಹರಿಸುವಂತೆ ಜಿಲ್ಲಾಧಿಕಾರಿ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.

ಸಾಂಕ್ರಾಮಿಕ ರೋಗಗಳು ಹರಡಬಹುದಾದ ವಿದ್ಯಾರ್ಥಿನಿಲಯಗಳ ನೀರು ಸರಬರಾಜು, ಜಾತ್ರೆ, ಹಬ್ಬಗಳ ಬಗ್ಗೆ ಹೆಚ್ಚಿನ ನಿಗಾವಹಿಸಬೇಕೆಂದು ತಿಳಿಸಿದ ಅವರು, ತಮ್ಮ ತಾಲೂಕುಗಳಲ್ಲಿ ಯಾವ ಹಬ್ಬ, ಜಾತ್ರೆಗಳು ನಡೆಯುತ್ತವೆ, ಹೆಚ್ಚು ಜನರು ಸೇರುವ ಜಾಗಗಳ ಬಗ್ಗೆ ಮುಂಜಾಗ್ರತೆ ವಹಿಸಬೇಕು ಎಂದ ಅವರು ಜಾತ್ರೆ ಮತ್ತು ಹಬ್ಬ ಆಚರಣೆಗೆ ಅನುಮತಿಸುವ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳ ಹಾಗೂ ಎಚ್ಚರಿಕೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದರು.

ಊರುಹಬ್ಬ, ಜಾತ್ರೆ ನಡೆಸಲು ತಹಸೀಲ್ದಾರ್ ಅನುಮತಿ ಕಡ್ಡಾಯವಾಗಿ ಪಡೆಯಬೇಕು ಎಂದ ಅವರು, ತಾಲೂಕು ಆಡಳಿತದ ಅನುಮತಿ ಇಲ್ಲದೆ ಹಬ್ಬ ಅಥವಾ ಜಾತ್ರೆ ನಡೆದ ಬಗ್ಗೆ ದೂರುಗಳು ಬಂದರೆ ಸಂಬಂಧಿಸಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕವಾಗಿ ಆಯೋಜನೆಗೊಳ್ಳುವ ಊರ ಹಬ್ಬ/ಜಾತ್ರೆಗಳ ವೇಳೆ ಆಹಾರ/ಪ್ರಸಾದ ಮತ್ತು ಕುಡಿಯುವ ನೀರಿನಿಂದ ಹರಡಬಹುದಾದ ಕಾಯಿಲೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಆರೋಗ್ಯ ಇಲಾಖೆ ಸಮನ್ವಯದೊಂದಿಗೆ ಸಂಪೂರ್ಣ ಮೇಲುಸ್ತುವಾರಿ ವಹಿಸಲು ಸೂಚಿಸಿದರು.

ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಊರ ಹಬ್ಬ/ಜಾತ್ರೆಗಳ ಅವಧಿಗೂ ಮುನ್ನವೇ ಜಾತ್ರೆ/ಹಬ್ಬ ಆಯೋಜಕರಿಗೆ/ಗ್ರಾಮಸ್ಥರಿಗೆ ಕುಡಿಯುವ ನೀರಿನ ನಿರ್ವಹಣೆ, ಆಹಾರ/ಪ್ರಸಾದ ತಯಾರಿಸುವ ಸ್ಥಳದ ಶುಚಿತ್ವ, ತ್ಯಾಜ್ಯ ವಿಸರ್ಜನ ಮತ್ತು ಶೌಚಾಲಯಗಳ ಕುರಿತಂತೆ ಸೂಕ್ತ ಮಾರ್ಗದರ್ಶನ/ಅರಿವು ಮೂಡಿಸಬೇಕು. ಊರ ಹಬ್ಬ/ಜಾತ್ರೆ ವೇಳೆ ವಿತರಿಸುವ ಕುಡಿಯುವ ನೀರನ್ನು ಪಡೆದ ನೀರಿನ ಮೂಲ, ಅದರ ಗುಣಮಟ್ಟ, ಸಾಗಿಸಲು ಉಪಯೋಗಿಸುವ ಟ್ಯಾಂಕರ್ ಮತ್ತು ಶೇಖರಿಸುವ ಟ್ಯಾಂಕ್‌ಗಳ ಶುಚಿತ್ವದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಆಹಾರ/ಪ್ರಸಾದ ತಯಾರಿಸಲು ಬಳಸುವ ನೀರು ಮತ್ತು ಅಡುಗೆ ಪ್ರದೇಶದ ಸುತ್ತಮುತ್ತ ಶುಚಿತ್ವದ ಬಗ್ಗೆ, ಪರಿವೀಕ್ಷಣೆ ನಡೆಸಬೇಕಲ್ಲದೆ, ಕುಡಿಯುವ ನೀರು/ಆಹಾರ/ಪ್ರಸಾದ ವಿತರಿಸುವವರು ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕು. ತ್ಯಾಜ್ಯ ವಿಸರ್ಜನೆ ಸ್ಥಳಗಳು ಮತ್ತು ಶೌಚಾಲಯಗಳಿಂದ ಕುಡಿಯುವ ನೀರು/ಆಹಾರ/ಪ್ರಸಾದ ವಿತರಿಸುವ ಸ್ಥಳಗಳಲ್ಲಿ ಅಗತ್ಯ ಅಂತರ ಕಾಪಾಡುವುದು, ಕ್ರಮಬದ್ಧವಾಗಿ ತ್ಯಾಜ್ಯ ವಿಲೇವಾರಿ ಮಾಡುವುದೂ ಸೇರಿದಂತೆ ಮನೆಗಳಲ್ಲಿ ಎಲ್ಲಾ ಗ್ರಾಮಸ್ಥರು ಮುಖ್ಯವಾಗಿ ವೃದ್ಧರು, ಗರ್ಭಿಣಿ/ಬಾಣಂತಿ ಅನಾರೋಗಿಗಳು ಕಾಯಿಸಿ ಆರಿಸಿದ ನೀರನ್ನು ಸೇವಿಸುವಂತೆ ಸೂಚಿಸಬೇಕು.

ಗ್ರಾಮಗಳಲ್ಲಿನ ಕೊಳವೆಬಾವಿ, ಪೈಪ್‌ಲೈನ್ ಓಹೆಚ್‌ಟಿ ಆರ್‌ಓ ಪ್ಲಾಂಟ್ ಇತ್ಯಾದಿಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಊರ ಹಬ್ಬ/ಜಾತ್ರೆಗಳ ಅವಧಿಯಲ್ಲಿ ಸಂಬಂಧಪಟ್ಟ ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿ ನೌಕರರು ಗ್ರಾಮಸ್ಥರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆರೋಗ್ಯದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಕೂಡಲೇ ಆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಮಾಡಬೇಕೆಂದು ಸೂಚನೆ ನೀಡಿದರು.

ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಮತ್ತು ಕಾನೂನು ಸುವ್ಯವಸ್ಥೆಗೆ ತೊಂದರೆಯಾಗದಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ತುಮಕೂರು ಜಿಲ್ಲೆಯ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಕೈಗೊಳ್ಳಬೇಕಾದ ಎಲ್ಲಾ ಅಗತ್ಯ ಕ್ರಮಗಳ ಕುರಿತು ಯಾವುದೇ ಅಧಿಕಾರಿ ನಿರ್ಲಕ್ಷ್ಯತೆ ತೋರಿದ್ದಲ್ಲಿ ಅಂತಹ ಅಧಿಕಾರಿ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ನಿರ್ದೇಶನ ನೀಡಿದರು.

# ನಿರುದ್ಯೋಗ ಹೋಗಲಾಡಿಸಲು ಮಂಡ್ಯ ಜಿಲ್ಲೆಗೆ ಕಾರ್ಖಾನೆಗಳು ಬರಬೇಕು: ರವಿ ಕುಮಾರ್



**ಮಂಡ್ಯ:** ಜಿಲ್ಲೆಯಲ್ಲಿ ನಿರುದ್ಯೋಗವನ್ನು ಹೋಗಲಾಡಿಸಲು ಜಿಲ್ಲೆಗೆ ಕಾರ್ಖಾನೆಗಳು ಬರಬೇಕು ಹಾಗಾಗಿ ಸಾತನೂರು ಫಾರ್ಮ್ ನಲ್ಲಿ ಕಾಡಾಗೆ ಸೇರಿದ ಸರ್ವೇ ನಂ 257 ರಲ್ಲಿರುವ 90 ಎಕರೆ ಜಾಗವನ್ನು ಇಂದು ವಿಕ್ಷಣೆ ಮಾಡಲಾಗಿದೆ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಅವರು ಹೇಳಿದರು.

ಸಾತನೂರು ಫಾರ್ಮ್ ನಲ್ಲಿ ಖಾಲಿ ಇರುವ ಜಾಗವನ್ನು ವಿಕ್ಷಣೆ ಮಾಡಲು ಆಗಮಿಸಿದ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಸದರಿ ಜಾಗ ಅಚ್ಚುಕಟ್ಟಾದ ಪ್ರದೇಶವಾಗಿದೆ. ಜಾಗವನ್ನು ಖಾಲಿ ಬಿಡುವುದಕ್ಕಿಂತ ಕೈಗಾರಿಕೆಗೆ ಮೀಸಲಿಡಬೇಕು. ಈಗಾಗಲೇ ಮುಖ್ಯಮಂತ್ರಿಗಳು , ಉಪಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಅವರು ಸದರಿ ಜಾಗಕ್ಕೆ ಕಾರ್ಖಾನೆಗಳು ಬರುವುದೇ ಆದರೆ ಕ್ಯಾಬಿನೆಟ್ ನಲ್ಲಿ ಚರ್ಚಿಸಿ ಕೈಗಾರಿಕೆಗೆ ಮೀಸಲಿಡೋಣ ಎಂದು ಹೇಳಿದ್ದಾರೆ ಎಂದರು.

ಹಾಗಾಗಿ ಇಂದು ಸರ್ವೆ ಸ್ಥಳವನ್ನು ವೀಕ್ಷಣೆ ಮಾಡಲು ಆಗಮಿಸಿದ್ದೇನೆ. ಜಾಗವು ಉತ್ತಮವಾಗಿದ್ದು ಮೂರು ಕಡೆಯಿಂದ ರಸ್ತೆ ಕೂಡಿದೆ. ನೀರಿನ ಸೌಲಭ್ಯವು ಸೂಕ್ತವಾಗಿದ್ದು ನಗರಕ್ಕೆ ಹೊಂದಿಕೊಂಡಂತೆ ಇದೆ. ವಿದೇಶದಗಳಿಂದ ಬರುವ ಕಾರ್ಖಾನೆಗಳಿಗಾಗಿ ನೀಡಬೇಕಾದ ಎಲ್ಲಾ ಸೌಕರ್ಯಗಳು ಇಲ್ಲಿ ಲಭ್ಯವಿದೆ ಕೈಗಾರಿಕೆ ಮೀಸಲಿಡಲು ತಿರ್ಮಾನಿಸಲಾಗಿದೆ ಎಂದು ಹೇಳಿದರು. ಸದರಿ ಜಾಗದಲ್ಲಿ 90 ಎಕರೆ ಜಾಗವಿದ್ದು ಹೆಚ್ಚುವರಿ 10 ಎಕ್ಕರೆ ಜಾಗವನ್ನು ಭೂಸ್ವಾಧೀನ ಗೊಳಿಸಲಾಗುವುದು. ಸಾವಿರ ಎಕರೆ ಅಗತ್ಯವಿದ್ದರೂ ಭೂಸ್ವಾಧೀನ ಮಾಡಿ ಜಾಗವನ್ನು ಕೈಗಾರಿಕೆ ಮೀಸಲಿಡುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ ಕುಮಾರ. ಉಪ ವಿಭಾಗಾಧಿಕಾರಿ ಶಿವಮೂರ್ತಿ, ಮಂಡ್ಯ ತಹಶೀಲ್ದಾರ್ ವಿಶ್ವನಾಥ್, ಮನ್ ಮುಲ್ ಅಧ್ಯಕ್ಷ ಶಿವಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಕವಯತ್ರಿ, ಲೇಖಕಿ ಶ್ರೀಮತಿ ಜಯಂತಿ ರೈ ಮಡಿಕೇರಿಯವರಿಗೆ ಕನ್ನಡ ಭವನದ ಪ್ರತಿಷ್ಠಿತ ಅಂತರ್ ರಾಜ್ಯ ಪ್ರಶಸ್ತಿಯಾದ "ಕನ್ನಡ ಪಯಸ್ವಿನಿ ಪ್ರಶಸ್ತಿ 2026."
ಇದೆ ಬರುವ ಜನವರಿ 18ಕ್ಕೆ ಕನ್ನಡ ಭವನ ರಜತ ಸಂಭ್ರಮ –ನಾಡು ನುಡಿ ಹಬ್ಬ ಕಾರ್ಯಕ್ರಮ ದಲ್ಲಿ, ಕನ್ನಡ ಭವನ, ನುಳ್ಳಿಪ್ಪಾಡಿ, ಕಾಸರಗೋಡಿ ನಲ್ಲಿ ನೀಡಿ ಗೌರವಿಸಲಿದ್ದೇವೆ ಎಂದು ಕನ್ನಡ ಭವನ ಸ್ಥಾಪಕ ಅಧ್ಯಕ್ಷರಾದ ಡಾ. ವಾಮನ್ ರಾವ್ ಬೇಕಲ್ ಹಾಗೂ ಕಾರ್ಯದರ್ಶಿ ವಸಂತ್ ಕೆರೆಮನೆ ತಿಳಿಸಿದ್ದಾರೆ**



# ಅಕ್ಕ ಪಡೆಗೆ ಚಾಲನೆ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಅಕ್ಕ ಪಡೆ ಯೋಜನೆಗೆ ಜ.05ರ ಸೋಮವಾರ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಂಕೀರ್ಣದ ಆವರಣದಲ್ಲಿ ಚಾಲನೆ ನೀಡಲಾಯಿತು. ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ರಾಮಚಂದ್ರಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ದಿನೇಶ್, ಡಿವೈಎಸ್‌ಪಿ ಶ್ರೀನಿವಾಸ, ಜಿಲ್ಲಾ ನಿರೂಪಣಾಧಿಕಾರಿ ಡಾ. ಲಕ್ಷ್ಮೀ ದೇವಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಜನಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಕ್ಯಾಪ್ಟನ್ ಡಾ. ಲಕ್ಷ್ಮೀ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು,

# ತ್ರಿವಿಧ ದಾಸೋಹದ ದಕ್ಷಿಣ ಭಾರತದ ಕುಂಭಮೇಳ...

## ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ರಥೋತ್ಸವ



| ವೀಣಾ ಹೇಮಂತ್‌ಗೌಡ ಪಾಟೀಲ್





ಇನ್ನೇನು ಜಾತ್ರೆಗೆ ತಿಂಗಳು ಇದೆ ಎನ್ನುವಾಗಲೇ ಸುತ್ತಲ ಹಳ್ಳಿಗಳಲ್ಲಿ ದಾಸೋಹಕ್ಕೆ ವಿವಿಧ ಬಗೆಯ ಹೋಳಿಗೆಗಳು, ಕರ್ಚಿಕಾಯಿ, ಮಾದಲಿ, ಸಜ್ಜೆ ಮತ್ತು ಜೋಳದ ಹಿಟ್ಟಿನಿಂದ ತಯಾರಿಸಿದ ರೊಟ್ಟಿಗಳನ್ನು, ಹಲವಾರು ವಿಧದ ಚಟ್ನಿಪುಡಿಗಳನ್ನು, ಕೆಂಪು ಚಟ್ನಿ, ಉಪ್ಪಿನಕಾಯಿಗಳನ್ನು ತಯಾರಿಸುವ ಭಕ್ತರು ಡೊಳ್ಳಿನ ಮೆರವಣಿಗೆಯೊಂದಿಗೆ ತಲೆಯ ಮೇಲೆ ಪುಟ್ಟಿಯನ್ನು ಹೊತ್ತು ಇಲ್ಲವೇ ಅಲಂಕರಿಸಿದ ಎತ್ತಿನ ಬಂಡಿಗಳಲ್ಲಿ, ಟ್ರಾ ್ಯಕ್ಟರ್ಗಳಲ್ಲಿ ಶ್ರೀಮಠಕ್ಕೆ ತಂದು ಅರ್ಪಿಸುತ್ತಾರೆ. ಮತ್ತೆ ಕೆಲವರು ಬೆಲ್ಲ, ಸಕ್ಕರೆಯಂತಹ ನೂರಾರು ದಿನಸಿ ಪದಾರ್ಥಗಳನ್ನು, ಅಕ್ಕಿಯ ಮೂಟೆಗಳನ್ನು ಇನ್ನು ಕೆಲವರು ತರಕಾರಿಗಳನ್ನು, ಹಣ್ಣು ಹಂಪಲುಗಳನ್ನು ತಂದು ಶ್ರೀ ಮಠಕ್ಕೆ ಅರ್ಪಿಸುತ್ತಾರೆ. ಸುತ್ತಲ ಜಿಲ್ಲೆಗಳ ನೂರಾರು ಊರುಗಳ ಸಾವಿರಾರು ಮನೆಗಳಿಂದ ಹೀಗೆ ಶೇಖರವಾಗುವ ಆಹಾರದ ದಾಸ್ತಾನು ನೋಡಲು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಇದುವೇ ದಕ್ಷಿಣ ಭಾರತದ ಮಹಾ ಕುಂಭಮೇಳ ಎಂದೆನಿಸಿದ ಕೊಪ್ಪಳ ನಗರದ ಗವಿಸಿದ್ದೇಶ್ವರ ಮಠದ ಅನ್ನದಾಸೋಹದ ಪರಿ.

ಇನ್ನು ಮುಂಜಾನೆ ಮೂರು ಗಂಟೆಗೆ ಒಲೆಗೆ ಉರಿ ಹಚ್ಚಿದರೆ ಅದು ನಂದುವುದು ಮಧ್ಯರಾತ್ರಿ ಒಂದು ಗಂಟೆಗೆ. ದಿನವೂ ಲಕ್ಷಾಂತರ ಜನ ಭಕ್ತರಿಗೆ ಅಡುಗೆ ತಯಾರಿಸಲು, ತರಕಾರಿಗಳನ್ನು ತೊಳೆದು ಹೆಚ್ಚಲು, ಭಕ್ತರಿಗೆ ಉಣಬಡಿಸಲು, ಶಿಸ್ತಿನಿಂದ ಸಾಲುಗಳಲ್ಲಿ ಸಾಗಿ ಅನ್ನ ಪ್ರಸಾದವನ್ನು ಸ್ವೀಕರಿಸಲು ಜನರಿಗೆ ದಾರಿ ತೋರಲು ಹೀಗೆ ಹತ್ತು ಹಲವು ಗುಂಪುಗಳಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿಗಳು, ಯುವಕರು, ಕಾಲೇಜುಗಳ ಎನ್ ಎಸ್ ಎಸ್ ಮತ್ತು ಎನ್ ಸಿ ಸಿ ಘಟಕದ ವಿದ್ಯಾರ್ಥಿಗಳು,ಮಹಿಳೆಯರು ವೃದ್ಧರು ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು, ಗೃಹರಕ್ಷಕ ದಳದವರು ಈ ಅನ್ನ ದಾಸೋಹದ ಕೈಂಕರ್ಯದಲ್ಲಿ ಕಿಂಚಿತ್ತು ಅಡೆ ತಡೆಯಾಗದಂತೆ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ಜಾತ್ರೆ ಎಂದರೆ ಕೇವಲ ಧಾರ್ಮಿಕ ಆಚರಣೆಯಲ್ಲ, ರಥೋತ್ಸವವಲ್ಲ... ಬದಲಾಗಿ ಜನರಲ್ಲಿ ವಿವಿಧ ಸಾಮಾಜಿಕ ವಿಷಯಗಳ ಕುರಿತು ಜಾಗೃತಿಯನ್ನು ಮೂಡಿಸುವ, ಸಮಾಜಮುಖಿಯಾಗಿ ಜನರನ್ನು ಪ್ರೇರೇಪಿಸುವ ಕಾರ್ಯಕ್ರಮ. ಈ ಕಾರ್ಯಕ್ರಮದ ಅಂಗವಾಗಿ ಶ್ರೀ ಗವಿಮಠ ಸಂಸ್ಥಾನವು ಈ ಬಾರಿ ವಿವಿಧ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಗ್ರಾಮೀಣ ಕ್ರೀಡೆಗಳ ಕುರಿತಾದ ಆಸಕ್ತಿಯನ್ನು ಮೂಡಿಸಿದೆ. ಬಹುದೊಡ್ಡ ಮೊತ್ತದ ಬಹುಮಾನಗಳನ್ನು ಈ ಕ್ರೀಡೆಗಳಲ್ಲಿ ಗೆದ್ದವರಿಗೆ ನೀಡುವ ಮೂಲಕ ಮುಂದಿನ ದಿನಮಾನಗಳಲ್ಲಿ ಗ್ರಾಮೀಣ ಕ್ರೀಡೆಯ ಭವಿಷ್ಯವನ್ನು ಉಜ್ವಲಗೊಳಿಸಲು ಭದ್ರಬುನಾದಿಯನ್ನು ಶ್ರೀ ಮಠವು ಹಾಕಿದೆ.

ಆರೋಗ್ಯದ ಜಾಗೃತಿಯನ್ನು ಮೂಡಿಸುವ ಉಚಿತ ಹೆಲ್ತ್ ಕ್ಯಾಂಪ್ ಗಳ ಮೂಲಕ ಜನ ಸಮುದಾಯಕ್ಕೆ ಆರೋಗ್ಯದ ಮಹತ್ವವನ್ನು ಅರಿಯಲು ಅವಕಾಶ ಮಾಡಿಕೊಟ್ಟಿದೆ. ಸತತ ಮೂರು ದಿನಗಳ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಮಠಾಧೀಶರಿಂದ ನಮ್ಮ ಧಾರ್ಮಿಕ ಪರಂಪರೆಯ ಕುರಿತಾದ ಜ್ಞಾನವನ್ನು ಹಂಚುವ ಮಹಾ 'ಜ್ಞಾನ ದಾಸೋಹ' ಕೊಪ್ಪಳದ ಗವಿಮಠದಲ್ಲಿ ಏರ್ಪಾಡಾಗಿದೆ.

ಕಳೆದೆರಡು ವರ್ಷಗಳಿಂದ ಸುಮಾರು 5000ಕ್ಕೂ ಹೆಚ್ಚು ಜನ ಮಕ್ಕಳಿಗೆ ಆಶ್ರಯವನ್ನು ನೀಡಿ ಅಕ್ಷರ ದಾಸೋಹವನ್ನು ಆರಂಭಿಸಿರುವ ಶ್ರೀಮಠಕ್ಕೆ ಸಾವಿರಾರು ಭಕ್ತರು ತಮ್ಮ ಕೈಲಾದಷ್ಟು ದೇಣಿಗೆಯನ್ನು ನೀಡಿ ಜ್ಞಾನ ದಾಸೋಹದ ಅರಿವಿನ ಜ್ಯೋತಿ ನಿರಂತರವಾಗಿ ಪ್ರಜ್ವಲಿಸುವಂತೆ ಮಾಡಿದ್ದಾರೆ. 'ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆ ತೆನೆಗೂಡಿದರೆ ಬಳ್ಳ' ಎಂಬ ಮಾತಿನಂತೆ ಕೊಪ್ಪಳ ಮಹಾನಗರದಲ್ಲಿ ಅನ್ನ,ಆಶ್ರಯ ಮತ್ತು ಜ್ಞಾನದ ತ್ರಿವಿಧ ದಾಸೋಹ ಮೂರ್ತಿಯಾಗಿ ಕಂಗೊಳಿಸುತ್ತಿರುವ ವರು ಶ್ರೀಮಠದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ 18ನೇ ಪೀಠಾಧಿಪತಿಗಳೇ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು.

ವಿನಯವೇ ಮೈವೆತ್ತಂತ ಸ್ವಾಮೀಜಿಯವರ ತಾಯಿ ಮಡಿಲಿನ ಪ್ರೀತಿಯ ಮಮತೆಯಲ್ಲಿ ಉಂಡು ಓದಿ ಬೆಳೆಯುತ್ತಿರುವ ಮಕ್ಕಳು ಭವ್ಯ ಭವಿಷ್ಯದ ನಾಗರಿಕರಾಗುವುದರಲ್ಲಿ ಸಂದೇಹವೇ ಇಲ್ಲ.

ಕಳೆದ ವರ್ಷ ವಿಕಲಚೇತನರ ಸಬಲೀಕರಣಕ್ಕಾಗಿ ಸಕಲಚೇತನ ಎಂಬ ನಡಿಗೆಯ ಕಾರ್ಯಕ್ರಮವನ್ನು ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಅದರಲ್ಲೂ ಮುಖ್ಯವಾಗಿ ಕುಸ್ತಿ, ಗುಂಡು ಎತ್ತುವ ಸ್ಪರ್ಧೆ, ಎತ್ತಿನ ಬಂಡಿಗಳನ್ನು ಅಲಂಕರಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು ಇದು ಗ್ರಾಮೀಣ ಬದುಕಿನ ಕುರಿತು ಒಳ್ಳೆಯ ಆಸಕ್ತಿಯನ್ನು ಹುಟ್ಟಿಸುವಲ್ಲಿ ಸಹಾಯಕವಾಯಿತು.

ಈ ವರ್ಷ ಬೀದರ ಜಿಲ್ಲೆಯ ಶಿವಾನಿ ಶಿವದಾಸ ಸ್ವಾಮಿ ಹಾಗೂ ತಂಡದ ಖ್ಯಾತ ಗಾಯಕರಿಂದ ಕಾರ್ಯಕ್ರಮ ಹಾಗೂ ಶಿವ ಹುಬ್ಬಳ್ಳಿ ತಂಡದವರಿಂದ ಗಂಗಾರತಿ ಕಾರ್ಯಕ್ರಮ ತೆಪ್ಪೋತ್ಸವದ ದಿನದಂದು ನಡೆಯಿತು.

ಜನವರಿ ಮೂರರಂದು ಸಂಜೆ ವಿವಿಧ ಕಲಾ ತಂಡಗಳೊಂದಿಗೆ ಶ್ರೀ ಗವಿಸಿದ್ದೇಶ್ವರ ಮೂರ್ತಿಯ, ಕಳಸದ ಮೆರವಣಿಗೆ ನಡೆದಿದೆ ಜನವರಿ 4ರಂದು ಸಂಜೆ 5.30 ಗಂಟೆಗೆ ಉಚ್ಚಾಯ (ಲಘು ರಥೋತ್ಸವ) ಹಾಗೂ ಶ್ರೀಮಠದ ಕೈಲಾಸ ಮಂಟಪದಲ್ಲಿ ಗವಿಸಿದ್ದೇಶ್ವರ ಸಂಗೀತ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನೆರವೇರಲಿದೆ.

ಜನವರಿ 5ರಂದು ನಡೆಯುವ ಮಹಾರಥೋತ್ಸವಕ್ಕೆ ಕೊಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಬಿನ್ನಾಳದವರಾದ ಪ್ರಸ್ತುತ ಮೇಘಾಲಯ ರಾಜ್ಯದ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಎಚ್ ವಿಜಯ ಶಂಕರ್ ಅವರಿಂದ ಚಾಲನೆ ದೊರೆಯುತ್ತದೆ.

ಮಹಾರಥೋತ್ಸವ ನಂತರ ಶ್ರೀಮಠದ ಕೈಲಾಸ ಮಂಟಪದಲ್ಲಿ ನಡೆಯುವ ಭಕ್ತ ಹಿತಚಿಂತನ ಸಭೆ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಹಾಸಂಸ್ಥಾನ ಮಠದ ಡಾ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಕಾಗಿನೆಲೆಯ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಕಾಖಂಡಕಿ ಗುರುದೇವಾಶ್ರಮದ ಯೋಗಿಶ್ವರ ಸ್ವಾಮೀಜಿ ಉಪದೇಶಾಮೃತ ನೀಡಲಿದ್ದಾರೆ. ಶಿವಮೊಗ್ಗದ ಹಿಂದೂಸ್ತಾನಿ ಗಾಯಕರಾದ ವಿದ್ವಾನ್ ನೌಶಾದ್ ಹಾಗೂ ವಿದ್ವಾನ್ ನಿಶಾದ್ ಹರ್ಲಾಪುರ್ ಅವರಿಂದ ಸ್ವರಸಂಧ್ಯಾ ಜುಗಲ್ಬಂದಿ ಕಾರ್ಯಕ್ರಮ ಜರಗಲಿದೆ ಹಾಗೂ ಗಂಗಾವತಿಯ ನರಸಿಂಹ ಜೋಶಿ ಅವರಿಂದ ಹಾಸ್ಯ ಕಾರ್ಯಕ್ರಮ ನಡೆಯಲಿದೆ.

**ಹಿನ್ನೆಲೆ:** ಕೊಪ್ಪಳ ಗವಿಮಠದ ಜಾತ್ರೆಯನ್ನು ಕೊಪ್ಪಳದ ಗವಿಮಠದ 11ನೇ ಪೀಠಾಧಿಪತಿ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಯವರ ಲಿಂಗೈಕ್ಯ ದಿನದಂದು ಆಚರಿಸಲಾಗುತ್ತದೆ. 800 ವರ್ಷಗಳ ಇತಿಹಾಸವಿರುವ ಕೊಪ್ಪಳ ಗವಿಮಠದ ಮೊದಲ ಪೀಠಾಧಿಪತಿಯಾದ ರುದ್ರಮುನಿ ಸ್ವಾಮಿಗಳು ಕರ್ನಾಟಕ ರಾಜ್ಯದಲ್ಲಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಲಿತಗೊಳಿಸಿದವರು. ಅವರು ಕಾಶಿಯ ಜಂಗಮವಾಡಿ ಮಠದಿಂದ 1080ರಲ್ಲಿ ಧರ್ಮ ಪ್ರಸಾರ ಮಾಡುತ್ತಾ ಕೊಪ್ಪಳ ನಗರದ ಪೂರ್ವ ದಿಕ್ಕಿನಲ್ಲಿರುವ ಗುಡ್ಡದ ಗವಿಯಲ್ಲಿ ನೆಲೆಸಿದರು. ಹಾಗೆ ಇವರು ನೆಲೆಸಿದ ಮಠವೇ ಗವಿಮಠ. ಇವರ ನಂತರ ಇವರ ಉತ್ತರಾಧಿಕಾರಿಗಳ ಪರಂಪರೆ ಆರಂಭವಾಯಿತು. ಮುಂದೆ 11 ನೇ ಪೀಠಾಧಿಪತಿಯಾಗಿ ಬಂದ ಗವಿಸಿದ್ದೇಶ್ವರ ಸ್ವಾಮಿಗಳು ಹಲವಾರು ಪವಾಡಗಳನ್ನು ಮೆರೆದರು. ಧಾರ್ಮಿಕ ಸಾಮರಸ್ಯಕ್ಕೆ ನಾಂದಿ ಹಾಡಿದರು. ಸಾಮಾಜಿಕ ಸುಧಾರಣೆ ತಂದ ಅವರು ಪುಷ್ಯ ಮಾಸದ ಬಿದಿಗೆಯ ದಿನ ಅಂದರೆ ದವನದ ಹುಣ್ಣಿಮೆಯಾದ ಎರಡು ದಿನಕ್ಕೆ ಲಿಂಗೈಕ್ಯರಾದ ನಂತರ ಅವರ ಗುರುಗಳಿಗಾಗಿ ನಿರ್ಮಿಸಿದ ಸಮಾಧಿಯಲ್ಲಿಯೇ ಅವರ ಗದ್ದುಗೆಯನ್ನು ಮಾಡಿ ಪೂಜಾರಂಭ ಮಾಡಲಾಯಿತು. ಇದೀಗ 18ನೇ ಪೀಠಾಧಿಪತಿಯಾಗಿ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಶ್ರೀಮಠದ ಭವ್ಯ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಕಾಲದಲ್ಲಿ ಮಠವು "ನ ಭೂತೊ ನ ಭವಿಷ್ಯತಿ" ಎಂಬಂತೆ ಅಭಿವೃದ್ಧಿ ಕಂಡಿದ್ದು ಅದಕ್ಕೆ ಕಾರಣ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತಿರುವ ಸರಳತೆ, ಸಾತ್ವಿಕತೆಯೇ ಮೈವೆತ್ತ ಘನ ತತ್ವ ಮಹಿಮರಾದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು.

ಬನದ ಹುಣ್ಣಿಮೆಯ ಹಿಂದಿನ ದಿನವೇ ನಂದಿ, ಈಶ್ವರ, ಸೂರ್ಯ, ಚಂದ್ರ ಮತ್ತು ಪ್ರಣವ ಮಂತ್ರಗಳನ್ನು ಒಳಗೊಂಡಿರುವ ಬಸವಪಟವನ್ನು ಪೂಜೆ ಮಾಡಿ ಗವಿಸಿದ್ದೇಶ್ವರರ ಕರ್ತೃ ಗದ್ದುಗೆಯ ಸುತ್ತಲು ಐದು ಸುತ್ತು ಹಾಕಿ ನಂತರ ಮಠದ ಮುಂಭಾಗದ ಕಲ್ಲಿನ ಕಂಬಕ್ಕೆ ಕಟ್ಟುವ ಮೂಲಕ ಜಾತ್ರೆಯ ಕಾರ್ಯಕ್ರಮಕ್ಕೆ ನಾಂದಿ ಹಾಡುತ್ತಾರೆ.

> **ಜಾತ್ರೆ ಎಂದರೆ ಕೇವಲ ಧಾರ್ಮಿಕ ಆಚರಣೆಯಲ್ಲ, ರಥೋತ್ಸವವಲ್ಲ... ಬದಲಾಗಿ ಜನರಲ್ಲಿ ವಿವಿಧ ಸಾಮಾಜಿಕ ವಿಷಯಗಳ ಕುರಿತು ಜಾಗೃತಿಯನ್ನು ಮೂಡಿಸುವ, ಸಮಾಜಮುಖಿಯಾಗಿ ಜನರನ್ನು ಪ್ರೇರೇಪಿಸುವ ಕಾರ್ಯಕ್ರಮ. ಈ ಕಾರ್ಯಕ್ರಮದ ಅಂಗವಾಗಿ ಶ್ರೀ ಗವಿಮಠ ಸಂಸ್ಥಾನವು ಈ ಬಾರಿ ವಿವಿಧ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಗ್ರಾಮೀಣ ಕ್ರೀಡೆಗಳ ಕುರಿತಾದ ಆಸಕ್ತಿಯನ್ನು ಮೂಡಿಸಿದೆ. ಬಹುದೊಡ್ಡ ಮೊತ್ತದ ಬಹುಮಾನಗಳನ್ನು ಈ ಕ್ರೀಡೆಗಳಲ್ಲಿ ಗೆದ್ದವರಿಗೆ ನೀಡುವ ಮೂಲಕ ಮುಂದಿನ ದಿನಮಾನಗಳಲ್ಲಿ ಗ್ರಾಮೀಣ ಕ್ರೀಡೆಯ ಭವಿಷ್ಯವನ್ನು ಉಜ್ವಲಗೊಳಿಸಲು ಭದ್ರಬುನಾದಿಯನ್ನು ಶ್ರೀ ಮಠವು ಹಾಕಿದೆ.**



ಮಠದ ಆವರಣದಲ್ಲಿರುವ ಕೆರೆಯಲ್ಲಿ ತೆಪ್ಪೋತ್ಸವ ನಡೆಯುತ್ತದೆ. ಗವಿಸಿದ್ದೇಶ್ವರರ ಉತ್ಸವ ಮೂರ್ತಿಯನ್ನು ಮೆರವಣಿಗೆಯ ಮೂಲಕ ತಂದು ಹೂವಿನಿಂದ ಅಲಂಕೃತವಾದ ತೆಪ್ಪದಲ್ಲಿ ಪ್ರತಿಷ್ಠಾಪಿಸಿ ಪೂಜೆ ಪುರಸ್ಕಾರಗಳನ್ನು ಕೈಗೊಂಡು ಕೆರೆಯಲ್ಲಿರುವ ಶಿವಲಿಂಗದ ಸುತ್ತಲೂ ತೆಪ್ಪದಲ್ಲಿ ಪ್ರದಕ್ಷಿಣೆ ಹಾಕುವ ಮೂಲಕ ತೆಪ್ಪೋತ್ಸವವನ್ನು ನಡೆಸಲಾಗುತ್ತದೆ. ಕಣ್ಮನ ಸೆಳೆಯುವ ಬೆಳಕಿನ ದೀಪಗಳ ರಂಗೋಲಿ. ಮಧ್ಯಾಹ್ನ 3 ಗಂಟೆಯಿಂದಲೇ ತೆಪ್ಪೋತ್ಸವವನ್ನು ನೋಡಲು ಹಾಜರಾಗುವ ಭಕ್ತ ಸಮೂಹದ ಉಲ್ಲಾಸ, ಉತ್ಸಾಹಗಳು ಭಕ್ತಿ ಭಾವದ ವ್ಯಕ್ತ ಸ್ವರೂಪದಂತೆ ತೋರಿದರೆ ಆಶ್ಚರ್ಯವಿಲ್ಲ.

ಮಠದ ಮೇಲ್ಭಾಗದಲ್ಲಿರುವ ಅನ್ನಪೂರ್ಣೇಶ್ವರಿ ದೇಗುಲಕ್ಕೆ ಕೊಪ್ಪಳ ತಾಲೂಕಿನ ಇರಕಲ್ಲಗಡದ ಗ್ರಾಮದ ಸಂತೋಷಿಮಾತೆಯ ಭಕ್ತರು ಪಾದಯಾತ್ರೆಯಲ್ಲಿ ಬಂದು ಉಡಿ ತುಂಬಿದ ನಂತರ ಇಡೀ ಊರಿನ ಜನರೆಲ್ಲ ಸರತಿ ಸಾಲಿನಲ್ಲಿ ನಿಂತು ಮಾತೆ ಅನ್ನಪೂರ್ಣೇಶ್ವರಿ ದೇವಿಗೆ ಉಡಿ ತುಂಬುವುದರ ಜೊತೆಗೆ ತಮ್ಮ ಮನದ ಆಕಾಂಕ್ಷೆಯ ಮೇರೆಗೆ ಅಲ್ಲಿ ನೆರೆದಿರುವ ಮುತ್ತೈದೆಯರಿಗೆ ಉಡಿಯನ್ನು ತುಂಬುತ್ತಾರೆ. ಜಾತ್ರೆಗೆಂದು ತಮ್ಮ ತವರಿಗೆ ಬಂದ ಹೆಣ್ಣುಮಕ್ಕಳಿಗೆ ಇಲ್ಲಿ ತಮ್ಮ ಬಾಲ್ಯದ ಸ್ನೇಹಿತರು ಸಿಕ್ಕು ಹಳೆಯ ನೆನಪುಗಳನ್ನೆಲ್ಲ ಹೆಕ್ಕಿ ಸಂತಸದಿಂದ ಬೀಗುತ್ತಾರೆ. ಪರಸ್ಪರ ಉಡಿ ತುಂಬಿ ಧನ್ಯತೆಯ ಭಾವವನ್ನು ಹೊಂದುತ್ತಾರೆ.

ಮರುದಿನ ಮುಂಜಾನೆ ಕೊಪ್ಪಳ ನಗರದ ಜಡೆ ಗೌಡರ ಮನೆಯಲ್ಲಿ ಶ್ರೀ ಗವಿಸಿದ್ದೇಶ್ವರನ ಮೂರ್ತಿಯನ್ನು ಪೂಜಿಸಿ ವಾದ್ಯ ವೃಂದದವರ ಸಮೇತ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಮಠಕ್ಕೆ ತರುತ್ತಾರೆ. ಮುದ್ದಾಬಳ್ಳಿ, ಹಲಗೇರಿ ಮತ್ತು ಮಂಗಳಾಪುರ ಗ್ರಾಮಗಳಿಂದಲೂ ಕೂಡ ಶ್ರೀ ಗವಿಸಿದ್ದೇಶ್ವರರ ಕಳಸ, ಮೂರ್ತಿಗಳನ್ನು ಮೆರವಣಿಗೆಯಲ್ಲಿ ಆಯಾ ಗ್ರಾಮಸ್ಥರ ನೇತೃತ್ವದಲ್ಲಿ ಮಠಕ್ಕೆ ತರಲಾಗುತ್ತದೆ. ಸಾಯಂಕಾಲ ನಿಶ್ಚಿತ ಮುಹೂರ್ತ ಕಾಲದಲ್ಲಿ ಅತಿಥಿಗಳಿಂದ ಜಾತ್ರಾ ಮಹೋತ್ಸವ ಉದ್ಘಾಟನೆಗೊಂಡು ಗವಿಸಿದ್ದೇಶ್ವರನ ಉತ್ಸವ ಮೂರ್ತಿಯನ್ನು ಒಳಗೊಂಡ ಅಲಂಕೃತಗೊಂಡ ತೇರು ಭಕ್ತರ ಉಘೇ ಉಘೇ ಘೋಷದೊಂದಿಗೆ ಸಾಗುತ್ತದೆ. ಕೇವಲ ತಲೆಗಳು ಮಾತ್ರ ಕಾಣುವಂತಹ ಸಾಗರೋಪಾದಿಯಲ್ಲಿ ಜನರನ್ನೊಳಗೊಂಡ ಭಕ್ತ ಸಮೂಹ ರಥ ಸಾಗುವ ಹಾದಿಯಲ್ಲಿ ಉತ್ತತ್ತಿ, ಬಾಳೆಹಣ್ಣುಗಳನ್ನು ದೇವರಿಗೆ ಸಮರ್ಪಿಸುತ್ತಾ, ಹಾಗೆ ಎಸೆದಂತಹ ತಮಗೆ ದೊರೆತ ಬಾಳೆಹಣ್ಣು, ಉತ್ತತ್ತಿಗಳನ್ನು ಮಹಾಪ್ರಸಾದವೆಂದು ಆಯ್ದುಕೊಂಡು ತಮ್ಮ ನೆಂಟರಿಷ್ಟರಿಗೆ ಹಂಚಿ ತಾವು ಸ್ವೀಕರಿಸುತ್ತಾರೆ.


ರಥೋತ್ಸವದ ಮರುದಿನ ಸಂಜೆ ಚಿಕ್ಕೇನಕೊಪ್ಪದ ಶರಣರು ದೀಡ ನಮಸ್ಕಾರವನ್ನು ಹಾಕುತ್ತಾರೆ. ಅಂದು ಅವರೊಂದಿಗೆ ಎಲ್ಲ ಜನಾಂಗದ ಜನರು ಕೂಡ ತಮ್ಮ ತಮ್ಮ ಸಂಕಲ್ಪದಂತೆ ದೀಡ ನಮಸ್ಕಾರವನ್ನು ಹಾಕುತ್ತಾರೆ. ಅಂದು ರಾತ್ರಿ ಶ್ರೀ ಮಠದ ವತಿಯಿಂದ ಮದ್ದು ಸುಡುವ ಮೂಲಕ ಆಗಸದಲ್ಲಿ ವಿವಿಧ ಬಗೆಯ ಬಣ್ಣಗಳ ಪಟಾಕಿಯ ಚಿತ್ತಾರಗಳ ಮೂಡುವಿಕೆ. ಕಣ್ಣು ಕೋರೈಸುವ ಬೆಳಕಿನ ಚಿತ್ತಾರ ಜನರ ಮನಗಳನ್ನು ಬೆಳಗುತ್ತದೆ.

ಹಳ್ಳಿಯ ಜನರಂತೂ ರಥೋತ್ಸವದ ದಿನ ಬೆಳಗಿನ ಸಮಯದಲ್ಲಿಯೇ ಗವಿಸಿದ್ದೇಶ್ವರನಿಗೆ ನೈವೇದ್ಯದ ಎಡೆಯನ್ನು ಮಡಿಯಿಂದ ತಂದುಕೊಟ್ಟು ದೇವರಿಗೆ ನಮಿಸಿ, ಕಾಯಿ ಒಡೆಸಿಕೊಂಡು ದಾಸೋಹ ಭವನದಲ್ಲಿ ಪ್ರಸಾದ ಸ್ವೀಕರಿಸುತ್ತಾರೆ. ರಥೋತ್ಸವದ ನಂತರ ಮಕ್ಕಳಿಗೆ ಅವರಿಷ್ಟದ ಸಾಮಗ್ರಿಗಳನ್ನು ಕೊಡಿಸಲು ಜಾತ್ರೆಯಲ್ಲಿ ತಿರುಗಾಡುತ್ತಾ ..ಹೆಣ್ಣು ಮಕ್ಕಳು ಬಳೆ ಸಾಲಿನಲ್ಲಿಯೂ, ಪುಟ್ಟ ಮಕ್ಕಳು ಆಟದ ಸಾಮಾನುಗಳ ಸಾಲಿನಲ್ಲಿಯೂ, ಗಂಡಸರು ಒಕ್ಕಲುತನದ ಸಾಮಗ್ರಿಗಳನ್ನು ಖರೀದಿಸಲು ಮುಗಿ ಬೀಳುತ್ತಾರೆ. ಬಹುಶಹ ಬನಶಂಕರಿಯ ಜಾತ್ರೆಯನ್ನು ಬಿಟ್ಟರೆ, ಕೊಪ್ಪಳ ಜಾತ್ರೆಯಷ್ಟು ವೈವಿಧ್ಯಮಯ ಜಾತ್ರೆ ಮತ್ತೆಲ್ಲೂ ಇಲ್ಲ. ಬಹಳಷ್ಟು ಗೌಜಿ ಗದ್ದಲಗಳ ಮಧ್ಯದಲ್ಲಿಯೂ ಶಿಸ್ತು, ಸಮಯಪ್ರಜ್ಞೆ, ಸಂಸ್ಕೃತಿಯ ಹಿರಿಮೆಯನ್ನು ಮೆರೆಯುವ ಏಕೈಕ ಜಾತ್ರೆ ಕೊಪ್ಪಳದ ಗವಿಸಿದ್ದೇಶ್ವರ ಮಠದ ಜಾತ್ರಾ ಮಹೋತ್ಸವ.

ಜಾತ್ರೆಯ ಮೊದಲ ಮೂರು ದಿನಗಳಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಕರೆಸಿ, ಪರಿಚಯಿಸಿ ಅವರನ್ನು ಸನ್ಮಾನಿಸುತ್ತಾರೆ. ರಾತ್ರಿಯ ಹೊತ್ತಿನಲ್ಲಂತೂ ಸಾಂಸ್ಕೃತಿಕ ಲೋಕ ಕೈ ಬೀಸಿ ಕರೆಯುತ್ತದೆ. ಸಂಗೀತ, ನೃತ್ಯ, ನಾಟಕ, ಜಾನಪದ, ತತ್ವಪದ ಮುಂತಾದ ವೈವಿಧ್ಯಮಯ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತವೆ. ಜೊತೆ ಜೊತೆಗೆ ಮನುಷ್ಯನನ್ನು ಭೌತಿಕತೆಯಿಂದ ಪಾರಮಾರ್ಥಿಕತೆಯೆಡೆಗೆ ಕರೆದೊಯ್ಯುವ ಆಧ್ಯಾತ್ಮಿಕ ಚಿಂತನೆಗಳು, ಗೋಷ್ಠಿಗಳು ವೈಚಾರಿಕತೆಯನ್ನು, ಆಧ್ಯಾತ್ಮಿಕ ನಿಲುವನ್ನು, ಧಾರ್ಮಿಕ ತಿಳುವಳಿಕೆಯನ್ನು ಜನರಲ್ಲಿ ಉಂಟುಮಾಡುತ್ತವೆ. ಇದೆಲ್ಲಕ್ಕೂ ಮೆರುಗು ನೀಡುವಂತೆ ಕಳೆದ ವರ್ಷ ಜಾತ್ರೆಯಲ್ಲಿ ಅಂಗವಿಕಲರಿಗೆ ವಿವಾಹ ಮಾಡಿಸುವುದರ ಜೊತೆ ಜೊತೆಗೆ ಅವರಿಗೆ ಅವರವರ ಜಿಲ್ಲೆಗಳಲ್ಲಿ ಉದ್ಯೋಗ ಕೈಗೊಳ್ಳಲು ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಮೂಲಭೂತ ಸೌಲಭ್ಯಗಳನ್ನು ಸರಕಾರೇತರ ಸಂಸ್ಥೆಗಳ ಸಹಾಯದಿಂದ ಕೈಗೊಂಡಿದ್ದಾರೆ ... ಜಾತ್ರೆಗೆ ಒಂದು ವಾರ ಮುಂಚೆಯೇ ಈ ಸಾಮೂಹಿಕ ವಿವಾಹ ಕಾರ್ಯಕ್ರಮವು ನೆರವೇರಿದ್ದು ಗವಿಸಿದ್ದೇಶ್ವರ ಮಠ ಸಮಾಜದ ಅಲಕ್ಷಿತ ಜನರ ಸರ್ವಾಂಗೀಣ ಅಭಿವೃದ್ಧಿಗೆ ಮತ್ತೊಂದು ಹೊಸ ಆಯಾಮವನ್ನು ತೋರಿದೆ.

ಹೀಗೆ ಲಕ್ಷಾಂತರ ಜನ ಭಕ್ತರು ಸೇರುವ ತ್ರಿವಿಧದಾಸೋಹಗಳು ನಡೆಯುವ ದಕ್ಷಿಣ ಭಾರತದ ಮಹಾಕುಂಭಮೇಳ ಎಂಬ ಹೆಸರನ್ನು ಗಳಿಸಿರುವ ಕೊಪ್ಪಳದ ಗವಿಮಠದ ಜಾತ್ರೆ ಹಲವು ದಿನಗಳ ಕಾಲ ನಡೆದು ತೆರೆಮರೆಗೆ ಸರಿಯುತ್ತದೆ. ತಿಂಗಳಪರ್ಯಂತ ಜಾತ್ರೆಯ ನೆನಪನ್ನು ಮೆಲುಕು ಹಾಕುತ್ತಾ ಜನರು ಮುಂದಿನ ಜಾತ್ರೆಗಾಗಿ ಕಾಯುತ್ತಾರೆ. ಹಾಗಾದರೆ ನೀವೂ ಬರುವಿರಲ್ಲವೇ.... ಕೊಪ್ಪಳ ಜಾತ್ರೆಯ ನೋಡಲು, ಅನುಭವಿಸಲು ಕಣ್ತುಂಬಿಕೊಳ್ಳಲು.

# ಸದ್ದಿಲ್ಲದೇ ಸಾಹಿತ್ಯ ಸೇವೆ: ನಾರಾಯಣ ಕುಂಬ್ರರ ಕನ್ನಡಪ್ರೇಮ





ಹರ್ಷಿತಾ ಹರೀಶ್ ಕುಲಾಲ್ ಐವರ್ನಾಡು

ಸಾಹಿತ್ಯವನ್ನು ಬರೆದು ಕವನ ವಾಚನ ಮಾಡಿ ತಾನು ಬೆಳೆದು ತನ್ನವರನ್ನು ವೇದಿಕೆಯ ಮೆಟ್ಟಿಲೇರಿಸುವಲ್ಲಿ ಇವರ ಸಹಕಾರ ಅಪಾರ.

ಸದಾ ನಗುತ್ತಾ ನಗಿಸುತ್ತಾ ಹಸನ್ಮುಖಿಯಾಗಿ ಸಾಹಿತ್ಯದಲ್ಲಿ ಮಿಂಚಿ ಜನಮನ್ನಣೆ ಗಳಿಸಿದವರು.

ಹಿರಿಯರ ಜೊತೆಗೆ ಕಿರಿಯರು ಸೇರಿ ಕವನ ವಾಚನ ಮಾಡಿ ನಂತರದ ವರ್ಷಗಳಲ್ಲಿ ತಾನು ಬೆಳೆಯುತ್ತಾ ತನ್ನವರನ್ನು ಬೆಳೆಸುತ್ತಾ ಸಾಗುವ ವ್ಯಕ್ತಿತ್ವ ಇವರದ್ದಾಗಿದೆ.

ಬೆಳೆಯುವ ಎಳೆಮರೆ ಕಾಯಿಗೆ ಸಾಹಿತ್ಯದ ನೀರು ಧಾರೆ ಎರೆದು ವೇದಿಕೆಯಲ್ಲಿ ಅವಕಾಶ ಕೊಟ್ಟು ಪ್ರೋತ್ಸಾಹಿಸುವ ಮನಸ್ಸು ಎಲ್ಲರಿಗೂ ಇರುವುದಿಲ್ಲ ಅಂತಹ ಮನಸ್ಸು ಕೆಲವರಾಗಿದ್ದು, ಸಹಕಾರ ನೀಡುವ ರೂವಾರಿಗಳ ಜೊತೆಗೆ ಕೈ ಜೋಡಿಸಿ ಸಾಹಿತ್ಯವನ್ನು ಮಿಂಚುವಲ್ಲಿ ಕನ್ನಡದ ಬಾವುಟ ಹಾರಾಡಲು ಸಹಕರಿಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಇವರ ಸಾಹಿತ್ಯ ಪ್ರೇರಣೆಯಿಂದ ಯುವ ಸಾಹಿತಿಗಳು ಕವನ ಸಂಕಲನ, ಕಥಾ ಸಂಕಲನ, ದೃಶ್ಯ ಗೀತೆ ಬಿಡುಗಡೆಗೊಳಿಸಿದ್ದಾರೆ. ಯಾವುದೇ ಸಮಯದಲ್ಲೂ ಸಾಹಿತ್ಯ ಸೇವೆಗೆ ಸ್ಪಂದಿಸುವ ಗುಣ.

ಇವರು ವೃತ್ತಿಯಲ್ಲಿ ರಸಾಯನ ಶಾಸ್ತ್ರ ವಿಭಾಗದ ಲ್ಯಾಬ್ ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿ ಕಳೆದ 12 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ವೃತ್ತಿಯೊಂದಿಗೆ ಪ್ರವೃತ್ತಿಯನ್ನಾಗಿ ಸಾಹಿತ್ಯವನ್ನು ಬೆಳೆಸಿಕೊಂಡು ಸಾಹಿತ್ಯ ಕವನರಚನೆ, ಲೇಖನ ಬರೆಯುವುದು. ಹವ್ಯಾಸಿ ಯಕ್ಷಗಾನ ಕಲಾವಿದರು. ಇವರು ಚುಟುಕು, ಹಾಯ್ಕು, ಲಿಮೆರಿಕ್, ರುಬಾಯಿ, ಜಡೆ ಕವನ, ಬಿಲ್ಲವನ, ಸಪ್ತಸ್ವರ ಕವನ, ನ್ಯಾನೋ ಕಥೆ ಇನ್ನಿತರ ಸಾಹಿತ್ಯ ಪ್ರಕಾರಗಳನ್ನು ಅಭ್ಯಸಿಸಿರುತ್ತಾರೆ.

ಇವರ ಕವನ ಲೇಖನಗಳು ಸ್ಥಳೀಯ ಪತ್ರಿಕೆಗಳಾದ ಸುದ್ದಿ ಬಿಡುಗಡೆ, ತುಳುನಾಡು ವಾರ ಪತ್ರಿಕೆ, ಟೈಮ್ಸ್ ಆಫ್ ಕುಡ್ಲ, ಜಯಕಿರಣ, ಉದಯವಾಣಿ, ಹೊಸದಿಗಂತ, ಪ್ರಜಾವಾಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಚಿಗುರೆಲೆ ಸಾಹಿತ್ಯ ಬಳಗ ಪುತ್ತೂರು ಇದರ ಕಾರ್ಯಕ್ರಮ ಸಂಯೋಜಕರಾಗಿ ಪ್ರತಿ ವರ್ಷ ಮುಂಗಾರು ಕವಿಗೋಷ್ಠಿ,ರಾಜ್ಯೋತ್ಸವ ಕವಿಗೋಷ್ಠಿ ಆಯೋಜಿಸುತ್ತಿದ್ದಾರೆ,ಅಲ್ಲದೇ ಚುಟುಕು ಸಾಹಿತ್ಯ ಪರಿಷತ್ತು ಪುತ್ತೂರು ತಾಲೂಕು ಇದರ ಕಾರ್ಯದರ್ಶಿಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಪುತ್ತೂರು ತಾಲೂಕು ನಡೆಸುವ ಗ್ರಾಮ ಸಾಹಿತ್ಯ ಸಂಭ್ರಮ ಸಂಚಾಲಕರಾಗಿ 20 ಸರಣಿ ಕಾರ್ಯಕ್ರಮಗಳಲ್ಲಿ ಸುಮಾರು 3200 ವಿದ್ಯಾರ್ಥಿಗಳಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವೇದಿಕೆ ಕಲ್ಪಿಸಿಕೊಟ್ಟ ಹಿರಿಮೆ ಇವರದ್ದು.

320 ಕ್ಕಿಂತಲೂ ಹೆಚ್ಚು ಯುವ ಮತ್ತು ಹಿರಿಯ ಸಾಹಿತ್ಯ ಮನಗಳಿಗೆ ಕವಿಗೋಷ್ಠಿಯ ವೇದಿಕೆ ಒದಗಿಸಿ ಕೊಟ್ಟಿರುವ ಇವರನ್ನು ಗುರುತಿಸಿ 2023ರ ಪುತ್ತೂರು ತಾಲೂಕು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇವರ ಸಾಹಿತ್ಯ ಮತ್ತು ಸಂಘಟನೆ ಕ್ಷೇತ್ರದ ಸಾಧನೆಗಾಗಿ ವಿವಿಧ ಸಂಸ್ಥೆಗಳು ಇವರನ್ನು ಗೌರವಿಸಿದ್ದಾರೆ.

2022ರಲ್ಲಿ ಇವರ ಚೊಚ್ಚಲ ಕವನ ಸಂಕಲನ "ಸ್ವಪ್ನಗಳ ತೇರು" ಬಿಡುಗಡೆಗೊಂಡಿದೆ.

ಎರಡನೇ ಕೃತಿ ಹನಿದನಿ ಕವನ ಸಂಕಲನ ಬಿಡುಗಡೆಯಾಗಿದೆ. ಇವರ ಸಾಹಿತ್ಯದ ಸೋಮವಾರ ಸಂತೆಗ್ ತುಳು ಹಾಗು ಪುತ್ತೂರು ಮಹಾಲಿಂಗೇಶ್ವರ ದೇವರ ಕುರಿತಾದ ಬಿಲ್ವಾರ್ಚನೆ ಕನ್ನಡ ಭಕ್ತಿ ದೃಶ್ಯಗೀತೆ ಬಿಡುಗಡೆಗೊಂಡು ಜನಮನ್ನಣೆಗಳಿಸಿದೆ.

1.11.25 ರಂದು ಮೊಳಗಲಿ ಕನ್ನಡದ ಕಹಳೆ ಎಂಬ ಕನ್ನಡ ನಾಡಗೀತೆ ಬಿಡುಗಡೆಯಾಗಿದೆ.

ಕಳೆದ ಒಂದು ವರ್ಷದಿಂದ ಚಿಗುರೆಲೆ ಸಾಹಿತ್ಯ ಬಳಗ ಪುತ್ತೂರು ಇದರ ಸಂಯೋಜಕರಾಗಿ 168 ಕಲಿಕಾರ್ಥಿಗಳಿಗೆ ಹಾಯ್ಕು, ರುಬಾಯಿ, ಲಿಮೆರಿಕ್, ಚುಟುಕು, ಬಿಲ್ಲವನ, ಸಪ್ತ ಸ್ವರ ಕವನ, ಜಡೆಗವನ, ಚಿಟ್ಕಥೆ, ಒತ್ತಕ್ಷರವಿಲ್ಲದ ಕವನ, ಚಿತ್ರಕ್ಕೊಂದು ಕವನ, ಆಧುನಿಕ ವಚನ ಮುಂತಾದ ಪ್ರಕಾರಗಳನ್ನ ವಾರದ ಸಾಹಿತ್ಯ ಚಟುವಟಿಕೆಯಾಗಿ ನಡೆಸುತ್ತಿದ್ದಾರೆ.

ಅಲ್ಲದೇ ತಾನು ಕೂಡಾ ಕರ್ನಾಟಕ ಸಾಹಿತ್ಯ ಸಂಭ್ರಮ ವೇದಿಕೆ ಮೂಡಿಗೆರೆ ನಡೆಸುವ ರಾಜ್ಯಮಟ್ಟದ ಆನ್ಲೈನ್ ಸಾಹಿತ್ಯ ಚಟುವಟಿಕೆಯಲ್ಲಿ ಭಾಗವಹಿಸಿ ವಿವಿಧ ಸ್ಥಾನ ಗಳಿಸಿದ್ದಾರೆ."ತಾನು ಸಾಹಿತ್ಯದಲ್ಲಿ ಸಾಧನೆ ಮಾಡಲು ಕಾರಣೀಭೂತರಾದ ದಿ. ಚಿದಾನಂದ ಕಾಮತ್ ಕಾಸರಗೋಡು, ಪುತ್ತೂರು ಉಮೇಶ್ ನಾಯಕ್ ಹಾಗು ಚಿಗುರೆಲೆ ಸಾಹಿತ್ಯ ಬಳಗ ಪುತ್ತೂರು ಸದಾ ಸ್ಮರಿಸುತ್ತಾರೆ ". ಸಾಹಿತ್ಯ ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡಿದಾಗ ಸಮಾಜ ಸುಂದರ ಎನ್ನುವ ಇವರ ಸಾಹಿತ್ಯ ಪಯಣ ಮುಂದುವರಿದು ಎಲ್ಲೆಡೆ ಹೆಸರು ಪಸರಿಸಲಿ. ಸಾಧನೆ ನಿಂತ ನೀರಾಗದೆ ಹರಿವ ನದಿಯಾಗಲಿ ಎಂಬ ಆಶಯ ನಮ್ಮದು.

# ಗೋಮಾತೆ (ವಿಶ್ವಮಾತೆ)
## ||ಗಾವೋ ವಿಶ್ವಸ್ಯ ಮಾತರಃ||



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಗೋಮಾತೆ ವಿಶ್ವಮಾತೆಯಾಗಿ ನಮ್ಮಲ್ಲಿ ಮಹತ್ವವಿದೆ. ಗೋಮಾತೆಯ ಮಹತ್ವ ಹಿಂದೂ ಸಂಪ್ರದಾಯದಲ್ಲಿ ಮುಂದುವರೆದು ಪ್ರಸಿದ್ಧವಾಗಿದೆ. ಶ್ರೀ ವೇದವ್ಯಾಸರು ಮಹಾಭಾರತದಲ್ಲಿ ಯುಧಿಸ್ಟರ ಮಹಾರಾಜನಿಗೆ ಗೋವಿನ ಮಹಾತ್ಮೆಯನ್ನು ಗೋಸಾವಿತ್ರಿ ಸ್ತೋತ್ರದಲ್ಲಿ ಬಣ್ಣಿಸುತ್ತ ಗೋವು ವಿರಾಡ್ರೂಪಿ ಭಗವಂತನ ಸ್ವರೂಪವಾಗಿದ್ದು ಎಲ್ಲ ಪಾಪಗಳಿಂದ ಮುಕ್ತನಾಗಲು ,ಭಗವಂತನ ಅನುಗ್ರಹ ಪಡೆಯಲು ಸುಲಭ ಸರಳ ರೀತಿಯಲ್ಲಿ ಆರಾಧಿಸುವ ದೇವತೆಯಾಗಿದೆ ಎಂದು ವಿವರಿಸಿರುವರು. "ಗಾವಾಂ ಅಂಗೇಷು ತಿಷ್ಠಂತಿ ಭುವನಾನಿ ಚತುರ್ದಶ" .ಗೋವಿನ ದೇಹದ ಕಣಕಣದಲ್ಲೂ 14 ಲೋಕಗಳನ್ನು ವ್ಯವಸ್ಥಿತವಾಗಿ ನಡೆಸತಕ್ಕ ಬೇರೆ ಬೇರೆ ಶಾಖೆಯ ಕರ್ತವ್ಯ ಮಾಡತಕ್ಕ ಮೂವತ್ಮೂರು ಕೋಟಿ ದೇವತೆಗಳು ಅನ್ಯಾನ್ಯ ಸ್ಥಳಗಳಲ್ಲಿ ನೆಲಸಿರುತ್ತಾರೆ.ಅಖಿಲ ಬ್ರಹ್ಮಾಂಡವನ್ನು ಒಳಗೊಂಡ ದೇವತೆಗಳು ಆ ವಾಸಸ್ಥಾನವು ಗೋವಿನ ಶರೀರವಾಗಿದ್ದು ಗೋವು ಚಲಿಸುವ ದೇವಾಲಯ ವಾಗಿದೆ. ಗೋವಿನಿಂದಾಗುವ ಪ್ರಯೋಜನ- ವಾರದಲ್ಲಿ ಏಳುಣದಿನವೂ ಗೋವನ್ನು ಪೂಜಿಸುವದು ಸೂಕ್ತ.ಪ್ರತಿದಿನ ಒಂದೊಂದು ವಿಶೇಷತೆಯನ್ನು ಹೊಂದಿರುತ್ತದೆ. ಸೋಮವಾರದಂದು ಹಸುವಿಗೆ ಹುಲ್ಲು,ಆಹಾರ,ಸೊಪ್ಪು,ಬಾಳೇಹಣ್ಣು ನೀಡುವದರಿಂದ ನಮ್ಮ ಮನಸ್ಸು ಮೃದುವಾಗುತ್ತದೆ.ಪಿತೃ ದೋಷ ಕಳಿಯುವದು. ಮಂಗಳವಾರ ಹಸುವಿಗೆ ನೀರು,ಆಹಾರ ಕೊಡುವದರಿಂದ ವಸತಿ,ಭೂಮಿ ಖರೀದಿಗೆ ಅವಕಾಶ ಕಲ್ಪಿಸಿಕೊಡುತ್ತದೆ.ಬುಧವಾರ ಆಹಾರ ನೀಡಿದರೆ ವೃತ್ತಿ ಜೀವನದಲ್ಲಿ ಪ್ರಗತಿ ಉಂಟಾಗುತ್ತದೆ.ಗುರುವಾರ ಅಕ್ಕಿ ,ಗಂಜಿ ನೀಡಿದರೆ ಪೂರ್ವ ಜನ್ಮದ ದೋಷ ಕಳೆಯುವದು.ಶುಕ್ರವಾರ ಪೂಜಿಸುವದರಿಂದ ಲಕ್ಷ್ಮಿ ಕಟಾಕ್ಷವಾಗುವದು.ಶನಿವಾರ ಆಹಾರ ನೀಡಿದರೆ ಬಡತನ ಕಳೆಯುವದು.

ಗೋವಿಗೆ ಆಹಾರ,ಅನ್ನ,ನೀರು ನೀಡಿದರೆ ಸಾವಿರ ಜನಕ್ಕೆ ಅನ್ನದಾನ ಮಾಡಿದ ಪುಣ್ಯ ಬರುವದು.

ಮಾನವ ಕೋಟಿಗೆ ಅಮೃತದಂತಹ ಹಾಲುಣಿಸುವ ಮಾತೆ ಗೋವು,ಗೋಮೂತ್ರ,ತುಪ್ಪ ,ಬೆಣ್ಣೆ ,ಮಜ್ಜಿಗೆಮೊಸರುಗಳಿಂದ ಜೀವನ ಸ್ವಾಸ್ಥ್ಯ ನಿರ್ಮಿಸುವ ಸಂಜೀವಿನಿ ಗೋವು.ತನ್ನ ಉಸಿರಾಟ ಸ್ಪರ್ಶ ದರ್ಶನಗಳಿಂದ ಪ್ರಕೃತಿ ಮಂಡಲವನ್ನೇ ಪಾವಗೊಳಿಸುವ ಜಗದುಪಕಾರಿಯಾಗಿದೆ ಗೋವು. ಅಂತಹ ಗೋವನ್ನು ಪೂಜಿಸಿ,ಪ್ರಾರ್ಥಿಸೋಣ.





Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,